ಶುಕ್ರವಾರ, ನವೆಂಬರ್ 12, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 313 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
‘ಕಸ್ತೂರ್ ಗಾಂಧಿ’ ಆಗಿ ಮೂರು ಷೇಡ್‌ಗಳಲ್ಲಿ ಕಿಶೋರ್ ಜೊತೆ ಕಾಣಿಸಿಕೊಂಡ ಹರಿಪ್ರಿಯಾ ಹೀಗಿದ್ದಾರೆ

ಶ್ರೀಕಿ: ₹ 6,000 ಕೋಟಿ ದೋಚಿರುವ ಶಂಕೆ 10
ಬಡ್ತಿಗೆ ಲಂಚ, ಪಿಂಚಣಿಗೆ ಕಮಿಷನ್! 4
33 ವರ್ಷದಿಂದ ಒಂದೇ ಕುಟುಂಬಕ್ಕೆ ಟಿಕೆಟ್! 10


ಸೆನ್ಸೆಕ್ಸ್	ನಿಫ್ಟಿ	₹/$
59,919	17,873	74.52

ಬಿಟ್‌ಕಾಯಿನ್ ಹಗರಣದ ವಿವರಣೆ ಪಡೆಯದ ಕೇಂದ್ರ ನಾಯಕರು:ಸಿ.ಎಂ

‘ಆರೋಪ ನಿರ್ಲಕ್ಷಿಸಿ: ಮೋದಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಟ್‌ಕಾಯಿನ್ ಹಗರಣಕ್ಕೆ ಸಂಬಂಧಿಸಿದ ಆರೋಪ, ಪ್ರತ್ಯಾರೋಪದಲ್ಲಿ ತೊಡಗಿರುವ ನಡುವೆಯೇ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಭೇಟಿ ಮಾಡಿದರು. ಈ ವೇಳೆ ಬಿಟ್‌ಕಾಯಿನ್ ಹಗರಣದ ಚರ್ಚೆಯೇ ನಡೆಯಲಿಲ್ಲ ಎಂದು ತಿಳಿಸಿದರು.



‘ಚರ್ಚೆಯ ಸಂದರ್ಭ ಪ್ರಧಾನಿಯವರು ಬಿಟ್‌ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಪ್ರಸ್ತಾಪ ಮಾಡಲಿಲ್ಲ. ಸ್ವತಃ ನಾನೇ ಈ ಕುರಿತು ಪ್ರಸ್ತಾಪಿಸಿದಾಗ, ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೇ ನಿರ್ಲಕ್ಷಿಸುವಂತೆ ಕಿವಿಮಾತು ಹೇಳಿದ್ದಾರೆ’ ಎಂದು ಭೇಟಿಯ ನಂತರ ಸುದ್ದಿಗಾರರಿಗೆ ವಿವರಿಸಿದರು.

‘ಬಿಟ್‌ಕಾಯಿನ್ ಹಗರಣದ ಕುರಿತು ವಿವರಣೆ ಅಥವಾ ಮಾಹಿತಿ ಪಡೆಯುವ ಗೋಜಿಗೆ ಹೋಗದ ಮೋದಿ, ಆಡಳಿತಾತ್ಮಕ ಹಾಗೂ ಅಭಿವೃದ್ಧಿ ಕುರಿತ ವಿಷಯಗಳನ್ನು ಚರ್ಚಿಸಿದರು. ನಾನು ಮುಖ್ಯಮಂತ್ರಿಯಾಗಿ ನೂರು ದಿನಗಳ ಅವಧಿ ಪೂರೈಸಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಆಡಳಿತವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾಗಿ ಶ್ಲಾಘಿಸಿದರಲ್ಲದೆ, ನಿಷ್ಠೆಯಿಂದ ಜನಪರ ಕೆಲಸ ಮಾಡಲು ಸಲಹೆ ನೀಡಿದರು’ ಎಂದರು.

ನಡ್ಡಾ, ಶಾ ಭೇಟಿ: ಬುಧವಾರ ರಾತ್ರಿಯೇ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ವಿಧಾನ ಪರಿಷತ್‌ನ 25 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯ ಬಗ್ಗೆ ಚರ್ಚಿಸಿದ್ದಾಗಿ ಹೇಳಿದ ಬೊಮ್ಮಾಯಿ, ಹಗರಣ ಕುರಿತಂತೆ ಅಮಿತ್ ಶಾ ಅವರೂ ಚಕಾರ ಎತ್ತಲಿಲ್ಲ. ಗೃಹ ಸಚಿವಾಲಯವೇ ಈ ಸಂಬಂಧ ತನಿಖೆಗೆ ಆದೇಶ ನೀಡಿರುವುದರಿಂದ, ಅಗತ್ಯ ಮಾಹಿತಿಯನ್ನು ತನಿಖಾ ಸಂಸ್ಥೆಗಳಿಂದಲೇ ಪಡೆಯುತ್ತಾರೆ ಎಂದು ಸ್ಪಷ್ಟಪಡಿಸಿದರು.

ರೈತರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ‘ಮುಖ್ಯಮಂತ್ರಿ ರೈತ ವಿದ್ಯಾನಿಧಿ’ ಯೋಜನೆ ಅಡಿ ವಿದ್ಯಾರ್ಥಿ ವೇತನ ನೀಡುವ ಸೌಲಭ್ಯದ ಕುರಿತು ವಿವರ ಪಡೆದ ಪ್ರಧಾನಿ, ದೇಶದಾದ್ಯಂತ ಈ ಕಾರ್ಯಕ್ರಮ ವಿಸ್ತರಿಸುವ ಚಿಂತನೆ ಇದೆ ಎಂದೂ ಪ್ರಧಾನಿ ತಿಳಿಸಿದ್ದಾಗಿ ಮುಖ್ಯಮಂತ್ರಿ ಹೇಳಿದರು.

10ನೇ ಪುಟ ನೋಡಿ

ಶ್ರೀಕೃಷ್ಣಗೆ ಜಾಮೀನು ಸಿಕ್ಕಿದ್ದು ಹೇಗೆ?



ಬೆಂಗಳೂರು: ಬಿಟ್‌ಕಾಯಿನ್ ಹ್ಯಾಕಿಂಗ್‌ನಂತಹ ಗಂಭೀರ ಸ್ವರೂಪದ ಅಪರಾಧ ಪ್ರಕರಣದ ಆರೋಪಿ ಶ್ರೀಕೃಷ್ಣನಿಗೆ ಜಾಮೀನು ಸಿಕ್ಕಿದ್ದು ಹೇಗೆ? ಆರೋಪಿಯ ಜಾಮೀನಿಗೆ ಖಾತರಿ ನೀಡಿದವರು ಮತ್ತು ಆತನ ಪರ ವಾದ ಮಂಡಿಸಿದ ವಕೀಲರು ಯಾರು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಪ್ರಧಾನಿಯವರು ಅಮೆರಿಕಕ್ಕೆ ಭೇಟಿ ನೀಡಿದ್ದಾಗ ಈ ಪ್ರಕರಣದ ಬಗ್ಗೆ ಮಾಹಿತಿ ಸಿಕ್ಕಿದೆ. ಮುಜುಗರ ಅಗಿರುವ ಕಾರಣಕ್ಕೆ ಇಡೀ ಪ್ರಕರಣವನ್ನು ಅವರು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿದೆ. ಭಾರತದ ಮಾನ ಹರಾಜು ಆಗಬಾರದು ಎಂಬ ಉದ್ದೇಶದಿಂದ ಒಂದಿಷ್ಟು ಜನರ ಮಾಹಿತಿಯನ್ನು ಗೋಪ್ಯವಾಗಿಟ್ಟಿರುವ ಸಾಧ್ಯತೆ ಇದೆ. ಆದಷ್ಟು ಬೇಗ ಜನರಿಗೆ ಸತ್ಯ ತಿಳಿಯಲಿ ಎಂದು ಹೇಳಿದರು.

‘ಈ ಹಗರಣವನ್ನು ಮುಚ್ಚಿಹಾಕುವ ಯತ್ನ ನಡೆಯುತ್ತಿದೆ ಎಂಬ ಅನುಮಾನ ದಟ್ಟವಾಗಿದೆ. ಸರ್ಕಾರದ ಪರ ವಕೀಲರು ಯಾವ ರೀತಿ ವಾದ ಮಂಡಿಸಿದ್ದಾರೆ ಎನ್ನುವುದೂ ಮುಖ್ಯ. ಇಲ್ಲಿ ಯಾರಿಂದ ಯಾರ ರಕ್ಷಣೆ ಆಗಿದೆ’ ಎಂದು ಕೇಳಿದರು.

10ನೇ ಪುಟ ನೋಡಿ

ಏಪ್ರಿಲ್‌ನಲ್ಲೇ ಇಂಟರ್‌ಪೋಲ್‌ಗೆ ಪತ್ರ

ಶ್ರೀಕೃಷ್ಣ ಭಾಗಿಯಾಗಿರುವ ಬಿಟ್‌ಕಾಯಿನ್ ಹಗರಣ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಿಸಿಕೊಂಡಿರುವುದರಿಂದ ಇಂಟರ್‌ಪೋಲ್ ಮೂಲಕ ಸೂಕ್ತ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ರಾಜ್ಯದ ಇಂಟರ್‌ಪೋಲ್ ಸಮನ್ವಯ ಅಧಿಕಾರಿಯಾಗಿರುವ ಸಿಐಡಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಏಪ್ರಿಲ್ 28ರಂದು ಪತ್ರ ಬರೆದಿದ್ದರು.

ಇದೇ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯಕ್ಕೆ ತನಿಖಾ ವರದಿ, ಮಹಜರು ದಾಖಲೆಗಳನ್ನು ಮಾರ್ಚ್ 3ರಂದು ಸಲ್ಲಿಸಲಾಗಿತ್ತು. ಜಾರಿ ನಿರ್ದೇಶನಾಲಯದ ಉಪ ನಿರ್ದೇಶಕರು ಫೆಬ್ರುವರಿ 15ರಂದು ಬರೆದಿದ್ದ ಪತ್ರವನ್ನು ಆಧರಿಸಿ ಸಿಸಿಬಿ ಮುಖ್ಯಸ್ಥ ಸಂದೀಪ್ ಪಾಟೀಲ ಈ ದಾಖಲೆಗಳನ್ನು ಹಸ್ತಾಂತರಿಸಿದ್ದರು. ಎರಡೂ ಪತ್ರಗಳು ಈಗ ಬಹಿರಂಗವಾಗಿವೆ.

24 ತಾಸಿನಲ್ಲೇ ಟ್ರಾನ್ಸ್‌ಫಾರ್ಮರ್ ಬದಲು

• ಎಸ್.ರವಿಪ್ರಕಾಶ್

ಬೆಂಗಳೂರು: ವಿದ್ಯುತ್ ಪರಿವರ್ತಕಗಳು (ಟ್ರಾನ್ಸ್‌ಫಾರ್ಮರ್) ಕೆಟ್ಟು ಹೋಗಿ ವಾರ ಅಥವಾ ತಿಂಗಳುಗಟ್ಟಲೆ ಅಂಧಕಾರದಲ್ಲಿ ಕಳೆಯುವ ಗ್ರಾಮೀಣ, ಮಲೆನಾಡು ಮತ್ತು ಗುಡ್ಡಗಾಡು ಪ್ರದೇಶಗಳ ಜನರ ಗೋಳಾಟಕ್ಕೆ ಇದೇ ಡಿಸೆಂಬರ್‌ನಿಂದ ಮುಕ್ತಿ ಸಿಗಲಿದೆ.

ಈ ಪ್ರದೇಶಗಳ ಜತೆಗೆ ನಗರ ಪ್ರದೇಶವೂ ಸೇರಿ ರಾಜ್ಯದ ಯಾವುದೇ ಪ್ರದೇಶದಲ್ಲಿ ಸುಟ್ಟು ಹೋದ ಅಥವಾ ಕೆಟ್ಟು ಹೋದ ವಿದ್ಯುತ್ ಪರಿವರ್ತಕಗಳನ್ನು ಕೇವಲ 24 ಗಂಟೆಗಳಲ್ಲೇ ಎಸ್ಕಾಂಗಳು ಬದಲಿಸಲಿವೆ.

ಇದಕ್ಕಾಗಿ ಐದು ಎಸ್ಕಾಂಗಳ ವ್ಯಾಪ್ತಿಯ 160 ಕಡೆಗಳಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಬ್ಯಾಂಕ್‌ಗಳು ಮತ್ತು 162 ಕಡೆಗಳಲ್ಲಿ ರಿಪೇರಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪರಿವರ್ತಕಗಳು ಕೆಟ್ಟು ಹೋಗಿ ಕೃಷಿ ಕಾರ್ಯಕ್ಕೆ ಅಡಚಣೆಯಾಗುವ ಸಮಸ್ಯೆಗೆ ಹೊಸ ವ್ಯವಸ್ಥೆಯಿಂದ ಪರಿಹಾರ ಸಿಗಲಿದೆ.



ಟ್ರಾನ್ಸ್‌ಫಾರ್ಮರ್ ಬ್ಯಾಂಕ್

ಒಂದು ವೇಳೆ ಟ್ರಾನ್ಸ್‌ಫಾರ್ಮರ್ ಬದಲಿಸಲು ಯಾವುದೇ ಅಧಿಕಾರಿ ಹಣ ಕೇಳಿದರೆ ಅವರನ್ನು ಅಮಾನತು ಮಾಡಲಾಗುವುದು ಎಂದು ಕೆಪಿಟಿಸಿಎಲ್ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ವಿಶೇಷ

ಟ್ರಾನ್ಸ್‌ಫಾರ್ಮರ್ ಹಾಳಾದರೆ ಅದನ್ನು ಬದಲಿಸಲು ಮತ್ತು ರಿಪೇರಿ ಮಾಡುವುದಕ್ಕೆ ಸಂಬಂಧಿಸಿದಂತೆ ಸೂಕ್ತ ನಿಯಮಾವಳಿ ಇರಲಿಲ್ಲ. ಹೀಗಾಗಿ ಟ್ರಾನ್ಸ್‌ಫಾರ್ಮರ್ ಕೆಟ್ಟು ಹೋದರೂ ತಿಂಗಳುಗಟ್ಟಲೆ ಸರಿಪಡಿಸುತ್ತಿರಲಿಲ್ಲ. ಇದರಿಂದ ಕೃಷಿ ಪಂಪ್‌ಸೆಟ್‌ಗಳೂ ಕೆಟ್ಟು ಹೋಗುತ್ತಿದ್ದವು. ಹಾಳಾದ ಟ್ರಾನ್ಸ್‌ಫಾರ್ಮರ್ ಅನ್ನು ರೈತರೇ ಟ್ರ್ಯಾಕ್ಟರ್‌ನಲ್ಲಿ ಹಾಕಿಕೊಂಡು ತರುವ ಪರಿಸ್ಥಿತಿ ಇತ್ತು.

ದೂರವಾಣಿಯಲ್ಲಿ ದೂರು ದಾಖಲಿಸಬಹುದು

- ಪರಿವರ್ತಕಗಳ ಬದಲಾವಣೆಗೆ ಇನ್ನು ಮುಂದೆ ಅರ್ಜಿ ಬರೆಯಬೇಕಾಗಿಲ್ಲ. ಬೆಸ್ಕಾಂಗೆ ದೂರವಾಣಿ ಮೂಲಕ ದೂರು ದಾಖಲಿಸಿದ 24 ಗಂಟೆಗಳಲ್ಲಿ ಬದಲಾವಣೆ
- ಪರಿವರ್ತಕ ಬದಲಾವಣೆಗೆ ಹಣ ಕೇಳಿದರೆ ಜೆಇ ಅಥವಾ ಇಇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.
- ಕೃಷಿ ಭೂಮಿಯಲ್ಲಿ ಫಸಲಿನ ಮಧ್ಯೆ ಪರಿವರ್ತಕ ಇದ್ದರೆ ವಾಹನ ಒಯ್ದು ಬದಲಿಸುವುದು ಕಷ್ಟ. ಅಂತಹ ಸಂದರ್ಭದಲ್ಲಿ ಸ್ವಲ್ಪ ತಡವಾಗಿ ಬದಲಿಸಲಾಗುವುದು. ಬೆಳೆಗೆ ಹಾನಿ ಆಗಬಾರದು ಎಂಬುದೇ ಇದರ ಉದ್ದೇಶ.

ಇನ್ನು ಮುಂದೆ ಇಲಾಖೆ ಸಿಬ್ಬಂದಿಯೇ ಅಲ್ಲಿಗೆ ಹೋಗಿ ಅಳವಡಿಸುತ್ತಾರೆ ಎಂದು ಹೇಳಿದರು.

ಟ್ರಾನ್ಸ್‌ಫಾರ್ಮರ್ ಬ್ಯಾಂಕ್: ಪ್ರತಿ ಬ್ಯಾಂಕ್‌ನಲ್ಲೂ ಸುಮಾರು 200 ರಿಂದ 300 ಟ್ರಾನ್ಸ್‌ಫಾರ್ಮರ್‌ಗಳನ್ನು ಸಂಗ್ರಹಿಸಿಡಲಾಗುತ್ತದೆ. ಒಂದು ವೇಳೆ ಒಂದೇ ಸಲಕ್ಕೆ 200 ಪರಿವರ್ತಕಗಳು ಕೆಟ್ಟು ಹೋದರೂ ತಕ್ಷಣವೇ ಬದಲಾವಣೆ ಮಾಡಬಹುದು. ರಾಜ್ಯದ ಉದ್ದಗಲಕ್ಕೂ ಇಂತಹ ಬ್ಯಾಂಕ್‌ಗಳು ಇರುವುದರಿಂದ ತ್ವರಿತಗತಿಯಲ್ಲಿ ಸಾಗಿಸಿ ಬದಲಾವಣೆ ಮಾಡಬಹುದು ಎಂದು ತಿಳಿಸಿದರು.

ರಿಪೇರಿ ಕೇಂದ್ರಗಳೂ ಕೂಡ ಸದಾ ಸನ್ನದ್ಧ ಸ್ಥಿತಿಯಲ್ಲಿ ಇರುತ್ತವೆ. ಆಯಾ ಪ್ರದೇಶಗಳಲ್ಲಿ ಇರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ರಿಪೇರಿ ಕೇಂದ್ರಗಳನ್ನೂ ಸಿದ್ಧಪಡಿಸಲಾಗಿದೆ. ಕೆಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು ತಕ್ಷಣವೇ ಸರಿಪಡಿಸಿ ಮರುಬಳಕೆಗೆ ಸಜ್ಜುಗೊಳಿಸಲಾಗುವುದು ಎಂದರು.

ಟ್ರಾನ್ಸ್‌ಪಾರ್ಮರ್‌ಗಳ ಸಾಗಣೆಗೆ ಪ್ರತ್ಯೇಕ ವಾಹನಗಳನ್ನು ಖರೀದಿಸಲಾಗುವುದು. ಆಯಾ ವಿಭಾಗದ ಭೌಗೋಳಿಕ ಅಗತ್ಯಕ್ಕೆ ತಕ್ಕಂತೆ 2 ರಿಂದ 8 ವಾಹನಗಳನ್ನು ಖರೀದಿಸಬಹುದು. ರೈತರು ಟ್ರ್ಯಾಕ್ಟರ್‌ಗಳಲ್ಲಿ ಹಾಕಿಕೊಂಡು ಬರುವುದನ್ನು ತಪ್ಪಿಸಲು ಈ ವ್ಯವಸ್ಥೆ ಮಾಡಲಾಗಿದೆ ಎಂದರು.

ಕ್ರಿಕೆಟ್: ಫೈನಲ್‌ಗೆ ಆಸ್ಟ್ರೇಲಿಯಾ

ದುಬೈ(ಪಿಟಿಐ): ಮಾರ್ಕಸ್ ಸ್ಟೊಯಿನಿಸ್ ಮತ್ತು ಮ್ಯಾಥ್ಯೂ ವೇಡ್ ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಆಸ್ಟ್ರೇಲಿಯಾ ತಂಡವು ಗುರುವಾರ ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ಎದುರು 5 ವಿಕೆಟ್‌ಗಳಿಂದ ಗೆದ್ದಿತು. ಆಸ್ಟ್ರೇಲಿಯಾ ತಂಡವು ಇದೇ 14ರಂದು ನಡೆಯಲಿರುವ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. 13

ಆನ್‌ಲೈನ್ ಗೇಮ್: ಬಲವಂತದ ಕ್ರಮ ಇಲ್ಲ

ಬೆಂಗಳೂರು: ‘ಆನ್‌ಲೈನ್ ಗೇಮಿಂಗ್ ಕಂಪನಿಗಳ ವಿರುದ್ಧ ಸದ್ಯಕ್ಕೆ ಯಾವುದೇ ರೀತಿಯ ಬಲವಂತದ ಕ್ರಮ ಕೈಗೊಳ್ಳುವುದಿಲ್ಲ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಕರ್ನಾಟಕ ಪೊಲೀಸ್ ತಿದ್ದುಪಡಿ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ, ’ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್’ ಸೇರಿದಂತೆ ಇತರರು ಸಲ್ಲಿಸಿರುವ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರ ‘ರಮ್ಮಿ ಫೆಡರೇಷನ್’ ಪರ ವಾದ ಮಂಡಿಸಿದ ವಕೀಲ ಅಭಿಷೇಕ್ ಮನುಸಿಂಘ್ವಿ, ‘ಸ್ಕಿಲ್ ಮತ್ತು ಛಾನ್ಸ್’ ಎಂಬ ಎರಡು ಆಟಗಳಿದ್ದು, ಸ್ಕಿಲ್ ಗೇಮ್ ತಡೆಯಲಾಗದು’ ಎಂದರು. ಸಮಯದ ಕೊರತೆ ಕಾರಣ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶಿಕ್ಷಣದಲ್ಲಿ ರಾಜಕೀಯ ಬೆರಕೆ ಏಕೆ?


ಕನ್ನಡ ಕಡ್ಡಾಯ: ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜುಗಳಲ್ಲಿ ಕನ್ನಡ ಭಾಷೆ ಕಲಿಕೆ ಕಡ್ಡಾಯ ಮಾಡಿರುವ ಸರ್ಕಾರದ ಕ್ರಮಕ್ಕೆ ಮತ್ತೆ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ‘ಶಿಕ್ಷಣದಲ್ಲಿ ರಾಜಕೀಯವನ್ನು ಏಕೆ ಬೆರೆಸುತ್ತೀರಿ’ ಎಂದು ಪ್ರಶ್ನಿಸಿದೆ.

ಪದವಿ ಕಾಲೇಜುಗಳಲ್ಲಿ ಕನ್ನಡ ಭಾಷೆ ಕಲಿಕೆ ಕಡ್ಡಾಯ ಮಾಡಿರುವ ಸರ್ಕಾರದ ಆದೇಶ ಪ್ರಶ್ನಿಸಿ, ‘ಸಂಸ್ಕೃತ ಭಾರತಿ ಟ್ರಸ್ಟ್’, ‘ಹಯಗ್ರೀವ ಟ್ರಸ್ಟ್’, ‘ವ್ಯೋಮಾ ಲಿಂಗ್ವಿಸ್ಟಿಕ್ ಲ್ಯಾಬ್ ಫೌಂಡೇಷನ್’ ಹಾಗೂ ‘ಸಂಸ್ಕೃತ ಪ್ರಾಧ್ಯಾಪಕ ಸಂಘ’ಗಳು ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಎಸ್. ನಾಗಾನಂದ ಅವರು, ‘ಉನ್ನತ ಶಿಕ್ಷಣ ವ್ಯಾಸಂಗದಲ್ಲಿ ಕಡ್ಡಾಯವಾಗಿ ಕನ್ನಡ ಕಲಿಯಬೇಕೆಂಬ ಅಂಶ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಇಲ್ಲ. ವಿದ್ಯಾರ್ಥಿಗಳು ತಮಗೆ ಇಷ್ಟಬಂದ ಯಾವುದೇ ವಿಷಯ ಅಥವಾ ಕೋರ್ಸ್ ಅನ್ನು ಅಧ್ಯಯನ ಮಾಡುವ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ’ ಎಂದರು.



ಇದನ್ನು ಅಲ್ಲಗಳೆದ ಸರ್ಕಾರದ ಪರ ವಕೀಲರು ಕನ್ನಡ ಕಲಿಕೆಯನ್ನು ಬಲವಾಗಿ ಸಮರ್ಥಿಸಿಕೊಂಡರು. ‘ಹತ್ತನೇ ತರಗತಿ ನಂತರ ಕನ್ನಡ ವಿಷಯವನ್ನು ವ್ಯಾಸಂಗ ಮಾಡದೇ ಇರುವವರಿಗೆ ಕನ್ನಡ ಕಲಿಯಲು ಇದರಿಂದ ಅನುಕೂಲವಾಗಿದೆ. ಈ ವಿಧಾನ ಯಶಸ್ವಿಯೂ ಆಗಿದೆ. ಕಳೆದ ಹತ್ತು ವರ್ಷಗಳಿಂದ ಎಂಜಿನಿಯರ್ ವ್ಯಾಸಂಗದಲ್ಲಿ ಕನ್ನಡ ಕಲಿಯುವ ವಿಧಾನ ಪರಿಚಯಿಸಲಾಗಿದೆ. ಅಂತೆಯೇ, ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ಸರ್ಕಾರಕ್ಕೆ ಕನ್ನಡ ಕಡ್ಡಾಯಗೊಳಿಸುವ ಅವಕಾಶವಿದೆ’ ಎಂದರು.

‘ರಾಜ್ಯದಲ್ಲಿ ನೆಲೆಸುವವರಿಗೆ ಸ್ಥಳೀಯರೊಂದಿಗೆ ಚರ್ಚಿಸಲು ಅನುಕೂಲವಾಗುವಷ್ಟು ಮಾತ್ರವೇ ಕನ್ನಡ ಕಲಿಸಲಾಗುತ್ತದೆ. ಮೊದಲನೇ ತರಗತಿ ವಿದ್ಯಾರ್ಥಿಗಳಿಗೆ ಹೇಳಿಕೊಡುವ ಪಠ್ಯವನ್ನೇ ಇಲ್ಲಿ ಬೋಧಿಸಲಾಗುತ್ತದೆ. ಇದು ಕೇವಲ ಕನ್ನಡ ಕಲಿಕೆಯನ್ನು ಪ್ರೋತ್ಸಾಹಿಸುವ ವಿಧಾನ. ಅದೂ ಆರು ತಿಂಗಳ ಕಾಲ ಮಾತ್ರ. ಅಷ್ಟಕ್ಕೂ, ಈಗಾಗಲೇ ಪಠ್ಯ ಪುಸ್ತಕ ಪೂರೈಸಲಾಗಿದೆ’ ಎಂದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಪೀಠ, ‘ಉನ್ನತ ಶಿಕ್ಷಣಕ್ಕಾಗಿ ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಕನ್ನಡ ಕಲಿಯಬೇಕು ಎಂಬ ಅಂಶವು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಎಲ್ಲಿದೆ, ಶಿಕ್ಷಣದಲ್ಲಿ ಏಕೆ ರಾಜಕೀಯ ಬೆರೆಸುತ್ತೀರಿ’ ಎಂದು ಪ್ರಶ್ನಿಸಿತು.

‘ನಮ್ಮ ತಿಳಿವಳಿಕೆ ಪ್ರಕಾರ ಕನ್ನಡ ಕಲಿಕೆಗೆ ಪ್ರೋತ್ಸಾಹಿಸಬಹುದೇ ಹೊರತು ಕಡ್ಡಾಯ ಮಾಡುವಂತಿಲ್ಲ ಎಂಬುದು ರಾಷ್ಟ್ರೀಯ ಶಿಕ್ಷಣ ನೀತಿ. ಹಾಗಾದರೆ, ಕನ್ನಡ ಭಾಷೆ ಕಲಿಕೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಡ್ಡಾಯ ಮಾಡಿರುವ ಕುರಿತು ಮತ್ತು ಉನ್ನತ ಶಿಕ್ಷಣದಲ್ಲಿ ಕನ್ನಡ ಕಡ್ಡಾಯ ಮಾಡಲು ಅವಕಾಶ ಎಲ್ಲಿದೆ ಎಂಬುದರ ಬಗ್ಗೆ ಸ್ಪಷ್ಟಪಡಿಸಿ’ ಎಂದು ಸೂಚಿಸಿ, ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

ಕೋರಿಕೆ ಏನು?: ‘ರಾಜ್ಯದಲ್ಲಿ ಎಲ್ಲ ಪದವಿ ಕಾಲೇಜುಗಳಲ್ಲಿ ಕನ್ನಡ ಭಾಷೆ ಕಲಿಕೆ ಕಡ್ಡಾಯ ಮಾಡಿ ರಾಜ್ಯ ಸರ್ಕಾರ 2021ರ ಆಗಸ್ಟ್ 7ರಂದು ಹೊರಡಿಸಿರುವ ಆದೇಶ, ಭಾಷೆ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಸ್ವಾತಂತ್ರ್ಯಕ್ಕೆ ಅಡ್ಡಿಯುಂಟು ಮಾಡುತ್ತದೆ. ಆದ್ದರಿಂದ, ಈ ಆದೇಶ ರದ್ದುಪಡಿಸಬೇಕು’ ಎಂಬುದು ಅರ್ಜಿದಾರರ ಕೋರಿಕೆ.



ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಹಮ್ಮಿಕೊಂಡಿದ್ದ ಕೃಷಿಮೇಳಕ್ಕೆ ಗುರುವಾರ ಭೇಟಿ ನೀಡಿದ ಜನರು ಬೆಳೆಗಳನ್ನು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರಿನಲ್ಲಿ ಜಿಕೆವಿಕೆ ಆವರಣದಲ್ಲಿ ಕೃಷಿ ಮೇಳ ಆರಂಭ

ಆಕರ್ಷಣೆಯ ಕೇಂದ್ರವಾದ ಬೋಯರ್ ತಳಿಯ ಮೇಕೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸುಮಾರು ₹7 ಲಕ್ಷ ಮೌಲ್ಯದ ಬೋಯರ್ ತಳಿಯ ಮೇಕೆ ಬೆಂಗಳೂರು ಕೃಷಿ ಮೇಳದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿತ್ತು.

ಒಂದು ವರ್ಷದಲ್ಲೇ ಸಂತಾನೋತ್ಪತ್ತಿಗೆ ಸಜ್ಜಾಗುವ ಮತ್ತು ಅತ್ಯಂತ ವೇಗವಾಗಿ ಬೆಳವಣಿಗೆಯಾಗುವ ಬೋಯರ್ ತಳಿಯ ಮೇಕೆಗಳನ್ನು ಸಾಕಿರುವ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಬಳಿಯ ತರಬೇನಹಳ್ಳಿ ಗ್ರಾಮದ ರೈತ ಉಮೇಶ್ ಕೃಷಿ ಮೇಳಕ್ಕೆ ಮೇಕೆಗಳೊಂದಿಗೆ ಬಂದಿದ್ದಾರೆ.

ದಕ್ಷಿಣ ಆಫ್ರಿಕಾ ಮೂಲದ ಈ ತಳಿಯ ಮೇಕೆಗಳನ್ನು ದೇಶದ ಹಲವೆಡೆ ಸಾಕಲಾಗುತ್ತಿದೆ. ಪುಣೆಯಿಂದ ಈ ತಳಿಯ ಒಂದು ಗಂಡು ಮತ್ತು ಎರಡು ಹೆಣ್ಣು ಮರಿಗಳನ್ನು ಉಮೇಶ್ ಅವರು ₹2.50 ಲಕ್ಷಕ್ಕೆ ಖರೀದಿಸಿ ತಂದಿದ್ದರು. ಈಗ ಅವುಗಳ ಸಂಖ್ಯೆ 15ಕ್ಕೆ ಏರಿಕೆಯಾಗಿದೆ.

‘ಕೇರಳದ ತಲಶ್ಶೇರಿ ತಳಿಯ ಮೇಕೆಗಳಿಗೆ ಬೋಯರ್ ತಳಿಯ ಗಂಡು ಮೇಕೆಯಿಂದ ಸಂಕರ ಮಾಡಿಸಲಾಗುತ್ತಿದೆ. ಹುಟ್ಟುವ ಮೇಕೆ ಮರಿ ಕೇವಲ ಆರು ತಿಂಗಳಲ್ಲೇ 20 ಕೆ.ಜಿಯಿಂದ 30 ಕೆ.ಜಿ ತೂಕ ಬರಲಿದೆ. ಸಂಕರಗೊಂಡು ಹುಟ್ಟಿರುವ ಗಂಡು ಮೇಕೆಯಿಂದ ಬೇರೆ ತಳಿಯ ಮೇಕೆಗಳಿಗೂ ಸಂಕರ ಮಾಡಿಸಬಹುದಾಗಿದೆ. ಆದರೆ, ಅವು ಆರು ತಿಂಗಳ ಅವಧಿಯಲ್ಲಿ 18 ಕೆ.ಜಿಯಿಂದ 20 ಕೆ.ಜಿಯಷ್ಟು ತೂಕ ಬರಲಿವೆ. ನೇರವಾಗಿ ಬೋಯರ್ ಮೇಕೆಯಿಂದ ಸಂಕರಗೊಂಡು ಹುಟ್ಟುವ ಮರಿಗಳ ಬೆಳವಣಿಗೆಯ ವೇಗ ಹೆಚ್ಚು’ ಎಂದು ಉಮೇಶ್ ವಿವರಿಸಿದರು.



ಬೋಯರ್ ತಳಿಯ ಮೇಕೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

‘ಈ ಮೇಕೆಯನ್ನು ಮಾಂಸಕ್ಕಿಂತಲೂ ಹೆಚ್ಚಾಗಿ ಸಂತಾನೋತ್ಪತ್ತಿಗೆ ಬಳಸಲಾಗುತ್ತಿದೆ. ಈ ತಳಿಯನ್ನು ಅಭಿವೃದ್ಧಿಪಡಿಸಲು ಇಷ್ಟಪಡುವ ರೈತರು ಕರೆತರುವ ಆಡುಗಳಿಗೆ ಸಂಕರ ಮಾಡಿಕೊಡಲಾಗುತ್ತಿದೆ’ ಎಂದು ಅವರು ತಿಳಿಸಿದರು.

‘ರಾಜ್ಯದ ಹವಾಮಾನಕ್ಕೆ ಹೊಂದಿಕೊಳ್ಳುವ ಈ ಮೇಕೆಯಿಂದ ಸಂಕರಕ್ಕೆ ಹೆಚ್ಚಿನ ಬೇಡಿಕೆ ಇದೆ. ಈ ತಳಿಯ ಮೇಕೆ ಸಾಕಾಣಿಕೆ ಅತ್ಯಂತ ಸುಲಭ. ಇವುಗಳಿಗೆ ಬೇರೆ ಯಾವುದೇ ಹೆಚ್ಚುವರಿ ಪೌಷ್ಟಿಕಾಂಶ ಬೇಕಿಲ್ಲ. ಇವುಗಳೂ ಇತರೆ ಮೇಕೆಗಳಂತೆ ಹುಲ್ಲು, ಸೊಪ್ಪು ತಿನ್ನಲಿವೆ. ಬೋಯರ್ ಮೂಲ ತಳಿಯ ಮೇಕೆಗಳನ್ನು ಕೆ.ಜಿ ಲೆಕ್ಕದಲ್ಲೇ ಮಾರಾಟ ಮಾಡಲಾಗುತ್ತದೆ. ಪ್ರತಿ ಕೆ.ಜಿಗೆ ₹1,500ರಿಂದ ₹3,500 ತನಕ ಬೆಲೆ ಇದೆ. ತಲಶ್ಶೇರಿ ತಳಿಯ ಮೇಕೆಗೆ ಸಂಕರಗೊಂಡು ಹುಟ್ಟುವ ಮರಿಗಳ ಬೆಲೆ ಕೆ.ಜಿಗೆ ₹550 ಇದೆ’ ಎಂದು ವಿವರಿಸಿದರು.

‘ಮೂಲ ತಳಿಯ ಒಂಬತ್ತು ತಿಂಗಳ ಮರಿ 65 ಕೆ.ಜಿ ತೂಕ ಹೊಂದಿದೆ. ಅತ್ಯಂತ ಬಲಿಷ್ಠವಾಗಿ ಬೆಳೆಯುತ್ತಿರುವ ಈ ಮೇಕೆಗೆ ₹7 ಲಕ್ಷ ಮೌಲ್ಯ ಎಂದು ಅಂದಾಜು ಮಾಡಿದ್ದೇವೆ’ ಎಂದು ಉಮೇಶ್ ತಿಳಿಸಿದರು.

ಇನ್ನಷ್ಟು ಸುದ್ದಿಗಳು 3A

ಮಳಿಗೆ ಸಿಗದೆ ಪರದಾಟ

ಬೋಯರ್ ತಳಿಯ ಮೇಕೆಯನ್ನು ಮೇಳಕ್ಕೆ ತಂದಿರುವ ಉಮೇಶ್ ಅವರಿಗೆ ಮಳಿಗೆ ಒದಗಿಸದೆ ದಿನವಿಡೀ ಅವುಗಳನ್ನು ಗೂಡ್ಸ್ ವಾಹನದ ಮೇಲೆಯೇ ನಿಲ್ಲಿಸಿಕೊಂಡಿದ್ದರು.

‘ಉತ್ಕೃಷ್ಟ ತಳಿಯ ಮೇಕೆಗಳನ್ನು ಮೇಳಕ್ಕೆ ಬರುವ ರೈತರಿಗೆ ಪರಿಚಯಿಸುವ ಉದ್ದೇಶದಿಂದ ಬಂದಿದ್ದೇವೆ. ಜನ ಕೂಡ ಆಸಕ್ತಿಯಿಂದ ಇವುಗಳನ್ನು ನೋಡುತ್ತಿದ್ದಾರೆ. ಆದರೆ, ಮಳಿಗೆಯನ್ನೇ ಒದಗಿಸಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು. ಸುರಿವ ಮಳೆಯಲ್ಲಿ ಕೆಲಕಾಲ ಮೇಕೆಗಳೊಂದಿಗೆ ಆವರಣದಲ್ಲೇ ಕುಳಿತು ಪ್ರತಿಭಟನೆ ವ್ಯಕ್ತಪಡಿಸಿದರು.

ನಗರದಲ್ಲಿ ದಿನವಿಡೀ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲದಿನಗಳಿಂದ ಬಿಡುವು ನೀಡಿದ್ದ ಮಳೆ ಪುನಃ ಶುರುವಾಗಿದ್ದು, ನಗರದಲ್ಲಿ ಗುರುವಾರ ಇಡೀ ದಿನ ಜಿಟಿ ಜಿಟಿ ಮಳೆ ಸುರಿಯಿತು.

ಚಳಿಗಾಲ ಸಮೀಪಿಸುತ್ತಿದ್ದಂತೆ ಕ್ರಮೇಣ ಚಳಿಯೂ ಹೆಚ್ಚಾಗುತ್ತಿದ್ದು, ಇದರ ನಡುವೆಯೇ ಮಳೆಯೂ ಸುರಿಯುತ್ತಿದೆ. ನಗರದಲ್ಲಿ ಮೋಡ ಕವಿದ ವಾತಾವರಣ ಕಾಣಿಸಿಕೊಂಡಿದ್ದು, ಮುಂದಿನ ಎರಡು ದಿನ ಇದೇ ಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ.

ಗುರುವಾರ ಬೆಳಿಗ್ಗೆಯಿಂದಲೇ ಮೋಡಗಳ ಮರೆಯಲ್ಲಿ ಸೂರ್ಯ ಕಾಣಿಸಲಿಲ್ಲ. ಮೋಡ ಕವಿದ ವಾತಾವರಣದಲ್ಲೇ ಜಿಟಿ ಜಿಟಿ ಮಳೆ ಆರಂಭವಾಯಿತು. ನಿರಂತರ ಮಳೆಯಿಂದಾಗಿ, ನಗರದ ಬಹುತೇಕ ಪ್ರದೇಶಗಳ ಕಾಲುವೆ ಹಾಗೂ ರಸ್ತೆಗಳಲ್ಲಿ ನೀರು ಹರಿಯಿತು.


ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ, ಯಶವಂತಪುರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಗಿರಿನಗರ, ಬಸವನಗುಡಿ, ಬನಶಂಕರಿ, ಕೆಂಗೇರಿ, ರಾಜರಾಜೇಶ್ವರಿನಗರ, ಕುಮಾರಸ್ವಾಮಿ ಲೇಔಟ್, ಹನುಮಂತನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ತುಂತುರು ಮಳೆಯ ಸಿಂಚನವಾಯಿತು.

ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ವಸಂತನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಎಂ.ಜಿ.ರಸ್ತೆ, ಅಶೋಕನಗರ, ಎಚ್‌ಎಎಲ್, ವಿವೇಕನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಜಿಟಿ ಜಿಟಿ ಮಳೆ ಇತ್ತು.

ಬೆಚ್ಚಗಿನ ಉಡುಪು ಧರಿಸಿ ರಸ್ತೆಗಿಳಿದ ಜನ: ನಸುಕಿನಿಂದಲೇ ಜಿಟಿ ಜಿಟಿ ಮಳೆ ಆರಂಭವಾಗಿತ್ತು. ಕಚೇರಿ ಹಾಗೂ ಇತರೆ ಕೆಲಸಕ್ಕೆಂದು ಮನೆಯಿಂದ ಹೊರಗೆ ಹೋಗಲು ಸಜ್ಜಾಗಿದ್ದ ಜನ, ಮಳೆ ಕಂಡು ಕೆಲ ಹೊತ್ತು ಕಾದರು. ಅಷ್ಟಾದರೂ ಮಳೆ ಕಡಿಮೆಯಾಗಲಿಲ್ಲ.

ಬೆಚ್ಚಗಿನ ಉಡುಪು ಧರಿಸಿದ ಜನ, ಸುರಿಯುವ ಮಳೆಯಲ್ಲೇ ರಸ್ತೆಗಿಳಿದರು. ದ್ವಿಚಕ್ರ ವಾಹನಗಳನ್ನು ಮನೆಯಿಂದ ಹೊರಡು ಕೆಲಸದ ಸ್ಥಳ ತಲುಪಿದರು. ಮಾರ್ಗಮಧ್ಯೆ ಮಳೆ ಜೋರಾದ ಸಂದರ್ಭದಲ್ಲಿ, ರಸ್ತೆ ಬದಿ ವಾಹನಗಳನ್ನು ನಿಲ್ಲಿಸಿ ಮಳಿಗೆ ಹಾಗೂ ಕೆಳ ಸೇತುವೆಗಳಲ್ಲಿ ಆಶ್ರಯ ಪಡೆದ ದೃಶ್ಯಗಳು ಕಂಡುಬಂದವು.

3ನೇ ಪುಟ ನೋಡಿ



ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಜಿಟಿ ಜಿಟಿ ಮಳೆ ಸುರಿಯುತ್ತಿದ್ದ ವೇಳೆಯಲ್ಲಿ ಕಂಡ ದೃಶ್ಯ – ಪ್ರಜಾವಾಣಿ ಚಿತ್ರ

‘ಯೆಲ್ಲೋ ಅಲರ್ಟ್’

‘ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ರಾಜ್ಯದ 12 ಜಿಲ್ಲೆಗಳಲ್ಲಿ 2 ದಿನ ನಿರಂತರವಾಗಿ ಮಳೆಯಾಗುವ ಸಾಧ್ಯತೆಗಳಿವೆ’ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಳೆಯಾಗುವ ಹಿನ್ನೆಲೆಯಲ್ಲಿ ದಕ್ಷಿಣ ಮತ್ತು ಉತ್ತರ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ‘ಯೆಲ್ಲೋ ಅಲರ್ಟ್’ ಸಹ ಘೋಷಣೆ ಮಾಡಲಾಗಿದೆ.

ನಕಲಿ ದಾಖಲೆ ಸಲ್ಲಿಸಿ ಎಸ್‌ಬಿಐಗೆ ₹ 15 ಕೋಟಿ ವಂಚನೆ

ಎಫ್‌ಐಆರ್ ದಾಖಲಿಸಿದ ಸಿಬಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿ ಒಡೆತನಕ್ಕೆ ಸಂಬಂಧಿಸಿದ ನಕಲಿ ದಾಖಲೆಗಳನ್ನು ಸಲ್ಲಿಸಿ ಎಸ್‌ಬಿಐನಿಂದ ₹ 15 ಕೋಟಿ ಸಾಲ ಪಡೆದು ವಂಚಿಸಿದ ಆರೋಪದ ಮೇಲೆ ನಗರದ ಅಂಕಿತ್ ಬಯೋ ಫ್ಯೂಯಲ್ಸ್ ಕಂಪನಿ ಹಾಗೂ ಅದರ ನಿರ್ದೇಶಕರು ಸೇರಿದಂತೆ ಏಳು ಮಂದಿ ವಿರುದ್ಧ ಸಿಬಿಐ ಸೋಮವಾರ ಎಫ್‌ಐಆರ್ ದಾಖಲಿಸಿದೆ.

ತುಮಕೂರಿನಲ್ಲಿ ಜೈವಿಕ ಇಂಧನದ ಕಚ್ಚಾವಸ್ತು ಉತ್ಪಾದನಾ ಘಟಕ ಆರಂಭಿಸುವ ಯೋಜನೆಗೆ ಎಸ್‌ಬಿಐನಿಂದ ಅಂಕಿತ್ ಬಯೋ ಫ್ಯೂಯಲ್ಸ್ ಕಂಪನಿ 2015ರಲ್ಲಿ ₹ 15 ಕೋಟಿ ಸಾಲ ಪಡೆದಿತ್ತು. ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯಲ್ಲಿ ಪುಲ್ಲಂರಾಜು ಮತ್ತು ಕೆ. ಸುಬ್ಬರಾಜು ಎಂಬುವವರ ಹೆಸರಿನಲ್ಲಿ 56 ಎಕರೆ 36 ಗುಂಟೆ ಜಮೀನು ಇದೆ ಎಂಬ ದಾಖಲೆಗಳನ್ನು ಸಲ್ಲಿಸಿ ಈ ಸಾಲ ಪಡೆಯಲಾಗಿತ್ತು.

ಕಂಪನಿಯು ಸಾಲ ಮರುಪಾವತಿಸುವುದು ವಿಳಂಬ ಮಾಡಿದ ಬಳಿಕ ಬ್ಯಾಂಕ್ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು. ರಂಗಾರೆಡ್ಡಿ ಜಿಲ್ಲೆಯಲ್ಲಿ ಪುಲ್ಲಂ ರಾಜು ಮತ್ತು ಕೆ. ಸುಬ್ಬರಾಜು ಹೆಸರಿನಲ್ಲಿ 32 ಎಕರೆ 21 ಗುಂಟೆ ಜಮೀನು ಮಾತ್ರ ಇರುವುದು ಪತ್ತೆಯಾಗಿತ್ತು. ಅದರ ನೈಜ ಮೌಲ್ಯ ₹ 5.84 ಕೋಟಿ ಮಾತ್ರ. ಆದರೆ, ₹ 30 ಕೋಟಿ ಮೌಲ್ಯವಿದೆ ಎಂಬ ಉತ್ಪ್ರೇಕ್ಷಿತ ವರದಿಗಳನ್ನು ಸಲ್ಲಿಸಲಾಗಿತ್ತು. ಅಲ್ಲದೇ, ಇದೇ ಜಮೀನನ್ನು ಐಎಫ್‌ಸಿಐ ವೆಂಚರ್ ಕ್ಯಾಪಿಟಲ್ ಫಂಡ್ ಕಂಪನಿಗೆ ಅಡಮಾನವಿರಿಸಿ ಸಾಲ ಪಡೆಯಲಾಗಿತ್ತು ಎಂಬುದು ಎಸ್‌ಬಿಐ ನಡೆಸಿದ ಆಂತರಿಕ ತನಿಖೆಯಲ್ಲಿ ಪತ್ತೆಯಾಗಿತ್ತು.

ಎಸ್‌ಬಿಐನ ಆಡಳಿತ ಕಚೇರಿಯ ಉಪ ಪ್ರಧಾನ ವ್ಯವಸ್ಥಾಪಕ ಎಂ.ವಿ.ಆರ್. ಮುರಳಿ ಕೃಷ್ಣ ನೀಡಿದ ದೂರನ್ನು ಆಧರಿಸಿ ಅಂಕಿತ್ ಬಯೋ ಫ್ಯೂಯಲ್ಸ್‌ನ ಸಂಸ್ಥಾಪಕ ಪಾಲುದಾರ ತುಮಕೂರಿನ ಕೆ. ವೆಂಕಟೇಶ್, ಬೆಂಗಳೂರಿನ ಹೈ ಪ್ರೊಟೆಕ್ ಪ್ರಾಜೆಕ್ಟ್ಸ್ ಅಂಡ್ ಫೆಸಿಲಿಟಿ ಮ್ಯಾನೇಜ್‌ಮೆಂಟ್‌ನ ನಿರ್ದೇಶಕ ಜೆ. ಹಾಲೇಶ್, ಹೆಬ್ಬಾಳ ನಿವಾಸಿ ಅರುಣ್ ಡಿ. ಕುಲಕರ್ಣಿ, ರಂಗಾರೆಡ್ಡಿ ಜಿಲ್ಲೆಯ ಗುಂತಪಲ್ಲಿಯ ಜಿ. ಪುಲ್ಲಂ ರಾಜು, ಕೆ. ಸುಬ್ಬರಾಜು, ತುಮಕೂರಿನ ಚೇಳೂರು ನಿವಾಸಿ ತಿರುಮಲಯ್ಯ ತಿಮ್ಮಪ್ಪ, ಬೆಂಗಳೂರಿನ ಡಾಲರ್ಸ್ ಕಾಲೋನಿಯ ಜಿ.ಬಿ. ಆರಾಧ್ಯ ಮತ್ತು ಇತರರ ವಿರುದ್ಧ ಸಿಬಿಐ ಭ್ರಷ್ಟಾಚಾರ ನಿಗ್ರಹ ದಳದ ಬೆಂಗಳೂರು ಘಟಕ ಎಫ್‌ಐಆರ್ ದಾಖಲಿಸಿದೆ.

ಶುಕ್ರವಾರದ ಉಷ್ಣಾಂಶ 24° ಗರಿಷ್ಠ 18° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಶನಿವಾರ	ಭಾನುವಾರ	ಸೋಮವಾರ
28° 19°	28° 19°	28° 19°

ಸೂರ್ಯೋದಯ: 6.16 ಸೂರ್ಯಾಸ್ತ : 5:50 ಚಂದ್ರೋದಯ: ಮ. 12:39 ಚಂದ್ರಾಸ್ತ: ರಾ. 12

ಗುರುವಾರದ ಹವಾಮಾನ : ಗರಿಷ್ಠ 20° ಕನಿಷ್ಠ 17°

ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲದ ಅಡಿಯಲ್ಲಿ ಕಾಮಗಾರಿ ಮತ್ತು ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ನ.12ರಂದು ವಿವಿಧ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯ ವಾಗಲಿದೆ.

ಸ್ಥಳಗಳು: ಎಂ.ಎಸ್. ರಾಮಯ್ಯ ಸಿಟಿ, ಜೆ.ಆರ್.ಹೈಟ್ಸ್ ಮುಖ್ಯ ರಸ್ತೆ, ಗೊಟ್ಟಿಗೆರೆ ಮುಖ್ಯ ರಸ್ತೆ, ರಾಘವನ ಪಾಳ್ಯ.

ಸೂರ್ಯಸಿಟಿ ಮೊದಲ ಮತ್ತು ಎರಡನೇ ಹಂತ, ಹಿನಕ್ಕಿ, ರಾಜಪುರ, ರಾಮಕೃಷ್ಣಪುರ, ರಿಚ್‌ಮಂಡ್, ಜೆ.ಆರ್. ಗ್ರೀನ್ ಪಾರ್ಕ್, ಆನೇಕಲ್ ಮುಖ್ಯ ರಸ್ತೆ, ನಾಗಯನಹಳ್ಳಿ,

ದೊಡ್ಡಬಸ್ತಿ, ಟಿ.ಜಿ. ಪಾಳ್ಯ, ಟಿ.ಪಿ. ಮೈನ್ ರೋಡ್, ಸಿದ್ಧಗಂಗಾ ಲೇಔಟ್, ಮಾರಣ್ಣಲೇಔಟ್, ಆಂದ್ರಹಳ್ಳಿ ಮುಖ್ಯ ರಸ್ತೆ, ಹೊಸಹಳ್ಳಿ ಸರ್ಕಾರಿ ಶಾಲೆ, ಕೆಂಗೇರಿ, ಬಿಡಿಎ ಏರಿಯಾ 1ನೇ ಬ್ಲಾಕ್, ಕೋಡಿಪಾಳ್ಯ, ಕೆ.ಎಲ್.ಇ. ಕಾಲೇಜ್, ಸರ್ ಎಂ.ವಿ. ಮೂರನೇ ಮತ್ತು 5ನೇ ಬ್ಲಾಕ್, ಭವಾನಿ ನಗರ, ಅಮ್ಮ ಆಶ್ರಮ, ಹನುಮಂತನಗರ, ಬ್ಯೂಗಲ್ ರಾಕ್ ರಸ್ತೆ, ಚಾಮರಾಜ ಪೇಟೆ, ಮುತ್ತುರಾಯ ನಗರ, ವಿಜಯ ನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಕಾಮಾಕ್ಷಿಪಾಳ್ಯ, ನಾಗರಬಾವಿ 9ನೇ ಬ್ಲಾಕ್, ಗಂಗೊಂಡನಹಳ್ಳಿ, ಲಕ್ಷ್ಮಣ ನಗರ, ಸಂಜೀವಿನಿ ನಗರ, ವಿಶ್ವೇಶ್ವರ ನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಪಾಪರೆಡ್ಡಿಪಾಳ್ಯ, ಪ್ರಶಾಂತ ನಗರ, ಅಮರಜ್ಯೋತಿ ನಗರ, ಪಂಚಶೀಲ ನಗರ.

ಬರಗೂರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಳವಳ

‘ಯಾವುದನ್ನೂ ವಿಮರ್ಶೆ ಮಾಡಲಾಗದ ಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿನಿಮಾ, ಸಾಹಿತ್ಯ, ರಂಗಭೂಮಿ ಕೇವಲ ಮನರಂಜನೆಯ ಸಾಧನಗಳಲ್ಲ. ಅವುಗಳು ವಿಮರ್ಶಾತ್ಮಕ ಒಳನೋಟವನ್ನು ಕಟ್ಟಿಕೊಡುತ್ತವೆ. ಆದರೆ, ಈಗ ಯಾವುದನ್ನೂ ವಿಮರ್ಶಾತ್ಮಕವಾಗಿ ಮಾಡಲಾಗದ ದುರ್ಬರ ಸ್ಥಿತಿ ದೇಶದಲ್ಲಿದೆ’ ಎಂದು ಸಿನಿಮಾ ನಿರ್ದೇಶಕ ಗಿರೀಶ ಕಾಸರವಳ್ಳಿ ಕಳವಳ ವ್ಯಕ್ತಪಡಿಸಿದರು.

ಬರಗೂರು ಪ್ರತಿಷ್ಠಾನವು ಗುರುವಾರ ಏರ್ಪಡಿಸಿದ್ದ ‘ನಾಡೋಜ ಬರಗೂರು ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

‘ಸಿನಿಮಾ ನಿರ್ದೇಶಕರಲ್ಲೂ ದೊಡ್ಡ ಮಟ್ಟದ ಹೆದರಿಕೆ ಹುಟ್ಟಿಕೊಂಡಿದೆ. ನಿರ್ದೇಶಕನಾಗಿ ನಾನು ಸೋಲುತ್ತಿದ್ದೇನೋ ಅಥವಾ ಪ್ರೇಕ್ಷಕ ಸೋಲುತ್ತಿದ್ದಾನೋ ತಿಳಿಯದ ಗೊಂದಲದಲ್ಲಿ ನಾನಿದ್ದೇನೆ. ಈ ಭಯದಲ್ಲಿ ಕೆಲವೊಮ್ಮೆ ಸಿನಿಮಾ ಮಾಡುವುದೇ ಬೇಡ ಎಂದೂ ಅನಿಸಿಬಿಡುತ್ತದೆ. ಆದರೆ, ಈ ಪ್ರಶಸ್ತಿ ನನಗೆ ಹೊಸ ಎದೆಗಾರಿಕೆಯನ್ನು ನೀಡಿದೆ’ ಎಂದರು.

ಪ್ರಶಸ್ತಿ ಪ್ರದಾನ ಮಾಡಿದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ ದಾಸ್, ‘ಟೀಕೆಯನ್ನು ಹತ್ತಿಕ್ಕಲು ದೇಶದ್ರೋಹ ಕಾಯ್ದೆಯನ್ನು ದುರ್ಬಳಕೆ ಮಾಡಲಾಗುತ್ತಿದೆ. ಪ್ರತಿಭಟಿಸುವವರ ವಿರುದ್ಧ ಯುಎಪಿ ಕಾಯ್ದೆಯನ್ನು ಅಸ್ತ್ರವಾಗಿ ಬಳಸಲಾಗುತ್ತಿದೆ. ಸರ್ಕಾರದ ವಿರುದ್ಧ ಮಾತನಾಡಿದರೆ ತಮ್ಮನ್ನು ಜೈಲಿಗೆ ಹಾಕಬಹುದು, ಎನ್‌ಕೌಂಟರ್ ಮಾಡಬಹುದು ಎಂಬ ಭಯವೂ ಜನರನ್ನು ಕಾಡುತ್ತಿದೆ’ ಎಂದು ಹೇಳಿದರು.

ಸಿನಿಮಾ ಕ್ಷೇತ್ರದ ಸಾಧನೆಗಾಗಿ ಗಾಯಕಿ ಬಿ.ಕೆ.ಸುಮಿತ್ರಾ ಅವರಿಗೆ, ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಲೇಖಕ ಚಂದ್ರಕಾಂತ ಪೋಕಳೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತ್ಯ ಕ್ಷೇತ್ರದ ಪ್ರಶಸ್ತಿಗೆ ಆಯ್ಕೆಯಾಗಿದ್ದ ಸಾರಾ ಅಬೂಬಕರ್ ಸಮಾರಂಭಕ್ಕೆ ಗೈರಾಗಿದ್ದರು. ಪ್ರಶಸ್ತಿಯು ತಲಾ ₹25 ಸಾವಿರ ನಗದನ್ನು ಒಳಗೊಂಡಿದೆ.



ಕಾರ್ಯಕ್ರಮದಲ್ಲಿ ಗಾಯಕಿ ಬಿ.ಕೆ.ಸುಮಿತ್ರಾ, ಲೇಖಕ ಚಂದ್ರಕಾಂತ ಪೋಕಳೆ ಹಾಗೂ ಸಿನಿಮಾ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರಿಗೆ ‘ನಾಡೋಜ ಬರಗೂರು ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಸುಂದರರಾಜ ಅರಸ್, ಅಧ್ಯಕ್ಷ ಮುರಳೀಧರ ಹಾಲಪ್ಪ, ಬರಗೂರು ರಾಮಚಂದ್ರಪ್ಪ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ಹಾಗೂ ಗಾಯಕಿ ಶಮಿತಾ ಮಲ್ನಾಡ್ ಇದ್ದಾರೆ – ಪ್ರಜಾವಾಣಿ ಚಿತ್ರ

‘ಪೆಗಾಸಸ್ ತಂತ್ರಾಂಶ ಬಳಕೆ– ಮೌನವೇಕೆ?’

‘ಗೂಢಚಾರಿಕೆಗೆ ಬಳಸುವ ಪೆಗಾಸಸ್ ತಂತ್ರಾಂಶವನ್ನು ಸರ್ಕಾರಗಳು ಮಾತ್ರ ಖರೀದಿಸಲು ಅವಕಾಶವಿದೆ. ಈ ತಂತ್ರಾಂಶ ಬಳಸಿ ಗೂಢಚಾರಿಕೆ ಮಾಡುವುದು ತಪ್ಪಲ್ಲ. ಆದರೆ, ನಿಯಮಾನುಸಾರವಾಗಿ ಈ ತಂತ್ರಾಂಶವನ್ನು ಬಳಸಲಾದ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸುವ ವಿಚಾರದಲ್ಲಿ ಸರ್ಕಾರ ಮೌನ ವಹಿಸಿದ್ದು ಏಕೆ’ ಎಂದು ನ್ಯಾ.ನಾಗಮೋಹನ ದಾಸ್ ಪ್ರಶ್ನಿಸಿದರು.

‘ಮೆಟ್ರೊ: ಕಾಲಾವಧಿ ವಿಸ್ತರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾತ್ರಿ ಕರ್ಫ್ಯೂ ತೆರವಾಗಿರುವುದರಿಂದ ನಗರದಲ್ಲಿ ಮೆಟ್ರೊ ಸಂಚಾರದ ಅವಧಿಯನ್ನು ವಿಸ್ತರಿಸಬೇಕು ಎಂದು ಸಿಪಿಎಂ ಆಗ್ರಹಿಸಿದೆ.

ಬೆಳಿಗ್ಗೆ 5 ರಿಂದ ಮಧ್ಯರಾತ್ರಿ 12ರವರೆಗೆ ಮೆಟ್ರೊ ರೈಲುಗಳು ಸಂಚರಿಸುವಂತೆ ಕ್ರಮಕೈಗೊಳ್ಳಬೇಕು. ಇದರಿಂದ, ಪ್ರಯಾಣಿಕರಿಗೂ ಮತ್ತು ಬಿಎಂಆರ್‌ಸಿಎಲ್‌ಗೂ ಅನುಕೂಲವಾಗಲಿದೆ ಎಂದು ತಿಳಿಸಿದೆ.

ಈಗಾಗಲೇ ವ್ಯಾಪಾರ ವಹಿವಾಟು ಮತ್ತು ಉದ್ಯಮಗಳ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿವೆ. ಜನರ ಸಂಚಾರವು ಹೆಚ್ಚಾಗಿದೆ. ಹೀಗಾಗಿ, ರೈಲು ಸಂಚಾರದ ಸಮಯವನ್ನು ವಿಸ್ತರಿಸುವುದು ತುರ್ತು ಅಗತ್ಯ ಎಂದು ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಎನ್. ಪ್ರತಾಪ್ ಸಿಂಹ್ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್. ಉಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶುಲ್ಕ ಸಂಗ್ರಹ ಹಿಂತಿರುಗಿಸಲು ಒತ್ತಾಯ: ಬಿಬಿಎಂಪಿ ಬೈಲಾ ಅಡಿ ಕಾನೂನು ರೂಪಿಸದೆಯೇ ವಿವಿಧ ಶುಲ್ಕಗಳ ಹೆಸರಿನಲ್ಲಿ ಸಂಗ್ರಹಿಸಿರುವ ₹2 ಸಾವಿರ ಕೋಟಿ ಮೊತ್ತವನ್ನು ನಾಗರಿಕರಿಗೆ ವಾಪಸ್ ನೀಡಬೇಕು ಎಂದು ಪ್ರತಾಪ್ ಸಿಂಹ್ ಮತ್ತು ಉಮೇಶ್ ಒತ್ತಾಯಿಸಿದ್ದಾರೆ.

ಈ ಶುಲ್ಕ ಸಂಗ್ರಹಿಸಿರುವುದು ಕಾನೂನು ಬಾಹಿರ ಎಂದು ಹೈಕೋರ್ಟ್ ತೀರ್ಪು ನೀಡಿದೆ. ಆದರೂ, ಶಾಸನ ರೂಪಿಸಿ ಅಕ್ರಮ ಶುಲ್ಕ ಸಂಗ್ರಹವನ್ನು ಸಕ್ರಮ ಮಾಡಿಕೊಳ್ಳಲು ಬಿಜೆಪಿ ಸರ್ಕಾರ ಮುಂದಾಗಿರುವ ಕ್ರಮ ಖಂಡನೀಯ ಎಂದು ಹೇಳಿದ್ದಾರೆ.

₹ 828 ಕೋಟಿ ದುರ್ಬಳಕೆ: 2018–19ನೇ ಸಾಲಿನ ಆಡಳಿತ ವರದಿಯಲ್ಲಿ ಬಯಲಾಗಿರುವ ₹828 ಕೋಟಿ ಮೊತ್ತದ ದುರ್ಬಳಕೆ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

ಲೆಕ್ಕಪತ್ರದ ವರದಿಯ ಶಿಫಾರಸ್ಸಿನಂತೆ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಂದ ₹144 ಕೋಟಿಯನ್ನು ಕೂಡಲೇ ವಸೂಲಿ ಮಾಡಬೇಕು. ಬಿಬಿಎಂಪಿ ವಾರ್ಷಿಕ ಹಣಕಾಸು ವಹಿವಾಟಿನ ಲೆಕ್ಕ ಪರಿಶೋಧನೆಯ ವರದಿಯಲ್ಲಿ 1964-65 ರಿಂದ 2017-18ರವರೆಗೆ ಒಟ್ಟು ₹6441.76 ಕೋಟಿ ವಹಿವಾಟಿಗೆ ಆಕ್ಷೇಪ ವ್ಯಕ್ತವಾಗಿದೆ ಮತ್ತು ₹2657.1 ಕೋಟಿ ವಸೂಲಾತಿಗೆ ಸೂಚಿಸಲಾಗಿದೆ. ಆದರೆ, ಇದುವರೆಗೆ ವಸೂಲಾತಿಗೆ ಕ್ರಮಕೈಗೊಂಡಿಲ್ಲ ಎಂದು ದೂರಿದ್ದಾರೆ.

ಸುದ್ದಿ 2 ನಿಮಿಷ

ಸಫಾಯಿ ಮಿತ್ರ ಸುರಕ್ಷಾ ಸವಾಲು: ಬಿಬಿಎಂಪಿ ಆಯ್ಕೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ಕೇಂದ್ರ ಸರ್ಕಾರ ಏರ್ಪಡಿಸಿದ್ದ ಸ್ವಚ್ಛ ಸರ್ವೇಕ್ಷಣ್ 2021ರ ‘ಸಫಾಯಿ ಮಿತ್ರ ಸುರಕ್ಷಾ ಸ್ಪರ್ಧೆ’ಯಲ್ಲಿ ಬಿಬಿಎಂಪಿಯು ಪ್ರಶಸ್ತಿಗೆ ಆಯ್ಕೆಯಾಗಿದೆ.

ನವದೆಹಲಿಯ ವಿಜ್ಞಾನ ಭವನದಲ್ಲಿ ನ. 20 ರಂದು ಏರ್ಪಡಿಸಿರುವ ಸ್ವಚ್ಛ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಸ್ವಚ್ಛ ಸರ್ವೇಕ್ಷಣ್ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಯಾವ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ ಎಂಬುದನ್ನು ರಾಷ್ಟ್ರಪತಿಯವರೇ ಪ್ರಕಟಿಸಲಿದ್ದಾರೆ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ರಾಜ್ಯ ಸರ್ಕಾರದ ಸ್ವಚ್ಛ ಭಾರತ ಅಭಿಯಾನದ ನಿರ್ದೇಶಕರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿಯು ‘ಸಫಾಯಿ ಮಿತ್ರ ಸುರಕ್ಷಾ ಸ್ಪರ್ಧೆ’ಯ ಪ್ರಶಸ್ತಿಗೆ ಆಯ್ಕೆ ಆಗಿರುವುದಕ್ಕೆ ಪಾಲಿಕೆಯ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹರ್ಷ ವ್ಯಕ್ತಪಡಿಸಿದ್ದಾರೆ.

ನೇಚರ್ಸ್ ಬ್ಯಾಸ್ಕೆಟ್‌ನಲ್ಲಿ ಅಮೆರಿಕ ಆಹಾರ ಉತ್ಸವ



ಬೆಂಗಳೂರು: ಅಮೆರಿಕದ ಕೃಷಿ ಇಲಾಖೆಯ ಕೃಷಿ ಸೇವೆಗಳ ವಿಭಾಗವು (ಎಫ್‌ಎಎಸ್) ನೇಚರ್ಸ್ ಬ್ಯಾಸ್ಕೆಟ್ ಸಹಯೋಗದಲ್ಲಿ ‘ಅಮೆರಿಕದ ರುಚಿ’ ಹೆಸರಿನಲ್ಲಿ ಆಹಾರ ಉತ್ಸವವನ್ನು ಆಯೋಜಿಸಿದೆ.

ಎರಡು ತಿಂಗಳ ಕಾಲ ಎಫ್‌ಎಎಸ್ ಈ ಅಭಿಯಾನ ಕೈಗೊಂಡಿದೆ. ಅಮೆರಿಕದ ಆಯ್ದ ವಿವಿಧ ಭಕ್ಷ್ಯಗಳನ್ನು ಮತ್ತು ಪಾನೀಯಗಳನ್ನು ಸ್ಥಳೀಯರಿಗೆ ಪರಿಚಯಿಸುವುದು ಈ ಉತ್ಸವದ ಉದ್ದೇಶ. ಜತೆಗೆ, ಆಹಾರಕ್ಕೆ ಸಂಬಂಧಿಸಿದ ಉತ್ಪನ್ನಗಳಿಗೆ ಉತ್ತೇಜನ ನೀಡುವುದಾಗಿದೆ.

ಕೋರಮಂಗಲದ 5ನೇ ಬ್ಲಾಕ್‌ನಲ್ಲಿರುವ ನೇಚರ್ಸ್ ಬ್ಯಾಸ್ಕೆಟ್‌ನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಷೆಫ್ ಜೂಹಿ ಗೋಯಲ್ ಅವರು ಪ್ರಾದೇಶಿಕ ಭಕ್ಷ್ಯಗಳನ್ನು ತಯಾರಿಸಿದರು. ಕ್ರ್ಯಾನ್‌ಬೆರ್ರಿ ಪುಲಿಹೊರಾ ಮತ್ತು ಫ್ಯುಷನ್ ದೋಸಾ ಅನ್ನು ಜೂಹಿ ಅವರು ತಯಾರಿಸಿ ಗಮನಸೆಳೆದರು.

‘ಅಮೆರಿಕದ ವಿವಿಧ ಪದಾರ್ಥಗಳನ್ನು ಬಳಸಿಕೊಂಡು ದಕ್ಷಿಣ ಭಾರತದ ವಿವಿಧ ತಿಂಡಿಗಳನ್ನು ತಯಾರಿಸಲಾಯಿತು. ಬೆಂಗಳೂರಿನಲ್ಲಿ ನಡೆಯುತ್ತಿರುವುದರಿಂದ ದಕ್ಷಿಣ ಭಾರತದ ತಿಂಡಿಗಳಿಗೆ ಆದ್ಯತೆ ನೀಡಲಾಗಿದೆ. ಹೀಗಾಗಿಯೇ ಫ್ಯುಷನ್ ದೋಸೆ ತಯಾರಿಸಲಾಯಿತು. ಫ್ಯುಷನ್ ದೋಸಾದ ಜತೆ ಅಮೆರಿಕದ ಸಾಸ್ ಬಳಸಲಾಯಿತು. ರುಚಿಕರವಾದ ಈ ತಿಂಡಿಯು ಗಮನಸೆಳೆಯಿತು’ ಎಂದು ಜೂಹಿ ವಿವರಿಸಿದರು. ಎಫ್‌ಎಎಸ್‌ನ ಹಿರಿಯ ಅಧಿಕಾರಿ ಮಾರಿನೊ ಜೆ. ಬಿಲ್ಲಾರ್ಡ್ ಇದ್ದರು.

14 ವರ್ಷಗಳ ಬಳಿಕ ಸೆರೆಸಿಕ್ಕ ಆರೋಪಿ

ಬೆಂಗಳೂರು: ಅಪಘಾತವನ್ನುಂಟು ಮಾಡಿ ಬೈಕ್ ಸವಾರರೊಬ್ಬರ ಸಾವಿಗೆ ಕಾರಣವಾಗಿದ್ದ ಆರೋಪಿ ಮತಿವಣ್ಣನ್‌ನನ್ನು 14 ವರ್ಷಗಳ ಬಳಿಕ ವಿಜಯನಗರ ಸಂಚಾರ ಪೊಲೀಸರು ಬಂಧಿಸಿದ್ದಾರೆ.

‘2005ರ ಅಕ್ಟೋಬರ್‌ನಲ್ಲಿ ನಡೆದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದ. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ, 2007ರಲ್ಲಿ ಆರೋಪಿಗೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಆದೇಶವಾಗುತ್ತಿದ್ದಂತೆ ಆರೋಪಿ ತಲೆಮರೆಸಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಕಾರು ಚಾಲಕನಾಗಿದ್ದ ತಮಿಳುನಾಡಿನ ತ್ರಿಪುರಾದ ಮತಿವಣ್ಣನ್, ತನ್ನ ಮಾಲೀಕನನ್ನು ಬೆಂಗಳೂರಿಗೆ ಬಿಟ್ಟು ಹೋಗಲು ಕಾರಿನಲ್ಲಿ ಬಂದಿದ್ದಾಗ ಮಾರೇನಹಳ್ಳಿ ಬಳಿ ಅಪಘಾತವನ್ನುಂಟು ಮಾಡಿದ್ದ’ ಎಂದೂ ತಿಳಿಸಿದರು.

ನಿವೇಶನ ಅಕ್ರಮ ಮಾರಾಟ: ಬಂಧನ

ಪ್ರಜಾವಾಣಿ ವಾರ್ತೆ



ನಟರಾಜ್

ಬೆಂಗಳೂರು: 'ಕರ್ನಾಟಕ ಸರ್ಕಾರದ ‘ಡಿ’ ಗ್ರೂಪ್ ನೌಕರರ ಕೇಂದ್ರ ಸಂಘಟನೆಯ ಸೊಸೈಟಿಯ ನಿವೇಶನಗಳನ್ನು ಅಕ್ರಮವಾಗಿ ಮಾರಾಟ ಮಾಡಿ ವಂಚಿಸುತ್ತಿದ್ದ ಆರೋಪದಡಿ, ಸೊಸೈಟಿಯ ಅಧ್ಯಕ್ಷ ಬಿ.ಎಂ. ನಟರಾಜ್‌ನನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ

‘ವಂಚನೆ ಸಂಬಂಧ 8 ಎಫ್‌ಐಆರ್ ದಾಖಲಾಗಿವೆ. ಪುರಾವೆಗಳನ್ನು ಪರಿಶೀಲಿಸಿ ನಟರಾಜ್‌ನನ್ನು ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿ ಸಿ. ಗೋವಿಂದರಾಜ್, ಪ್ರಕರಣವೊಂದರಲ್ಲಿ ಸದ್ಯ ಜೈಲಿನಲ್ಲಿದ್ದಾನೆ. ಆತನನ್ನು ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆಯಬೇಕಿದೆ’ ಎಂದು ಪೊಲೀಸರು ಹೇಳಿದರು.

‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಸೊಸೈಟಿಯಿಂದ ಯಶವಂತಪುರ ಹೋಬಳಿಯ ಶ್ರೀಗಂಧಕಾವಲ್ ಬಳಿಯ ಸರ್ವೆ ನಂ. 30/1ರಲ್ಲಿ ಬಡಾವಣೆ ನಿರ್ಮಿಸಲಾಗಿದೆ. ಅದೇ ಬಡಾವಣೆಯ ನಿವೇಶನಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಆರೋಪ ನಟರಾಜ್ ಮೇಲಿದೆ’ ಎಂದೂ ತಿಳಿಸಿದರು.

‘ಒಂದೇ ನಿವೇಶನವನ್ನು ಹಲವರಿಗೆ ಅಕ್ರಮವಾಗಿ ಮಾರಾಟ ಮಾಡಲಾಗಿದೆ. ಉದ್ಯಾನ ಹಾಗೂ ಮೈದಾನಕ್ಕೆ ಮೀಸಲಿಟ್ಟಿದ್ದ ಜಾಗವನ್ನೂ ನಿವೇಶನವೆಂದು ಹೇಳಿ ಮಾರಲಾಗಿದೆ’ ಎಂದೂ ಹೇಳಿದರು.

₹2.25 ಲಕ್ಷ ವಂಚನೆ: ‘ನಾಗರಬಾವಿಯ ಗಣೇಶ್ ಎಂಬುವರು ತಮ್ಮ ಪತ್ನಿ ಪೂರ್ಣಿಮಾ ಹೆಸರಿನಲ್ಲಿ 2003ರಲ್ಲಿ 30x50 ಅಳತೆಯ ನಿವೇಶನ ಖರೀದಿಸಿದ್ದರು. ಅದಕ್ಕಾಗಿ ₹ 2.25 ಲಕ್ಷ ಪಾವತಿಸಿದ್ದರು. ಆದರೆ, ನಿವೇಶನವಿದ್ದ ಜಾಗ ಪಾರ್ಕಿಂಗ್‌ಗೆ ಮೀಸಲಿಟ್ಟಿದ್ದ ಜಾಗವೆಂಬುದು ಗೊತ್ತಾಗಿತ್ತು’ ಎಂದು ಪೊಲೀಸರು ತಿಳಿಸಿದರು.

‘ತಮಗಾದ ವಂಚನೆಯನ್ನು ಗಣೇಶ್ ಪ್ರಶ್ನಿಸಿದ್ದರು. ಬದಲಿ ನಿವೇಶನ ನೀಡುವುದಾಗಿ ನಟರಾಜ್ ಭರವಸೆ ನೀಡಿದ್ದ. ನಿಗದಿತ ಅವಧಿ ಮುಗಿದರೂ ಯಾವುದೇ ನಿವೇಶನ ನೀಡಿರಲಿಲ್ಲ. ಹಣವನ್ನೂ ವಾಪಸು ಕೊಟ್ಟಿರಲಿಲ್ಲ. ನೊಂದ ಗಣೇಶ್, ಠಾಣೆಗೆ ದೂರು ನೀಡಿದ್ದರು. ಇದಾದ ನಂತರ, 8 ಮಂದಿ ಪ್ರತ್ಯೇಕ ದೂರು ನೀಡಿದ್ದಾರೆ’ ಎಂದೂ ವಿವರಿಸಿದರು.

‘ಪೀಪಲ್ ಟ್ರೀ’ ಆಸ್ಪತ್ರೆಯಲ್ಲಿ ಕ್ರಿಸ್ ಗೋಪಾಲಕೃಷ್ಣನ್ ಹೂಡಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಟಿಎಂಐ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್’ನಲ್ಲಿ ಉದ್ಯಮಿ ಕ್ರಿಸ್ ಗೋಪಾಲಕೃಷ್ಣನ್ ಅವರ ‘ಪ್ರತೀತಿ ಇನ್ವೆಸ್ಟ್‌ಮೆಂಟ್ ಟ್ರಸ್ಟ್’ನ ಹೂಡಿಕೆ ಪ್ರಕ್ರಿಯೆಯು ಗುರುವಾರ ಪೂರ್ಣಗೊಂಡಿದೆ.

ನಗರದಲ್ಲಿ ಪೀಪಲ್ ಟ್ರೀ ಹಾಸ್ಪಿಟಲ್‌ಗಳನ್ನು ಟಿಎಂಐ ಹೆಲ್ತ್‌ಕೇರ್ ಹೊಂದಿದೆ. ವಿಶೇಷ ಮನೋವೈದ್ಯಕೀಯ ಆಸ್ಪತ್ರೆ ಸೇರಿದಂತೆ ನಾಲ್ಕು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಇದು ಹೊಂದಿದೆ. ಪೀಪಲ್ ಟ್ರೀ ಆಸ್ಪತ್ರೆಗಳು 40ಕ್ಕೂ ಹೆಚ್ಚು ವಿಶೇಷ ಸೌಲಭ್ಯಗಳನ್ನು ಹೊಂದಿದೆ. ‘ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಉದ್ದೇಶ ಹೊಂದಿದ್ದೇವೆ. ಕ್ರಿಸ್ ಗೋಪಾಲಕೃಷ್ಣ ಅವರ ಬೆಂಬಲದಿಂದ ಮತ್ತಷ್ಟು ಉತ್ತಮ ಸೇವೆ ನೀಡಲು ಸಾಧ್ಯವಾಗುತ್ತದೆ’ ಎಂದು ಪೀಪಲ್ ಟ್ರೀ ಹಾಸ್ಪಿಟಲ್ಸ್‌ನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ಡಾ. ಜ್ಯೋತಿ ಎಸ್ ನೀರಜಾ ತಿಳಿಸಿದ್ದಾರೆ.

ನಿಧನ ವಾರ್ತೆ

ವಿದ್ವಾನ್ ರಾಮಚಂದ್ರ ಶರ್ಮಾ



ಬೆಂಗಳೂರು: ವಿದ್ವಾನ್ ರಾಮಚಂದ್ರ ಶರ್ಮಾ ತ್ಯಾಗಲಿ (81) ಅವರು ಹೃದಯಾಘಾತದಿಂದಾಗಿ ಬುಧವಾರ ನಿಧನರಾದರು.

ವಿಜಯನಗರ ನಿವಾಸಿಯಾಗಿದ್ದ ಅವರಿಗೆ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಸಿದ್ದಾಪುರ ತಾಲ್ಲೂಕಿನ ರಾಮಚಂದ್ರ ಅವರು ಕನ್ನಡ, ಹಿಂದಿ ಹಾಗೂ ಸಂಸ್ಕೃತದಲ್ಲಿ ಪಾಂಡಿತ್ಯ ಹೊಂದಿದ್ದರು. ಸಂಸ್ಕೃತದ ಶ್ಲೋಕ, ಗೀತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು. ‘ಶನಿವಾರ ಅಂತ್ಯಕ್ರಿಯೆ ನಡೆಸಲಾಗುವುದು’ ಎಂದು ಕುಟುಂಬದವರು ತಿಳಿಸಿದ್ದಾರೆ.

ಡಾ.ಎಂ.ಡಿ.ವಿಕಾಸ್



ರಾಜರಾಜೇಶ್ವರಿನಗರ: ದಂತ ವೈದ್ಯ ಡಾ.ಎಂ.ಡಿ. ವಿಕಾಸ್ (40) ಅನಾರೋಗ್ಯದಿಂದ ನಿಧನರಾಗಿದ್ದಾರೆ.

ಕನ್ನಡ ಪರ ಹೋರಾಟಗಾರರಾಗಿದ್ದ ಅವರು ಕರುನಾಡ ವಿಜಯಸೇನೆ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷರಾಗಿದ್ದರು. ಅವರಿಗೆ ತಂದೆ-ತಾಯಿ, ಪತ್ನಿ, ಮಕ್ಕಳು ಇದ್ದಾರೆ.

ನಗರದಲ್ಲಿ ಇಂದು

25ನೇ ಘಟಿಕೋತ್ಸವ: ಕೆ.ಆರ್. ಶೇಖರ್, ಎಂ.ಆರ್. ಜಯರಾಮ್, ಎಂ.ಆರ್. ಆನಂದರಾಮ್, ಬಿ.ಎಸ್. ರಾಮಪ್ರಸಾದ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಬೆಳಿಗ್ಗೆ 10.45

ಕೃಷಿ ಮೇಳ–2021: ಪ್ರಶಸ್ತಿ ಪ್ರದಾನ: ಸಿ.ಎನ್. ಅಶ್ವತ್ಥನಾರಾಯಣ, ಮುನಿರತ್ನ, ಮುಖ್ಯ ಅತಿಥಿಗಳು: ಕೋಟ ಶ್ರೀನಿವಾಸ ಪೂಜಾರಿ, ಪಿ.ಸಿ. ಮೋಹನ್, ಡಿ.ಕೆ. ಸುರೇಶ್, ತೇಜಸ್ವಿಸೂರ್ಯ, ಅಧ್ಯಕ್ಷತೆ: ಡಾ.ಎಸ್. ರಾಜೇಂದ್ರ ಪ್ರಸಾದ್, ಆಯೋಜನೆ–ಕೃಷಿ ವಿಶ್ವವಿದ್ಯಾಲಯ, ಸ್ಥಳ–ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಮಧ್ಯಾಹ್ನ 2

ಅನಂತಕುಮಾರ್ ಅವರ ಪುಣ್ಯತಿಥಿಯ ಪ್ರಯುಕ್ತ ನೆನಪುಗಳ ಉಪನ್ಯಾಸ: ವಿಷಯ: ಪ್ರಗತಿಪರ ರಾಜಕೀಯ ಹಾಗೂ ರಾಷ್ಟ್ರ ನಿರ್ಮಾಣ ಉಪನ್ಯಾಸ: ನಿತಿನ್ ಗಡ್ಕರಿ, ಸ್ಥಳ: ಆರ್.ವಿ. ಶಿಕ್ಷಕರ ಮಹಾವಿದ್ಯಾಲಯ, 2ನೇ ಹಂತ, ಜಯನಗರ, ಸಂಜೆ 4

ಸರ್ ಸಿ.ವಿ. ರಾಮನ್ ವಿಜ್ಞಾನ ಉಪನ್ಯಾಸ: ವಿಷಯ: ಸರ್.ಸಿ.ವಿ. ರಾಮನ್ ಆವಿಷ್ಕಾರ ಮತ್ತು ವಿಶೇಷ ವ್ಯಕ್ತಿತ್ವ, ಭಾಗವಹಿಸುವವರು: ಎ.ಎಸ್. ಗೋವಿಂದ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಬಿ.ಸಿ. ರಾಜಕುಮಾರ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ (ಆನ್‌ಲೈನ್ ಕಾರ್ಯಕ್ರಮ) ಸಂಜೆ 4

‘ಫ್ರೈಡೆ ಫೋರಮ್’: ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಉಪನ್ಯಾಸ: ಡಾ. ಸ್ವಾತಿ ಶಿವಾನಂದ್, ಆಯೋಜನೆ ಹಾಗೂ ಸ್ಥಳ: ಅಲ್ಟ್ರನೇಟಿವ್ ಲಾ ಫೋರಮ್, ಇನ್ಫ್ಯಾಂಟ್ರಿ ರಸ್ತೆ, ಸಂಜೆ 6

ಕಾರ್ತಿಕ ಸಂಗೀತ ಸಂಭ್ರಮ ಮತ್ತು ಕನ್ನಡ ರಾಜ್ಯೋತ್ಸವ: ಗಾಯನ: ನಿರಂಜನ್ ದಿನ್‌ಡೋಡಿ, ಪಿಟೀಲು: ವಿಶ್ವಜಿತ್ ಮತ್ತೂರ್, ಮೃದಂಗ: ನಿಕ್ಷಿತ್ ಪುತ್ತೂರ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಗಿರಿನಗರ ಸಂಗೀತ ಸಭಾ, ಸಂಜೆ 6



ಮಂಜಮ್ಮ ಜೋಗತಿ

ನುಡಿ ಸಂಭ್ರಮ–ಕನ್ನಡ ರಾಜ್ಯೋತ್ಸವ ಸಂಭ್ರಮ: ಮುಖ್ಯ ಅತಿಥಿಗಳು: ಮಂಜಮ್ಮ ಜೋಗತಿ, ಬೈರಮಂಗಲ ರಾಮೇಗೌಡ, ಪಿ. ದಯಾನಂದ ಪೈ, ಜೋಗಿಲ ಸಿದ್ದರಾಜು, ಅವಿರಾಮ್ ಶರ್ಮ, ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಆಯೋಜನೆ: ಬಿ.ಎಂ.ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಸ್ಥಳ: ಬಿ.ಎಂ.ಎಸ್. ವಾಣಿಜ್ಯ ಮತ್ತು ನಿರ್ವಹಣಾ ಪದವಿ ಕಾಲೇಜು, ವಿ.ವಿ. ಪುರ, ಬೆಳಿಗ್ಗೆ 11

ಪೀಣ್ಯ ಎರಡನೇ ಹಂತದ ತಿಗಳರಪಾಳ್ಯ ಮುಖ್ಯರಸ್ತೆಯಲ್ಲಿ ಸಂಚಾರ ದುಸ್ತರ

ಗುಂಡಿಗಳ ನಡುವೆ ರಸ್ತೆಗೆ ಹುಡುಕಾಟ!

• ವರುಣ ಹೆಗಡೆ

ಬೆಂಗಳೂರು: ಬಿಸಿಲು ಬಂದರೆ ಮೈತುಂಬಾ ದೂಳು. ಮಳೆ ಸುರಿದರೆ ಮೊಣಕಾಲಿನವರೆಗೆ ರಾಚುವ ಕೆಸರು. ಗುಂಡಿಗಳ ನಡುವೆ ಸಾಗಲಾಗದೆ ಹರಸಾಹಸಪಡುವ ವಾಹನ ಸವಾರರು....

ಇವು ಪೀಣ್ಯ ಎರಡನೇ ಹಂತದ ತಿಗಳರಪಾಳ್ಯ ಮುಖ್ಯರಸ್ತೆಯ ದುಸ್ಥಿತಿ. ದಕ್ಷಿಣ ಏಷ್ಯಾದಲ್ಲಿನ ಅತೀ ದೊಡ್ಡ ಕೈಗಾರಿಕಾ ಪ್ರದೇಶಗಳಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶವೂ ಒಂದು. ಈ ಪ್ರದೇಶದಲ್ಲಿ 10 ಸಾವಿರಕ್ಕೂ ಹೆಚ್ಚು ಕೈಗಾರಿಕೆಗಳಿವೆ. ಹಾಗಾಗಿ, ಈ ರಸ್ತೆಯಲ್ಲಿ ಪ್ರತಿನಿತ್ಯ ಕಂಟೇನರ್ ಹೊತ್ತು ಸಾಗುವ ದೊಡ್ಡ ಲಾರಿಗಳೂ ಸಂಚರಿಸುತ್ತವೆ. ಈ ರಸ್ತೆಯು ಮಂಜುಶ್ರೀ ಗಾರ್ಮೆಂಟ್ಸ್‌ನಿಂದ ಗರುಡ ವೃತ್ತದವರೆಗೆ 2 ಕಿ.ಮೀ. ಸಂಪೂರ್ಣ ಹದಗೆಟಿದ್ದು, ವಾಹನ ಸವಾರರು ಉಸಿರು ಬಿಗಿಹಿಡಿದು ಸಾಗಬೇಕಿದೆ.

ಹೆಜ್ಜೆಗೊಂದರಂತೆ ಒಡಮೂಡಿರುವ ತಗ್ಗು ಸುಲಲಿತ ಸವಾರಿಯನ್ನು ಕನಸಾಗಿಸಿದೆ. ಬಾಲಾಜಿನಗರದಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ರಸ್ತೆಗಳನ್ನು ಎಲ್ಲೆಂದರಲ್ಲಿ ಅಗೆಯಲಾಗಿದೆ. ಹೀಗಾಗಿ, ಇಲ್ಲಿ ಅಪಘಾತಗಳು ಸಾಮಾನ್ಯ ಸಂಗತಿಗಳಾಗಿವೆ. 10 ವರ್ಷಗಳ ಹಿಂದೆ ಮುಖ್ಯ ರಸ್ತೆಗೆ ಹಾಕಲಾಗಿದ್ದ ಡಾಂಬರು ಸಂಪೂರ್ಣ ಕಿತ್ತುಹೋಗಿದೆ. ಈ ಭಾಗದ ಅಡ್ಡ ರಸ್ತೆಗಳು ಡಾಂಬರಿನ ದರ್ಶನ ಕಂಡು ಸುಮಾರು ವರ್ಷಗಳೇ ಉರುಳಿವೆ.

ರಸ್ತೆಗಳ ಕೆಲ ಗುಂಡಿಗಳಿಗೆ ಚೂಪಾದ ಕಲ್ಲುಗಳನ್ನು ಹಾಕಲಾಗಿದೆ. ಇದರಿಂದಾಗಿ ವಾಹನಗಳು ಪಂಚರ್ ಆಗಿ, ದಿನವಿಡೀ ರಸ್ತೆಯಲ್ಲಿಯೇ ನಿಲ್ಲುವುದು ಸಾಮಾನ್ಯ. ಒಳಚರಂಡಿ ಇಲ್ಲದಿರುವುದರಿಂದ ಮಳೆ ಬಂದರೆ ನೀರು ಸಂಪೂರ್ಣ ರಸ್ತೆಯನ್ನು ಆವರಿಸಿಕೊಳ್ಳಲಿದೆ.

ಅಡ್ಡ ರಸ್ತೆಗಳು ಅಧ್ವಾನ: 'ಈ ರಸ್ತೆಗೆ ಡಾಂಬರು ಕಂಡು ಹಲವು ವರ್ಷಗಳೇ ಕಳೆದಿವೆ. ಬಿಸಿಲು ಬಂದರೆ ದೂಳು, ಮಳೆ ಬಂದರೆ ಕೆಸರಿನ ಸಮಸ್ಯೆ ಎದುರಿಸಬೇಕಾಗಿದೆ. ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಈ ರಸ್ತೆಯಲ್ಲಿ ಸಾಗುವುದೇ ಕಷ್ಟವಾಗಿದ್ದು, ಪ್ರತಿನಿತ್ಯ ಅಪಘಾತ ಸಂಭವಿಸುತ್ತಿವೆ' ಎಂದು ಸ್ಥಳೀಯರು ಅಳಲು ತೋಡಿಕೊಂಡರು.

ತಿಗಳರಪಾಳ್ಯ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಅಡ್ಡ ರಸ್ತೆಗಳ ಸ್ಥಿತಿ ಇನ್ನಷ್ಟು ಶೋಚನಿಯವಾಗಿದೆ. ಕಾರು ಸೇರಿದಂತೆ ನಾಲ್ಕು ಚಕ್ರದ ವಾಹನಗಳು ಕೆಸರಿನ ನಡುವೆಯೇ ಸಿಲುಕಿಕೊಳ್ಳುತ್ತಿವೆ. ದ್ವಿಚಕ್ರ ವಾಹನಗಳನ್ನು ತಳ್ಳಿಕೊಂಡೇ ಸಾಗಬೇಕಿದೆ. ಬಹುತೇಕ ರಸ್ತೆಗಳು ಈವರೆಗೂ ಡಾಂಬರು ಕಂಡಿಲ್ಲ.


ಬಾಲಾಜಿನಗರದ ಅಡ್ಡರಸ್ತೆಯ ಸ್ಥಿತಿ


ತಿಗಳರಪಾಳ್ಯ ಮುಖ್ಯರಸ್ತೆಯು ಗುಂಡಿಗಳಿಂದ ಕೂಡಿರುವುದು ಚಿತ್ರಗಳು/ ಪ್ರಶಾಂತ್ ಎಚ್‌.ಜಿ

ಹೊರ ವಲಯ ಒಳ ಬೇಗುದಿ

ಅಪಘಾತ ವಲಯಕ್ಕೂ ಮುಕ್ತಿಯಿಲ್ಲ

ಈಗಲ್ ಪ್ಯಾಬ್‌ಟೆಕ್ ಕಟ್ಟಡದ ಮುಂಭಾಗ ವಾಹನ ಅಪಘಾತ ಸಾಮಾನ್ಯವಾಗಿದೆ. ಇಲ್ಲಿ ರಸ್ತೆಯು ತಿರುವು ಪಡೆದುಕೊಂಡಿದ್ದು, ಏರುಮುಖವಾಗಿದೆ. ರಸ್ತೆಯ ಒಂದು ಭಾಗದಲ್ಲಿ ಡಾಂಬರ್ ಸಂಪೂರ್ಣ ಕಿತ್ತುಹೋಗಿದೆ. ಇದರಿಂದಾಗಿ ಸರಕು ತುಂಬಿದ ವಾಹನಗಳು ಹಿಮ್ಮುಖ ವಾಪಸ್ ಬಂದು, ಅಪಘಾತಕ್ಕೆ ಒಳಗಾಗುತ್ತಿವೆ. ಇದೇ ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ಗಳು ನೆಲದಿಂದ ಅಡಿಯೆತ್ತರವಿರುವುದು ಸಂಚಾರಕ್ಕೆ ಸಮಸ್ಯೆಯಾಗಿದೆ.

'ಆಟೊ ರಿಕ್ಷಾಗಳು ಪಲ್ಟಿ ಆಗುವುದು ಸಾಮಾನ್ಯವಾಗಿದೆ. ರಸ್ತೆಯ ಏರುಮುಖ ತಿರುವಿನಲ್ಲಿ ಸರಕು ವಾಹನಗಳಿಂದ ಕಬ್ಬಿಣದ ಕಂಬಿಗಳು ಬಿದ್ದು, ಹಿಂಬದಿ ಸವಾರರು ಗಾಯಗೊಂಡ ಘಟನೆಗಳೂ ನಡೆದಿವೆ. ಹಲವು ಲಾರಿಗಳು ರಸ್ತೆ ಅಪಘಾತಕ್ಕೆ ಒಳಗಾಗಿದ್ದು, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ ಆಗಿವೆ. ಪ್ರತಿನಿತ್ಯ ಸರಾಸರಿ ಐದು ಅಪಘಾತಗಳು ಸಂಭವಿಸುತ್ತಿವೆ' ಎಂದು ಅಂಗಡಿ ಮಾಲೀಕರೊಬ್ಬರು ತಿಳಿಸಿದರು.


ಬಿಸಿಲು ಬಂದರೆ ಅಂಗಡಿ ದೂಳುಮಯ ಆಗುತ್ತದೆ. ಗಾಡಿಗಳು ಅಪಘಾತಕ್ಕೆ ಒಳಗಾಗುವುದು ಇಲ್ಲಿ ಸಾಮಾನ್ಯ. ಬಹುತೇಕ ಅಡ್ಡ ರಸ್ತೆಗಳು ಡಾಂಬರ್ ಕಂಡಿಲ್ಲ
ಪರಮೇಶ್, ಅಂಗಡಿ ಮಾಲೀಕ


ಕೈಗಾರಿಕೆಗಳು ಇರುವುದರಿಂದ ದೊಡ್ಡ ಗಾತ್ರದ ವಾಹನಗಳೂ ಈ ರಸ್ತೆಯಲ್ಲಿ ಬರುತ್ತವೆ. ಹತ್ತು ವರ್ಷಗಳಿಂದ ರಸ್ತೆಗಳ ಕಾಮಗಾರಿ, ಒಳಚರಂಡಿಯೂ ಆಗಿಲ್ಲ
ಪ್ರಭಾಕರ್, ಪೀಣ್ಯ ಎರಡನೇ ಹಂತ


ಮಳೆ ಬಂದರೆ ನೀರು ಹೋಗಲು ಒಳಚರಂಡಿಯನ್ನೂ ರೂಪಿಸಿಲ್ಲ. ವಾಹನ ಸವಾರರು ಮಾತ್ರವಲ್ಲ ಪಾದಚಾರಿಗಳು ಸರ್ಕಸ್ ಮಾಡುತ್ತಲೇ ರಸ್ತೆಯಲ್ಲಿ ಸಂಚರಿಸಬೇಕಿದೆ
ಜಯಕರ ಶೆಟ್ಟಿ, ತಿಗಳರಪಾಳ್ಯ ಮುಖ್ಯರಸ್ತೆ


ರಸ್ತೆಗಳು ತಗ್ಗು ಮತ್ತು ಗುಂಡಿಗಳಿಂದ ಆವೃತ್ತವಾಗಿವೆ. ಈ ರಸ್ತೆಗಳಲ್ಲಿ ವಾಹನಗಳ ಸಂಚಾರವಿರಲಿ, ಜನ ನಡೆದುಕೊಂಡು ಹೋಗುವುದಕ್ಕೂ ಪರದಾಡುವಂತಹ ಸ್ಥಿತಿ ಇದೆ
ಉಮೇಶ್, ಬಾಲಾಜಿನಗರ

ಪೌರಕಾರ್ಮಿಕರ ಖಾತೆಗೆ ನೇರ ವೇತನ

ಬೆಂಗಳೂರು: ಪೌರ ಕಾರ್ಮಿಕರಿಗೆ ಪ್ರತಿ ತಿಂಗಳು ಏಳನೇ ತಾರೀಕಿನೊಳಗೆ ವೇತನ ಜಮೆಯಾಗಬೇಕು ಮತ್ತು ಆರ್‌ಟಿಜಿಎಸ್ ಮೂಲಕವೇ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಪಾವತಿಯಾಗುವಂತೆ ಕ್ರಮಕೈಗೊಳ್ಳಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಅವರು ನಿರ್ದೇಶನ ನೀಡಿದ್ದಾರೆ.

ಪೌರ ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿಗೊಳಿಸಲಾಗಿದೆ. 2016ರ ಆಗಸ್ಟ್ 4ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾದ ಪರಿಷ್ಕೃತ ವೇತನ ನೀಡಬೇಕು. ಹೆಚ್ಚುವರಿಯಾದ ವ್ಯತ್ಯಾಸದ ವೇತನವನ್ನು ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲು ಕ್ರಮಕೈಗೊಳ್ಳಬೇಕು ಎಂದು ಎಲ್ಲ ಜಂಟಿ ಆಯುಕ್ತರು ಮತ್ತು ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳಿಗೆ, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಮತ್ತು ಆರೋಗ್ಯ ನಿರೀಕ್ಷಕರಿಗೆ ಸೂಚಿಸಿದ್ದಾರೆ.

ಡ್ರಗ್ಸ್ ಕೊಟ್ಟ ಪೊಲೀಸರು ಅಲ್ಲಗಳೆದಿದ್ದ ಇನ್‌ಸ್ಪೆಕ್ಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಹಗರಣದ ಪ್ರಮುಖ ಸೂತ್ರಧಾರಿ ಶ್ರೀಕೃಷ್ಣ ಅಲಿಯಾಸ್ ಶ್ರೀ, 'ಕಸ್ಟಡಿಯಲ್ಲಿದ್ದ ವೇಳೆಯಲ್ಲಿ ಸಿಸಿಬಿ ಪೊಲೀಸರು ನನಗೆ ಡ್ರಗ್ಸ್ ಕೊಟ್ಟಿದ್ದರು' ಎಂದು ಆರೋಪಿಸಿದ್ದ ಸಂಗತಿ ಪತ್ತೆ ಆಗಿದೆ.

ಬೆಂಗಳೂರು ಸೈಬರ್ ಕ್ರೈಂ ಠಾಣೆಯಲ್ಲಿ ದಾಖಲಾಗಿದ್ದ ಡ್ರಗ್ಸ್ ಪ್ರಕರಣದಲ್ಲಿ ಶ್ರೀಕೃಷ್ಣನನ್ನು ಬಂಧಿಸಿದ್ದ ಸಿಸಿಬಿ ಪೊಲೀಸ್ ಇನ್‌ಸ್ಪೆಕ್ಟರ್ ಚಂದ್ರಧರ್, 2021ರ ಜನವರಿ 11ರಂದು 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಧೀಶರು, ಆರೋಪಿ ಶ್ರೀಕಿ ಹೇಳಿಕೆ ದಾಖಲಿಸಿಕೊಂಡಿದ್ದರು.

'ಪೊಲೀಸರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ಕಸ್ಟಡಿಯಲ್ಲಿದ್ದಾಗ ಅಲ್ಪ್ರಝೋಲಮ್ ಡ್ರಗ್ಸ್ ಕೊಟ್ಟಿದ್ದರು. ನಾನು ಅದನ್ನು ಸೇವಿಸಿದ್ದೆ' ಎಂಬುದಾಗಿ ಶ್ರೀಕೃಷ್ಣ ಹೇಳಿಕೆ ನೀಡಿದ್ದ. ಅದನ್ನು ಆಲಿಸಿದ್ದ ನ್ಯಾಯಾಲಯ, 'ಆರೋಪಿಯನ್ನು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧಿಕಾರಿ ಬಳಿ ಹಾಜರುಪಡಿಸಿ. ರಕ್ತ ಹಾಗೂ ಮೂತ್ರದ ಮಾದರಿಯನ್ನು ಸಂಗ್ರಹಿಸಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಅದರ ವರದಿಯನ್ನು ಸಲ್ಲಿಸಿ' ಎಂದು ತನಿಖಾಧಿಕಾರಿಯೂ ಆದ ಇನ್‌ಸ್ಪೆಕ್ಟರ್ ಚಂದ್ರಧರ್‌ಗೆ ಆದೇಶಿಸಿತ್ತು.

ಮಾತ್ರೆ ನೀಡಿಲ್ಲವೆಂದ ಇನ್‌ಸ್ಪೆಕ್ಟರ್: ಆದೇಶದಂತೆ ಕ್ರಮ ಕೈಗೊಂಡಿದ್ದ ಸಿಸಿಬಿ ಇನ್‌ಸ್ಪೆಕ್ಟರ್ ಚಂದ್ರಧರ್, 2021ರ ಜನವರಿ 12ರಂದು ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿದ್ದರು.

'ಆರೋಪಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ವೈದ್ಯಕೀಯ ಪರೀಕ್ಷೆಗಾಗಿ ಕರೆದೊಯ್ಯಲಾಗಿತ್ತು. ಸದರಿ ಆಸ್ಪತ್ರೆಯನ್ನು ಕೋವಿಡ್ ಕೇಂದ್ರವಾಗಿ ಪರಿವರ್ತಿಸಿದ್ದರಿಂದ, ಹೊರ ರೋಗಿಗಳಿಗೆ ಸೌಲಭ್ಯ ಲಭ್ಯವಿರಲಿಲ್ಲ. ಉನ್ನತ ಮಟ್ಟದ ಆಸ್ಪತ್ರೆ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯಗಳಲ್ಲಿ ಸೌಲಭ್ಯ ಲಭ್ಯವಿರುವುದಾಗಿ ವರದಿ ನೀಡಿರುತ್ತಾರೆ. ಇದೇ ಆರೋಪಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದರಿಂದ, ನಿಮ್ಹಾನ್ಸ್ ವೈದ್ಯರ ಬಳಿ ಚಿಕಿತ್ಸೆ ಪಡೆದು ಮಾತ್ರೆಗಳನ್ನು ಪಡೆದುಕೊಳ್ಳುತ್ತಿದ್ದ. ಪೊಲೀಸ್ ಕಸ್ಟಡಿಯಲ್ಲಿದ್ದ ಸಂದರ್ಭದಲ್ಲಿ ನಾವು ಯಾವುದೇ ಮಾತ್ರೆ ತೆಗೆದುಕೊಳ್ಳಲು ಅವಕಾಶ ನೀಡಿಲ್ಲ. ನ್ಯಾಯಾಲಯದ ಮುಂದಿನ ನಿರ್ದೇಶನಕ್ಕಾಗಿ ಕಾಯುತ್ತಿದ್ದೇವೆ' ಎಂದು ಚಂದ್ರಧರ್ ನಿವೇದನೆಯಲ್ಲಿ ದಾಖಲಿಸಿದ್ದರು.



ನಾಗಶೆಟ್ಟಿಹಳ್ಳಿ ಬಳಿಯ ರೈಲ್ವೆ ಕೆಳ ಸೇತುವೆಯಲ್ಲಿ ಹರಿಯುತ್ತಿದ್ದ ನೀರಿನಲ್ಲೇ ಸವಾರರು ಸಂಚರಿಸಿದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ದಿನವಿಡೀ ಮಳೆ

ಒಂದನೇ ಪುಟದಿಂದ

ಸಂಜೆಯವರೆಗೂ ಬಹುತೇಕ ಕಡೆ ಸೂರ್ಯನ ದರ್ಶನವಾಗಲಿಲ್ಲ. ಮಳೆ ನಿಲ್ಲುವ ಲಕ್ಷಣಗಳೂ ಗೋಚರಿಸಲಿಲ್ಲ. ಚಳಿಯ ನಡುವೆಯೂ ಮಳೆಯಲ್ಲೇ ಜನ ಸುತ್ತಾಡಬೇಕಾಯಿತು.

ಕೆ.ಆರ್. ಮಾರುಕಟ್ಟೆ, ನಗರದ ಪ್ರಮುಖ ಪೆಟ್ರೋಲ್ ಬಂಕ್, ಅಂಗಡಿ, ಮಳಿಗೆ ಹಾಗೂ ಮಾಲ್‌ಗಳಲ್ಲಿ ಜನ ಗುಂಪು ಗುಂಪಾಗಿ ನಿಂತ ಆಶ್ರಯ ಪಡೆದಿದ್ದ ಕಂಡುಬಂತು.

ಕೊಡೆಯೇ ದಿನದ ಸಂಗಾತಿ: ಅಗತ್ಯ ವಸ್ತು ಹಾಗೂ ತರಕಾರಿ ತರಲು ಸಹ ಮಳೆ ಸಮಯ ನೀಡಲಿಲ್ಲ. ಬಹುತೇಕ ಕಡೆ, ಮನೆಯಿಂದ ಹೊರಬಂದ ಜನರೆಲ್ಲರಿಗೂ ಕೊಡೆಯೇ ಸಂಗಾತಿ ಆಗಿತ್ತು.

ಕೊಡೆ ಹಿಡಿದು ಅಂಗಡಿ ಹಾಗೂ ಮಾರುಕಟ್ಟೆಗಳಿಗೆ ಬಂದಿದ್ದ ಜನ, ಅಗತ್ಯ ವಸ್ತುಗಳನ್ನು ಖರೀದಿಸಿಕೊಂಡು ಹೋದರು.

ತಮ್ಮ ಕೆಲಸಕ್ಕೆಂದು ಕಾರಿನಲ್ಲಿ ಸುತ್ತಾಡುತ್ತಿದ್ದ ಸಾರ್ವಜನಿಕರು, ಕಾರಿನಿಂದ ಇಳಿಯುವಾಗಲೂ ಕೊಡೆ ಮೊರೆ ಹೋದರು. ದ್ವಿಚಕ್ರ ವಾಹನ ಸವಾರರು, ರೇನ್‌ಕೋಟ್ ಹಾಗೂ ಜರ್ಕಿನ್‌ಗಳನ್ನು ಧರಿಸಿಕೊಂಡು ಸಂಚರಿಸಿದರು.

ನಿಧಾನಗತಿ ಚಾಲನೆಯಿಂದ ದಟ್ಟಣೆ: ಜಿಟಿ ಜಿಟಿ ನಡುವೆಯೂ ಕೆಲವೆಡೆ ಜೋರು ಮಳೆ ಸುರಿಯಿತು. ಇದರಿಂದಾಗಿ ರಸ್ತೆಯಲ್ಲಿ ಧಾರಾಕಾರವಾಗಿ ನೀರು ಹರಿದು ಹೋಯಿತು. ಇಂಥ ರಸ್ತೆಗಳಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದ್ದರಿಂದ, ದಟ್ಟಣೆಯೂ ಕಂಡುಬಂತು.

ಮೆಜೆಸ್ಟಿಕ್ ಕೆಳ ಸೇತುವೆ, ಶಿವಾನಂದ ವೃತ್ತ ರಸ್ತೆ ಹಾಗೂ ಇತರೆಡೆ ರಸ್ತೆ ಮೇಲೆಯೇ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿಯಿತು. ಇಲ್ಲೆಲ್ಲ ಸಂಚರಿಸಲು ಸವಾರರು ಪರದಾಡಿದರು.

'ದಿನವಿಡೀ ಜಿಟಿ ಜಿಟಿ ಮಳೆ ನಿರೀಕ್ಷೆ ಇರಲಿಲ್ಲ. ನಗರದೆಲ್ಲೆಡೆ ಉತ್ತಮ ಮಳೆ ಆಗಿದೆ. ಅನಾಹುತಗಳ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಅಧಿಕಾರಿ ಹೇಳಿದರು.

ಶಾಲೆ, ಕಾಲೇಜು ವಿದ್ಯಾರ್ಥಿಗಳಿಗೂ ತೊಂದರೆ: ಜಿಟಿ ಜಿಟಿ ಮಳೆಯಿಂದಾಗಿ ಶಾಲೆ ಹಾಗೂ ಕಾಲೇಜುಗಳಿಗೆ ಹೋಗಲು ವಿದ್ಯಾರ್ಥಿಗಳಿಗೆ ತೊಂದರೆ ಆಯಿತು. ಬೆಚ್ಚಗಿನ ಉಡುಪು ಧರಿಸಿ ಹಾಗೂ ಕೊಡೆ ಆಶ್ರಯದಲ್ಲಿ ಕೆಲ ವಿದ್ಯಾರ್ಥಿಗಳು ಶಾಲೆಗೆ ಹೋಗಿಬಂದರು. ಸುರಿಯುವ ಮಳೆಯಲ್ಲೇ ವಿದ್ಯಾರ್ಥಿಗಳನ್ನು ಪೋಷಕರು ದ್ವಿಚಕ್ರ ವಾಹನಗಳಲ್ಲಿ ಕರೆದೊಯ್ಯುತ್ತಿದ್ದ ದೃಶ್ಯಗಳೂ ಕಂಡುಬಂದವು.



ದ ಬೂಮ್ ಕಾರ್ಬೆಟ್‌ನೊಂದಿಗೆ ಸಿಇಒ ಅನಿರುದ್ಧ ರವಿ ನಾರಾಯಣನ್

ಎಲೆಕ್ಟ್ರಿಕ್ ವಾಹನ ಕ್ಷೇತ್ರಕ್ಕೆ 'ಬೂಮ್ ಮೋಟಾರ್ಸ್'

ಬೆಂಗಳೂರು: ವಿದ್ಯುತ್ ವಾಹನ ಕ್ಷೇತ್ರಕ್ಕೆ ಕೊಯಮತ್ತೂರು ಮೂಲದ ಬೂಮ್ ಮೋಟಾರ್ಸ್ ಪ್ರವೇಶಿಸಿದೆ.

'ದ ಬೂಮ್ ಕಾರ್ಬೆಟ್' ಬೈಕ್ ಅನ್ನು ಗುರುವಾರ ಅನಾವರಣಗೊಳಿಸಿದೆ. ಇದು ಈ ಕಂಪನಿಯ ಮೊದಲ ಉತ್ಪನ್ನ. ಅತ್ಯಂತ ದೀರ್ಘಕಾಲ ಬಾಳಿಕೆ ಬರುವ ಬೈಕ್ ಇದಾಗಿದ್ದು, ಚಾಸಿಗಳ ಮೇಲೆ 7 ವರ್ಷಗಳು ಮತ್ತು ಬ್ಯಾಟರಿಯ ಮೇಲೆ 5 ವರ್ಷಗಳ ವಾರಂಟಿ ನೀಡಲಾಗಿದೆ. ದೇಶದ ಎಲ್ಲೆಡೆ ಸೇವಾ ಸೌಲಭ್ಯಗಳನ್ನು ಹೊಂದಿರುವ ಮೊದಲ ವಿದ್ಯುತ್ ವಾಹನ ಕಂಪನಿ ಇದಾಗಿದೆ.

ಬದಲಾಯಿಸಬಹುದಾದ ಬ್ಯಾಟರಿಗಳನ್ನು ಇದು ಹೊಂದಿದ್ದು, ಯಾವುದೇ ಮನೆಯಲ್ಲಿನ ಸಾಕೆಟ್‌ಗೆ ಪ್ಲಗ್ ಮಾಡಿ ಚಾರ್ಜ್ ಮಾಡಬಹುದಾದ ಪೋರ್ಟೆಬಲ್ ಚಾರ್ಜರ್‌ಗಳನ್ನು ಇದು ಹೊಂದಿದೆ. ಈ ವಾಹನ ಗರಿಷ್ಠ 75 ಕಿಲೋ ಮೀಟರ್‌ಗಳ ವೇಗ ತಲುಪುವ ಸಾಮರ್ಥ್ಯ ಹೊಂದಿದೆ. ಎರಡು ಬ್ಯಾಟರಿಗಳ ಆಯ್ಕೆ ಹೊಂದಿರುವ ಈ ವಾಹನವು, 200 ಕೆ.ಜಿ.ಗಳ ತೂಕ ಕೊಂಡೊಯ್ಯುವ ಸಾಮರ್ಥ್ಯ ಹೊಂದಿದೆ.

'ಈ ವಾಹನಕ್ಕೆ ₹ 89,999 ಮೊತ್ತ ನಿಗದಿಪಡಿಸಲಾಗಿದೆ. ಜತೆಗೆ ಆಯಾ ರಾಜ್ಯಗಳಲ್ಲಿ ಸರ್ಕಾರಗಳು ನೀಡುವ ಸಬ್ಸಿಡಿಯಿಂದ ಬೆಲೆ ಇನ್ನೂ ಕಡಿಮೆಯಾಗಲಿದೆ. ನವೆಂಬರ್ 12ರಿಂದ ಬೂಮ್ ಮೋಟಾರ್ಸ್ ಬೈಕ್‌ಗಳನ್ನು ಕಾಯ್ದಿರಿಸುವ ಪ್ರಕ್ರಿಯೆ ಆರಂಭವಾಗಿದೆ. ಜನವರಿ 2022ರಿಂದ ಕಂಪನಿಯು ರಿಟೇಲ್ ವಿತರಣೆಗಳನ್ನು ಆರಂಭಿಸಲಿದೆ' ಎಂದು ಬೂಮ್ ಮೋಟಾರ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನಿರುದ್ಧ ರವಿ ನಾರಾಯಣನ್ ತಿಳಿಸಿದ್ದಾರೆ.

ಒಂದು ಟಗರಿನ ಮೌಲ್ಯ ₹ 5 ಲಕ್ಷ; ಕುರಿ ಸಾಕಾಣಿಕೆಯಿಂದ ವಾರ್ಷಿಕ ₹50 ಲಕ್ಷ ಆದಾಯ

ರೈತರ ಬೊಕ್ಕಸ ತುಂಬಿಸುವ 'ಡಾರ್ಪರ್'!

• ಜಿ.ಶಿವಕುಮಾರ

ಬೆಂಗಳೂರು: ಈ ಟಗರಿಗೆ ಕೊಂಬಿಲ್ಲ. ಬಾಲವೂ ಇಲ್ಲ. ಕಪ್ಪು ತಲೆಯ, ಉದ್ದನೆಯ ದೇಹಾಕಾರ ಹೊಂದಿರುವ ಅದರ ತೂಕ 100 ರಿಂದ 120 ಕೆ.ಜಿ. ದರ ₹5 ಲಕ್ಷ!

ಡಾರ್ಪರ್ ತಳಿಯ ಈ ಟಗರು ಕೃಷಿ ಮೇಳದಲ್ಲಿ ಎಲ್ಲರ ಆಕರ್ಷಣೆಯಾಗಿತ್ತು. ನೋಡಲು ಬಂದವರೆಲ್ಲಾ ಅದರ ದರ ಕೇಳಿ ಬೆರಗಾಗುತ್ತಿದ್ದರು.

ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿಯ ಮಾರೇನಹಳ್ಳಿ ನಿವಾಸಿ ಸತೀಶ್ ಅವರು ತಮ್ಮ ಸಿಂಚನಾ ಕುರಿ ಮತ್ತು ಮೇಕೆ ಫಾರಂನಲ್ಲಿ ಈ ವಿಶೇಷ ತಳಿಯ ಕುರಿಗಳನ್ನು ಸಾಕುತ್ತಿದ್ದಾರೆ. ಅದರಿಂದ ವಾರ್ಷಿಕ ಸುಮಾರು ₹50 ಲಕ್ಷ ಆದಾಯ ಗಳಿಸುತ್ತಿದ್ದಾರೆ.

'ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾಕ್ಕೆ ಭೇಟಿ ನೀಡಿದ್ದಾಗ ಅಲ್ಲಿ ಡಾರ್ಪರ್ ಟಗರಿನ ಮಾಂಸಕ್ಕೆ ಹೆಚ್ಚು ಬೇಡಿಕೆ ಇರುವುದು ತಿಳಿಯಿತು. ಹೀಗಾಗಿ ಆ ತಳಿಯ ಬಗ್ಗೆ ಆಸಕ್ತಿ ಮೂಡಿತ್ತು. ನಮ್ಮ ರಾಜ್ಯದ ರವಿಪ್ರಸಾದ್ ಎಂಬುವವರು ಕನಕಪುರದ ತಮ್ಮ ಫಾರಂನಲ್ಲಿ ಆ ತಳಿಯ ಕುರಿಗಳನ್ನು ಸಾಕಿರುವ ವಿಚಾರ ಗೊತ್ತಾಯಿತು. ಅವರಿಂದ ಎರಡು ಟಗರುಗಳನ್ನು ಖರೀದಿಸಿದ್ದೆ' ಎಂದು ಸತೀಶ್ ತಿಳಿಸಿದರು.

'ರವಿಪ್ರಸಾದ್ ಅವರು ದಕ್ಷಿಣ ಆಫ್ರಿಕಾದಿಂದ ಭ್ರೂಣ ತರಿಸಿ ಅದರಿಂದ ಡಾರ್ಪರ್ ಕುರಿಗಳನ್ನು ಅಭಿವೃದ್ಧಿಪಡಿಸಿದ್ದರು. ಅವರ ಫಾರಂನಿಂದ ಖರೀದಿಸಿದ್ದ ಟಗರುಗಳಿಂದ 300 ನಾಟಿ ಕುರಿಗಳಿಗೆ ಸಂಕರ ಮಾಡಿಸಿದ್ದೆ. ಆ ಮರಿಗಳು ವರ್ಷದೊಳಗೆ 50 ರಿಂದ 70 ಕೆ.ಜಿ. ತೂಕ ವೃದ್ಧಿಸಿಕೊಂಡಿದ್ದವು. ಅವುಗಳ ಮಾಂಸಕ್ಕೂ ಭಾರಿ ಬೇಡಿಕೆ ಇತ್ತು' ಎಂದರು.

'ಡಾರ್ಪರ್ ಟಗರಿಗೆ ದಿನಕ್ಕೆ ಕನಿಷ್ಠ 12 ಕೆ.ಜಿ. ಮೇವು ನೀಡಬೇಕು. ಮೆಕ್ಕೆಜೋಳ, ನುಗ್ಗೆ ಸೊಪ್ಪು, ಅಗಸೆ, ಬೇಲಿ ಮೆಂತೆ, ಹಿಪ್ಪು ನೇರಳೆ ಸೇರಿದಂತೆ ಒಟ್ಟು 7 ಬಗೆಯ ಮೇವು ಹಾಕುತ್ತೇವೆ. 40 ಎಕರೆ ಜಮೀನಿನಲ್ಲಿ ಮೇವು ಬೆಳೆಯುತ್ತಿದ್ದು 10 ಜನರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದೇನೆ. ಸದ್ಯ ನಮ್ಮ ಫಾರಂನಲ್ಲಿ ರ‍್ಯಾಂಬ್ಲೆಟ್ ತಳಿಯ 700, ಎಳಗ ಮತ್ತು ಡೆಕ್ಕನಿ ತಳಿಯ ತಲಾ 50 ಹಾಗೂ ನಾಟಿ ತಳಿಯ 50 ಕುರಿಗಳಿವೆ' ಎಂದೂ ಹೇಳಿದರು.

'ಈ ತಳಿಯ ಕುರಿಗಳು ಅವಳಿ ಮರಿಗಳನ್ನು ಹಾಕುತ್ತವೆ. ಇವುಗಳ ಮಾಂಸ ಮೃದು ಹಾಗೂ ರುಚಿಯಾಗಿರುತ್ತದೆ. ಇಷ್ಟು ವರ್ಷ ಈ ತಳಿಯ ಕುರಿ ಹಾಗೂ ಟಗರಿನ ಭ್ರೂಣ ಮತ್ತು ವೀರ್ಯ ತರುವುದಕ್ಕಷ್ಟೇ ಅವಕಾಶ ಇತ್ತು. ಈಗ ದಕ್ಷಿಣ ಆಫ್ರಿಕಾದಿಂದ ಕುರಿ ಹಾಗೂ ಟಗರುಗಳನ್ನು ಆಮದು ಮಾಡಿಕೊಳ್ಳಬಹುದು. ಹಾಗೆ ತಂದ ಕುರಿಗಳನ್ನು ಕೆಲ ದಿನ ಕ್ವಾರಂಟೈನ್‌ನಲ್ಲಿ ಇಡಬೇಕಾಗುತ್ತದೆ' ಎಂದು ಜಿಕೆವಿಕೆಯ ಪಶುವಿಜ್ಞಾನಗಳ ವಿಭಾಗದ ಮುಖ್ಯಸ್ಥ ಡಾ.ಬಿ.ಎಲ್.ಚಿದಾನಂದ ತಿಳಿಸಿದರು.

ಡಾರ್ಪರ್: ಸಂಕರ ತಳಿ

ಡಾರ್ಪರ್ ದಕ್ಷಿಣ ಆಫ್ರಿಕಾದ ತಳಿ. 1930ರಲ್ಲಿ ಡಾರ್ಸಟ್ ಹಾರ್ನ್ ಮತ್ತು ಕಪ್ಪು ತಲೆಯ ಪರ್ಷಿಯನ್ ಕುರಿಗಳ ಸಂಕರದಿಂದ ಇದನ್ನು ಅಭಿವೃದ್ಧಿಪಡಿಸಲಾಗಿತ್ತು.

ಈ ಕುರಿಗಳು ಕಡಿಮೆ ಕೂದಲು ಹೊಂದಿರುತ್ತವೆ. ಅವು ಕ್ರಮೇಣ ಉದುರಿ ಹೋಗುವ ಲಕ್ಷಣ ಹೊಂದಿರುತ್ತವೆ. ರಾಜ್ಯದಲ್ಲಿ ಡಾರ್ಪರ್ ತಳಿಯ ಕುರಿಗಳನ್ನು ನಾಲ್ವರು ಸಾಕುತ್ತಿದ್ದಾರೆ.



ಕೃಷಿ ಮೇಳದಲ್ಲಿ ಪ್ರದರ್ಶನಕ್ಕಿರುವ ಡಾರ್ಪರ್ ತಳಿಯ ಟಗರು ಪ್ರಜಾವಾಣಿ ಚಿತ್ರ

ಮಳೆ ರಗಳೆ- ಕಳೆಗುಂದಿದ ಮೇಳ

ಪ್ರಜಾವಾಣಿ ವಾರ್ತೆ



ಮಳೆಯಿಂದ ಕೆಸರುಗದ್ದೆಯಾಗಿರುವ ಕೃಷಿ ಮೇಳದ ಆವರಣ –ಪ್ರಜಾವಾಣಿ ಚಿತ್ರ

ಬೆಂಗಳೂರು: ಕಳೆಗಟ್ಟಿದ್ದ ಕೃಷಿ ಮೇಳಕ್ಕೆ ಮಳೆ ಕೊಂಚ ಅಡ್ಡಿಯುಂಟು ಮಾಡಿತ್ತು. ಸುರಿವ ಮಳೆಯ ನಡುವೆಯೂ ರೈತರು ಮಳಿಗೆಗಳಿಗೆ ಮತ್ತು ಕೃಷಿ ತಾಕುಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ಕೃಷಿ ಮೇಳ ಆರಂಭವಾದ ಗುರುವಾರವೇ ಜಿಟಿಜಿಟಿ ಮಳೆ ನಗರದಲ್ಲಿ ಆರಂಭವಾಗಿತ್ತು. ಮಧ್ಯಾಹ್ನ 1 ಗಂಟೆ ವೇಳೆಗೆ ಮೇಳ ಉದ್ಘಾಟನೆ ಆದ ಬಳಿಕ ಧಾರಾಕಾರವಾಗಿ ಸುರಿಯಲು ಆರಂಭವಾದ ಮಳೆ ಸಂಜೆ ತನಕವೂ ಬಿಡಲಿಲ್ಲ.

ಕೃಷಿ ಯಂತ್ರೋಪಕರಣ, ಕೃಷಿ ನೀರಾವರಿ ಸಲಕರಣೆ, ಕುರಿ, ಕೋಳಿ, ಮೀನು ಸಾಕಣೆ... ಹೀಗೆ ಹಲವು ವಿಭಾಗಗಳನ್ನು ಮಾಡಿ ಮಳಿಗೆಗಳನ್ನು ನಿರ್ಮಿಸಲಾಗಿದೆ. ಎರಡು ಬದಿಯಲ್ಲಿ ಮಳಿಗೆ ಇದ್ದರೆ ಮಧ್ಯದಲ್ಲಿ ಜನರ ಓಡಾಟಕ್ಕೆ ವಿಶಾಲವಾದ ಜಾಗ ಬಿಡಲಾಗಿದೆ. ಮಳಿಗೆ ನಿರ್ಮಿಸಲು ಮಣ್ಣು ಅಗೆದು ಸಿದ್ಧಪಡಿಸಲಾಗಿದ್ದು, ಅದರ ಮೇಲೆ ಸುರಿದ ಮಳೆಯಿಂದಾಗಿ ಇಡೀ ಆವರಣ ಸಂಪೂರ್ಣ ಕೆಸರುಗದ್ದೆಯಾಗಿ ಮಾರ್ಪಟ್ಟಿತ್ತು.

ಒಂದೆಡೆಯಿಂದ ಮತ್ತೊಂದೆಡೆಗೆ ಮಳೆಯ ನಡುವೆ ಸಾಗುವುದೇ ಪ್ರಯಾಸವಾಗಿತ್ತು. ದೂರದ ಊರುಗಳಿಂದ ಬಂದಿದ್ದ ರೈತರು ಎಲ್ಲ ಮಳಿಗೆಗಳಿಗೆ ಭೇಟಿ ನೀಡಲು ಸಾಧ್ಯವಾಗದೆ ನಿಂತಲ್ಲೇ ನಿಲ್ಲಬೇಕಾಯಿತು.

ಊಟದ ಹಾಲ್‌ಗೆ ಹೋಗಲು ದಾರಿಯೇ ಇಲ್ಲದೆ ಜನ ಬಿದ್ದು ಎದ್ದು ಕೆಸರಿನಲ್ಲೇ ಊಟದ ಅಂಕಣಕ್ಕೆ ಸಾಗುವುದು ಅನಿವಾರ್ಯವಾಗಿತ್ತು. ಅದರ ಪಕ್ಕದಲ್ಲಿ ಅಳವಡಿಸಿರುವ ಆಹಾರ ಮಳಿಗೆಗಳಲ್ಲಿ ಬಗೆ ಬಗೆಯ ಸಸ್ಯಾಹಾರ ಮತ್ತು ಮಾಂಸಾಹಾರದ ಮಳಿಗೆಗಳಿದ್ದವು. ಆದರೆ, ಮಳೆ ನಡುವೆ ಕುಳಿತು ಊಟ ಮಾಡಲು ಸಾಧ್ಯವಾಗದ ಕಾರಣ ಆ ಮಳಿಗೆಗಳಲ್ಲಿ ಜನರಿಲ್ಲದೆ ಖಾಲಿ ಇದ್ದವು.

'ಮೇಳದಲ್ಲಿ ರೈತರು ತಿಳಿದುಕೊಳ್ಳಬೇಕಾದ ಹಲವು ತಳಿ ಮತ್ತು ತಂತ್ರಜ್ಞಾನದ ಮಾಹಿತಿ ಇದೆ. ಆದರೆ, ಮಳೆ ಕಾರಣ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗುವುದೇ ಕಷ್ಟವಾಗಿದೆ' ಎಂದು ಎಚ್.ಡಿ. ಕೋಟೆಯಿಂದ ಬಂದಿದ್ದ ಮಂಜುನಾಥ್ ಹೇಳಿದರು.

ಹಳ್ಳಿಕಾರ್ ತಳಿಯ ಹೋರಿಗಳು



ಮಂಡ್ಯದ ಬನ್ನೂರಿನ ಕೃಷ್ಣೇಗೌಡ ಅವರ ಹಳ್ಳಿಕಾರ್ ತಳಿಯ ಹೋರಿ

ಬೆಂಗಳೂರು: ಕೃಷಿ ಮೇಳದಲ್ಲಿ ಪಶು ಸಂಗೋಪನಾ ವಿಭಾಗದ ಮಳಿಗೆಗಳಲ್ಲಿ ಈ ಬಾರಿ ಹಳ್ಳಿಕಾರ್ ತಳಿಯ ಹೋರಿಗಳದ್ದೇ ಕಾರುಬಾರು.

ಹಳ್ಳಿಕಾರ್ ತಳಿಯ ಹೋರಿಯೊಂದನ್ನು ಮಂಡ್ಯ ಜಿಲ್ಲೆಯ ಬನ್ನೂರಿನ ಕೃಷ್ಣೇಗೌಡ ತಂದಿದ್ದರು. ರೈತರು ಮುಗಿಬಿದ್ದು ಈ ಹೋರಿಯನ್ನು ವೀಕ್ಷಿಸಿದರು. ಕೆಲವರು ಹೋರಿಯೊಂದಿಗೆ ನಿಂತು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

'ರಾಮನಗರದಿಂದ ಈ ಹೋರಿಯನ್ನು ಖರೀದಿಸಿ ತಂದಿದ್ದೇನೆ. ಇದನ್ನು ಸಂತಾನೋತ್ಪತ್ತಿಗೆ ಮಾತ್ರ ಬಳಸಲಾಗುತ್ತಿದೆ. ಎರಡು ವರ್ಷ ಎರಡು ತಿಂಗಳು ವಯಸ್ಸಿನ ಈ ಹೋರಿ ₹1.75 ಲಕ್ಷ ಮೌಲ್ಯ ಹೊಂದಿದೆ. ಕೆಲವರು ಹೋರಿ ಮೌಲ್ಯದ ಬಗ್ಗೆ ಸುಳ್ಳು ಹೇಳಿ ಪ್ರಚಾರ ತೆಗೆದುಕೊಳ್ಳುತ್ತಾರೆ. ಅದರ ಅಗತ್ಯ ಇರುವುದಿಲ್ಲ' ಎಂದು ಕೃಷ್ಣೇಗೌಡ ಹೇಳಿದರು.

ಹೊಸಕೋಟೆ ತಾಲ್ಲೂಕಿನ ಸಮೇತನಹಳ್ಳಿ ಗ್ರಾಮದ ಶಾಂತಕುಮಾರ್ ಎಂಬುವರು ₹1.50 ಲಕ್ಷ ಮೌಲ್ಯದ ಜೋಡೆತ್ತುಗಳನ್ನು ಮೇಳದಲ್ಲಿ ಕಟ್ಟಿದ್ದರು. ಮತ್ತೊಂದೆಡೆ ಕನಕಪುರದ ಹಾರವಳ್ಳಿಯ ಶಾಮಣ್ಣ ಅವರು 4 ಲಕ್ಷ ಮೌಲ್ಯ ಹಳ್ಳಿಕಾರ್ ತಳಿಯ ಜೋಡೆತ್ತುಗಳನ್ನು ಕಟ್ಟಿದ್ದರು.

ಇವುಗಳ ಜೊತೆಗೆ ಪ್ರತಿ ವರ್ಷದಂತೆ ಕಡಕನಾತ್ ಕೋಳಿಗಳು ಮೇಳದಲ್ಲಿ ಜನರನ್ನು ಆಕರ್ಷಿಸಿದವು.

ಕೃಷಿ ವಿಶ್ವವಿದ್ಯಾಲಯದಿಂದ ಹೊಸ ಸಂಪ್ರದಾಯಕ್ಕೆ ನಾಂದಿ

ಮೇಳಕ್ಕೆ ಆದಿವಾಸಿ ಮಹಿಳೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರವು (ಜಿಕೆವಿಕೆ) ಹೊಸ ಸಂಪ್ರದಾಯವೊಂದಕ್ಕೆ ಗುರುವಾರ ನಾಂದಿ ಹಾಡಿತು. ಆದಿವಾಸಿ ಕೃಷಿಕ ಮಹಿಳೆ ಪ್ರೇಮ ದಾಸಪ್ಪ ಅವರು 2021ನೇ ಸಾಲಿನ ಕೃಷಿ ಮೇಳಕ್ಕೆ ಚಾಲನೆ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೇಳ ಉದ್ಘಾಟಿಸಬೇಕಿತ್ತು. ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಬೇಕಿತ್ತು. ವಿಧಾನ ಪರಿಷತ್ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜನಪ್ರತಿನಿಧಿಗಳು ಮೇಳಕ್ಕೆ ಬರಲಿಲ್ಲ.

ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಸೊಳ್ಳೆಪುರ ಹಾಡಿಯ ಪ್ರೇಮ ಅವರು 4 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಪದ್ಧತಿ ಮೂಲಕ ವಾರ್ಷಿಕ ₹5 ಲಕ್ಷ ನಿವ್ವಳ ಆದಾಯ ಗಳಿಸುತ್ತಿದ್ದಾರೆ. ಜೇನು ಸಾಕಣೆ ಹಾಗೂ ಅಣಬೆ ಬೇಸಾಯದ ಮೂಲಕವೂ ಹಲವರಿಗೆ ಮಾದರಿಯಾಗಿದ್ದಾರೆ. ಹೀಗಾಗಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಪ್ರೇಮ ಅವರಿಂದ ಮೇಳ ಉದ್ಘಾಟಿಸಲು ನಿರ್ಧರಿಸಿತು.

ಮೇಳವು ಒಟ್ಟು ನಾಲ್ಕು ದಿನ ನಡೆಯಲಿದ್ದು, ಮೊದಲ ದಿನ ಸುಮಾರು 15 ಸಾವಿರ ಮಂದಿ ಭಾಗಿಯಾಗಿದ್ದರು.



ಪ್ರೇಮ ದಾಸಪ್ಪ ಅವರು ಮೇಳ ಉದ್ಘಾಟಿಸಿದರು. (ಎಡದಿಂದ) ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್‌ಆರ್‌ಉಮಾಶಂಕರ್, ವಿಶ್ವವಿದ್ಯಾಲಯದ ಕುಲಪತಿ ಎಸ್‌ರಾಜೇಂದ್ರ ಪ್ರಸಾದ್, ಐಸಿಎಆರ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕ ಎಸ್‌ ಅಯ್ಯಪ್ಪನ್, ಕೃಷಿ ಇಲಾಖೆಯ ನಿರ್ದೇಶಕ ಬಿ.ವೈ.ಶ್ರೀನಿವಾಸ್ ಇದ್ದರು

ರಾಜ್ಯದ ವಿವಿಧ ಜಿಲ್ಲೆಗಳ ಪ್ರಗತಿಪರ ರೈತರು ತಾವು ಸಾಕಿರುವ ಹೋರಿಗಳು, ವಿವಿಧ ತಳಿಯ ಕೋಳಿ ಹಾಗೂ ಕುರಿಗಳು ಹಾಗೂ ಅಭಿವೃದ್ಧಿಪಡಿಸಿರುವ ಯಂತ್ರೋಪಕರಣಗಳನ್ನು ಪ್ರದರ್ಶನಕ್ಕಿಟ್ಟಿದ್ದು, ಅದಕ್ಕಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ಒಟ್ಟು 560ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿದೆ.

₹3 ಲಕ್ಷ, ₹1.75 ಲಕ್ಷ ಮೌಲ್ಯದ ಹಳ್ಳಿಕಾರ್ ಹೋರಿಗಳು, ₹5 ಲಕ್ಷ ಮೌಲ್ಯದ ಡಾರ್ಪರ್ ತಳಿಯ ಟಗರು ಮೇಳದ ಆಕರ್ಷಣೆಯಾಗಿದ್ದವು. ಅವುಗಳ ಬೆಲೆ ಕೇಳಿ ಬಂದವರೆಲ್ಲಾ ಬೆರಗಾಗುತ್ತಿದ್ದರು. ಕಪ್ಪು ವರ್ಣದ ಖಡಕ್‌ನಾಥ್ ತಳಿಯ ಕೋಳಿ ಹಾಗೂ ಹುಂಜಗಳನ್ನು ನೋಡಲು, ಅವುಗಳ ಮರಿಗಳನ್ನು ಖರೀದಿಸಲು ಜನ ಮುಗಿಬಿದ್ದಿದ್ದರು. ಅನೇಕರು ಕೃಷಿ ಯಂತ್ರೋಪಕರಣಗಳನ್ನು ನೋಡುತ್ತಿದ್ದ, ಅವುಗಳ ಕಾರ್ಯ ವೈಖರಿಯ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದ ದೃಶ್ಯಗಳೂ ಕಂಡುಬಂದವು.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಾಧನೆ ಮಾಡಿದವರಿಗೆ ಅತ್ಯುತ್ತಮ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ವಿಶ್ವವಿದ್ಯಾಲಯದಲ್ಲಿ ಸಂಶೋಧಿಸಿರುವ 10 ಬಗೆಯ ಹೊಸ ಕೃಷಿ ತಳಿಗಳನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

'ಹಾಲು ಉತ್ಪಾದಕರಿಗೆ ಇನ್ನೆರಡು 3ಂಗಳಲ್ಲಿ ಹೆಚ್ಚಿನ ದರ ನೀಡಿಕೆ'

ದಾಬಸ್ ಪೇಟೆ: 'ಗುಣಮಟ್ಟದ ಹಾಲು ಉತ್ಪಾದನೆಗೆ ಬಿಎಂಸಿ ಕೇಂದ್ರ ಸ್ಥಾಪನೆ ಮಾಡಲಾಗುತ್ತದೆ. ಹಿಂದೆ ಕ್ಯಾನ್‌ಗಳ ಮೂಲಕ ಹಾಲುಗಳನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಹಾಲಿನ ಗುಣ ಮಟ್ಟ 30 ಪರ್ಸೆಂಟ್ ಇತ್ತು. ಬಿಎಂಸಿ ಕೇಂದ್ರ ಸ್ಥಾಪನೆಯಾದ ನಂತರ 98 ಪರ್ಸೆಂಟ್ ಗುಣಮಟ್ಟದ ಹಾಲು ಸಿಗುತ್ತಿದೆ. ಇದರಿಂದ ಹಾಲು ಉತ್ಪಾದಕರಿಗೆ ಅನುಕೂಲ ಆಗುವುದರ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಹಾಯವಾಗುತ್ತಿದೆ' ಎಂದು ಬೆಂಗಳೂರು ಸಹಕಾರ ಹಾಲು ಒಕ್ಕೂಟ ಅಧ್ಯಕ್ಷ ನರಸಿಂಹಮೂರ್ತಿ ತಿಳಿಸಿದರು

ನೆಲಮಂಗಲ ತಾಲ್ಲೂಕು ಹಾಲೇನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಹಾಗೂ ಮೂರು ಸಾವಿರ ಲೀಟರ್ ಸಾಮರ್ಥ್ಯದ ಬಿಎಂಸಿ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

ನೆಲಮಂಗಲ ತಾಲ್ಲೂಕಿನಲ್ಲಿ ಕ್ಯಾನ್ ರೂಟ್ ತೆಗೆದುಹಾಕಿ ಟ್ಯಾಂಕ್‌ನಲ್ಲಿ ಹಾಲು ಸರಬರಾಜು ಮಾಡುವ ಯೋಜನೆ ಯಶಸ್ವಿಯಾಗಿದ್ದು, ತಾಲ್ಲೂಕಿನ ಎಲ್ಲೆಡೆ ಬಿಎಂಸಿ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದು ಮುಂದಿನ ದಿನಗಳಲ್ಲಿ ತಾಲ್ಲೂಕಿನಾದ್ಯಂತ ಟ್ಯಾಂಕರ್‌ಗಳಲ್ಲಿ ಹಾಲು ಸರಬರಾಜಾಗುತ್ತದೆ' ಎಂದರು.

'ಕೆಲವು ದಿನಗಳ ಹಿಂದೆ ಹಾಲಿನ ಪುಡಿ ಮತ್ತು ಬೆಣ್ಣೆ ಬೆಲೆ ಕೆ.ಜಿಗೆ ₹20 ಹೆಚ್ಚಾಗಿದ್ದು, ಇನ್ನೆರಡು ತಿಂಗಳಲ್ಲಿ ರೈತರಿಗೆ ಹೆಚ್ಚಿನ ದರ ನೀಡಲಾಗುತ್ತದೆ' ಎಂದು ತಿಳಿಸಿದರು.

ಬಮೂಲ್‌ನ ನೆಲಮಂಗಲ ತಾಲ್ಲೂಕು ನಿರ್ದೇಶಕ ಜಿ.ಆರ್.ಭಾಸ್ಕರ್ ಮಾತನಾಡಿ, 'ಸಂಘಕ್ಕೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮುಖೇನ ರೈತರು ಬೆಳೆಸಬೇಕು. ಸಂಘದ ಪ್ರಗತಿಗೆ ಬೆಂಗಳೂರು ಹಾಲು ಒಕ್ಕೂಟ ಸಹಕಾರ ನೀಡುತ್ತದೆ' ಎಂದು ಹೇಳಿದರು.

ನೂತನ ಕಟ್ಟಡ ನಿರ್ಮಾಣ ಮಾಡಲು ಕರ್ನಾಟಕ ಹಾಲು ಮಹಾಮಂಡಳ ₹4.50 ಲಕ್ಷ, ಬೆಂಗಳೂರು ಹಾಲು ಒಕ್ಕೂಟ ₹7 ಲಕ್ಷ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ₹2 ಲಕ್ಷ ಅನುದಾನ ನೀಡಿವೆ. ಇತರ ದಾನಿಗಳ ಸಹಾಯ ಹಾಗೂ ಸಂಘದ ಉಳಿತಾಯ ಬಳಸಿಕೊಳ್ಳಲಾಗಿದೆ. ಪಾರ್ವತಮ್ಮ ಎಂ.ಆರ್.ಲಕ್ಷ್ಮಣಪ್ಪ ಅವರು ಮೊದಲ ಅಂತಸ್ತಿನ ಕಟ್ಟಡವನ್ನು ಸ್ವಂತ ವೆಚ್ಚದಲ್ಲಿ ನಿರ್ಮಿಸಿಕೊಟ್ಟಿದ್ದಾರೆ.

ಕಾರ್ಯಕ್ರಮದಲ್ಲಿ ವನಕಲ್ಲು ಮಠದ ಬಸವ ರಮಾನಂದ ಸ್ವಾಮೀಜಿ, ಬಮೂಲ್ ನೆಲಮಂಗಲ ತಾಲ್ಲೂಕು ಉಪ ವ್ಯವಸ್ಥಾಪಕ ಡಾ. ಆರ್. ಗೋಪಾಲ ಗೌಡ, ಸಂಘದ ಅಧ್ಯಕ್ಷ ನಯಾಜ್ ಖಾನ್, ಡೈರಿ ಕಾರ್ಯದರ್ಶಿ ವನಿತಾ ಶಿವಕುಮಾರ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸಾದಿಕ್ ಪಾಷಾ, ವಿಸ್ತರಣಾಧಿಕಾರಿ ಚಂದನ್ ಇದ್ದರು.

ಪಟಾಕಿ ಗಲಾಟೆ; ಮಾರಕಾಸ್ತ್ರದಿಂದ ಹಲ್ಲೆ, ಐವರ ಬಂಧನ

ಬೆಂಗಳೂರು: ಪಟಾಕಿ ವಿಚಾರವಾಗಿ ಎರಡು ಗುಂಪಿನ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಐವರು ಆರೋಪಿಗಳನ್ನು ಕೆಂಪೇಗೌಡ ನಗರ ಪೊಲೀಸರು ಬಂಧಿಸಿದ್ದಾರೆ.

'ಉಚಿತವಾಗಿ ಪಟಾಕಿ ಕೇಳಿದ್ದರು. ಕೊಡದಿದ್ದಾಗ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ಮಾಲೀಕ ಮಧು ಪೊಲೀಸರಿಗೆ ದೂರು ನೀಡಿದ್ದಾರೆ.

ಈ ಸಂಬಂಧ ಪ್ರತ್ಯೇಕ ದೂರು ನೀಡಿರುವ ಗೌತಮ್ ಎಂಬುವರು, 'ಸಾರ್ವಜನಿಕರ ಗುಂಪು ನನ್ನ ಮೇಲೆ ಹಲ್ಲೆ ಮಾಡಿದೆ' ಎಂದು ಆರೋಪಿಸಿದ್ದಾರೆ.

ಉಚಿತ ಪಟಾಕಿ ನೀಡದಿದ್ದಕ್ಕೆ ಗಲಾಟೆ: 'ಬಸವನಗುಡಿಯಲ್ಲಿರುವ ಮಳಿಗೆ ಮಾಲೀಕ ನೀಡಿದ್ದ ದೂರು ಆಧರಿಸಿ ಆರೋಪಿಗಳಾದ ವಿಕ್ರಮ್, ಅಜಿತ್, ವೀರಮಣಿ, ಅಪ್ಪು ಹಾಗೂ ವಿಜಯ್ ಎಂಬುವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಉಚಿತವಾಗಿ ಪಟಾಕಿ ನೀಡುವಂತೆ ಒತ್ತಾಯಿಸಿ ಮಾರಕಾಸ್ತ್ರಗಳಿಂದ ಮಾಲೀಕನ ಮೇಲೆ ಹಲ್ಲೆ ಮಾಡಿದ್ದರೆಂದು ಗೊತ್ತಾಗಿದೆ.'

'ಗಲಾಟೆ ಕಂಡು ವಿಚಾರಿಸಿದ ಸ್ಥಳೀಯರ ಮೇಲೆಯೂ ಆರೋಪಿಗಳು ಹರಿಹಾಯ್ದಿದ್ದರು. ಸಿಟ್ಟಾದ ಸಾರ್ವಜನಿಕರು, ಗೌತಮ್ ಎಂಬುವವನನ್ನು ಹಿಡಿದಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

ಒತ್ತುವರಿಯಾಗಿದ್ದ 4 ಎಕರೆ 20 ಗುಂಟೆ ಒತ್ತುವರಿ ತೆರವು

ಜೆ.ಪಿ.ನಗರ: 40 ಶೆಡ್ ನೆಲಸಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ.ನಗರದ ಆಲಹಳ್ಳಿಯಲ್ಲಿ ಒತ್ತುವರಿಯಾಗಿದ್ದ 4 ಎಕರೆ 20 ಗುಂಟೆ ಸ್ವತ್ತನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಗುರುವಾರ ಸ್ವಾಧೀನಪಡಿಸಿಕೊಂಡಿದೆ. ಒತ್ತುವರಿಯಾಗಿದ್ದ ಜಾಗದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ 40 ಶೆಡ್‌ಗಳನ್ನು ಪ್ರಾಧಿಕಾರವು ನೆಲಸಮ ಮಾಡಿದೆ.

ಆಲಹಳ್ಳಿಯ ಸರ್ವೆ ನಂಬರ್ 5/7, 6/1, 6/4, 6/5, 7/2, 3, 4 ಮತ್ತು 8ರಲ್ಲಿ ಬಿಡಿಎ ಜಾಗ ಒತ್ತುವರಿ ಮಾಡಿ ಶೆಡ್‌ಗಳನ್ನು ನಿರ್ಮಿಸಲಾಗಿತ್ತು. ಶೆಡ್‌ಗಳನ್ನು ತೆರವುಗೊಳಿಸಲಾದ ಜಾಗದ ಮೌಲ್ಯ ಸುಮಾರು ₹ 100 ಕೋಟಿ ಎಂದು ಅಂದಾಜಿಸಲಾಗಿದೆ.

ಜೆ.ಪಿ.ನಗರ ಬಡಾವಣೆಯ 9 ನೇ ಹಂತದ ನಿರ್ಮಾಣಕ್ಕೆಂದು 1988 ರಲ್ಲಿ ಈ ಜಾಗ ಸ್ವಾಧೀನಪಡಿಸಿಕೊಳ್ಳಲು ಬಿಡಿಎ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 1997 ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿ ಜಾಗವನ್ನು ಸ್ವಾಧೀನಕ್ಕೆ ಪಡೆದಿತ್ತು. ಕೆಲವರು ತಾತ್ಕಾಲಿಕವಾಗಿ ಶೆಡ್‌ಗಳನ್ನು ನಿರ್ಮಿಸಿ ಆ ಜಾಗ ತಮ್ಮದೆಂದು ಪ್ರತಿಪಾದಿಸಿದ್ದರು. ಈ ಕುರಿತ ವ್ಯಾಜ್ಯದಲ್ಲಿ ನ್ಯಾಯಾಲಯವು ಬಿಡಿಎ ಪರವಾಗಿ ಇತ್ತೀಚೆಗೆ ತೀರ್ಪು ನೀಡಿತ್ತು. ಒತ್ತುವರಿಯಾದ ಜಾಗವನ್ನು ಮತ್ತೆ ಸುಪರ್ದಿಗೆ ಪಡೆಯುವಂತೆಯೂ ಆದೇಶ ಮಾಡಿತ್ತು.

ನ್ಯಾಯಾಲಯದ ಆದೇಶದ ಮೇರೆಗೆ ಬಿಡಿಎ ಅಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿ ಭಾಸ್ಕರ್, ಡಿವೈಎಸ್ ಪಿ ರವಿಕುಮಾರ್ ಸೇರಿದಂತೆ 75 ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯ ಭದ್ರತೆಯಲ್ಲಿ ಶೆಡ್ ಗಳನ್ನು ತೆರವುಗೊಳಿಸಿದರು.

ಅತಿಕ್ರಮಣ ತೆರವು ಕುರಿತು ಪ್ರತಿಕ್ರಿಯಿಸಿದ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, 'ಒತ್ತುವರಿ ಮಾಡಿದವರು ಎಷ್ಟೇ ಪ್ರಭಾವಿಗಳಾಗಿದ್ದರೂ ಬಿಡುವುದಿಲ್ಲ. ಸ್ವಾಧೀನಪಡಿಸಿಕೊಂಡ ಜಮೀನನ್ನು ಹಂತಹಂತವಾಗಿ ನಿವೇಶನಗಳನ್ನಾಗಿ ಅಭಿವೃದ್ಧಿಪಡಿಸಿ ಹರಾಜಿನ ಮೂಲಕ ಹಂಚಿಕೆ ಪ್ರಕ್ರಿಯೆ ನಡೆಸಲಾಗುತ್ತದೆ' ಎಂದು ತಿಳಿಸಿದರು.



ಜೆ.ಪಿ.ನಗರದ ಆಲಹಳ್ಳಿಯಲ್ಲಿ ಬಿಡಿಎ ಜಾಗವನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಿದ್ದ ಶೆಡ್‌ಗಳನ್ನು ಗುರುವಾರ ತೆರವುಗೊಳಿಸಲಾಯಿತು

ಬಿಟ್‌ಕಾಯಿನ್ ದಂಧೆಯಲ್ಲಿ ಕಾಂಗ್ರೆಸ್: ಬಿಜೆಪಿ ಆರೋಪ

ಬೆಂಗಳೂರು: ಬಿಟ್‌ಕಾಯಿನ್ ದಂಧೆ ಬಗ್ಗೆ ಸಿದ್ದರಾಮಯ್ಯ ಅವರಲ್ಲಿ ದಾಖಲೆ ಇದ್ದರೆ ಬಿಡುಗಡೆ ಮಾಡಲಿ. ಹಗರಣದಲ್ಲಿ ಯಾರಿದ್ದಾರೆ ಎಂಬ ಹೆಸರುಗಳನ್ನು ಕೊಡಲಿ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣ ಆಗ್ರಹಿಸಿದರು.

ಯುಬಿ ಸಿಟಿ ಗಲಾಟೆಯಲ್ಲಿ ಕಾಂಗ್ರೆಸ್ ಶಾಸಕ ಎನ್.ಎ. ಹ್ಯಾರಿಸ್ ಅವರ ಪುತ್ರ ಮಹಮ್ಮದ್ ನಲಪಾಡ್ ಅವರ ಹೆಸರಿತ್ತು. ಇವರ ಜೊತೆ ಬಿಟ್‌ಕಾಯಿನ್ ಆರೋಪಿ ಶ್ರೀಕೃಷ್ಣನ ಹೆಸರೂ ಇತ್ತು. ಆಗಲೇ ಬಿಟ್‌ಕಾಯಿನ್ ವಿಚಾರ ಚರ್ಚೆಗೆ ಬಂದಿತ್ತು ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶ್ರೀಕೃಷ್ಣ ಕಾಂಗ್ರೆಸ್ ಶಾಸಕರು ಮತ್ತು ಅವರ ಮಕ್ಕಳ ಹೆಸರುಗಳನ್ನು ಹೇಳಿದ್ದಾನೆ. ಇದಕ್ಕೆ ಸಿದ್ದರಾಮಯ್ಯ ಏನು ಹೇಳುತ್ತಾರೆ? ಸಮಾಜಘಾತುಕ ಚಟುವಟಿಕೆಗಳಲ್ಲಿ ಕಾಂಗ್ರೆಸ್ ಪಕ್ಷದ ಎರಡನೇ ಹಂತದ ನಾಯಕತ್ವ ಇದೆ. ಬಿಜೆಪಿ ವಿರುದ್ಧ ದಾಖಲೆ ಇಲ್ಲದೇ ಆರೋಪಿಸುವುದು ಸರಿಯಲ್ಲ. ಇದೇ ಪ್ರವೃತ್ತಿ ಮುಂದುವರಿಸಿದರೆ ಸಿದ್ದರಾಮಯ್ಯ ವಿರುದ್ಧ ಪೊಲೀಸರಿಗೆ ದೂರು ನೀಡಲಾಗುವುದು ಎಂದು ಅವರು ಹೇಳಿದರು.



ಸಮರ್ಥನಂ ಸಂಸ್ಥೆಯ ಜಿ.ಕೆ ಮಹಂತೇಶ್ ಅವರನ್ನು ನಟ ಶಿವರಾಂ ಅವರು ಸನ್ಮಾನಿಸಿದರು. ಸ್ನೇಕ್ ಲೋಕೇಶ್, ನಿರ್ಮಲಾ ಜಕಣಾಚಾರಿ ಇದ್ದರು

'ಕನ್ನಡ ಬದುಕಿನ ಸಂಸ್ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾರಸ್ವತ ಮತ್ತು ಸಾಂಸ್ಕೃತಿಕ ಲೋಕದ ದಿಗ್ಗಜರ ಕೊಡುಗೆಯಿಂದ ಕನ್ನಡ ಭಾಷೆ ಶ್ರೀಮಂತಗೊಂಡಿದೆ' ಎಂದು ಹಿರಿಯ ನಟ ಶಿವರಾಂ ಹೇಳಿದರು.

ಮಯೂರ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ಮಲ್ಲೇಶ್ವರದಲ್ಲಿ ಗುರುವಾರ ನಡೆದ 'ಕನ್ನಡ ಹಾಡುಗಳ ಹಬ್ಬ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಕನ್ನಡವೆಂದರೆ ಕೇವಲ ಭಾಷೆಯಲ್ಲ. ಅದು ನಮ್ಮ ಬದುಕಿನ ಸಂಸ್ಕೃತಿಯೇ ಆಗಿದೆ. ಅನೇಕ ಕವಿಗಳು, ಕಲಾವಿದರು, ನಟರು ಕನ್ನಡವನ್ನು ಸಮೃದ್ಧಗೊಳಿಸಲು ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಕನ್ನಡವನ್ನು ಉಳಿಸಿ ಬೆಳೆಸಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ' ಎಂದು ಹೇಳಿದರು.

ಸ್ನೇಕ್ ಲೋಕೇಶ್, ಸಮರ್ಥನಂನ ಜಿ.ಕೆ ಮಹಂತೇಶ್ ಇದ್ದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ.ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	25.24 ಕೋಟಿ ▲	3.44 ಕೋಟಿ ▲
ಸಕ್ರಿಯ ಪ್ರಕರಣ	1.89 ಕೋಟಿ ▲	1.38 ಲಕ್ಷ ▼
ಗುಣಮುಖ	22.84 ಕೋಟಿ ▲	3.37 ಕೋಟಿ
ಸಾವು	50.93 ಲಕ್ಷ ▲	4.62 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.52 ಲಕ್ಷ ▲	13,091 ▲
ಗುಣಮುಖ	4.23 ಲಕ್ಷ ▼	13,878 ▲
ಸಾವು	8,334 ▲	340 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 94,376 ಅಮೆರಿಕ ▲; 39,329 ಬ್ರಿಟನ್ ▲; 50,196 ಜರ್ಮನಿ ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 91.65 ಅಮೆರಿಕ ▲; 15.63 ಬ್ರಿಟನ್ ▲; 10.07 ರಷ್ಯಾ ▲

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,247 ತಮಿಳುನಾಡು ▲; 34,621 ಕೇರಳ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.20 ಮಹಾರಾಷ್ಟ್ರ ▲; 50.34 ಕೇರಳ ▲; 27.11 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಾಜ್ಯ ಕೋವಿಡ್ ಅಂಕಿ–ಅಂಶ

29,91,142 ▲ ಒಟ್ಟು ಸೋಂಕಿತರು (29,90,856 ನಿನ್ನೆಯ ವಿವರ)

8,017 ▼ ಸಕ್ರಿಯ ಪ್ರಕರಣಗಳು

29,44,958 ▲ ಗುಣಮುಖರಾದವರು

38,138 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	286	▼
ಗುಣಮುಖ	289	▲
ಸಾವು	07	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,53,522 ▲ ಒಟ್ಟು ಪ್ರಕರಣಗಳು (12,53,353 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,562 ▼	12,30,653 ▲	16,306 ▲

ದಿನದ ಏರಿಕೆ

ಹೊಸ ಪ್ರಕರಣ	169	▼
ಗುಣಮುಖ	171	▲
ಸಾವು	03	▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕಣದಿಂದ ಹಿಂದೆ ಸರಿದ ಅಭ್ಯರ್ಥಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನ ಬೆಂಗಳೂರು ನಗರ ಜಿಲ್ಲೆ ಘಟಕದ ಅಧ್ಯಕ್ಷ ಸ್ಥಾನಕ್ಕೆ ಇದೇ 21ರಂದು ನಡೆಯುವ ಚುನಾವಣೆಯ ಅಭ್ಯರ್ಥಿ ಕುವೆಂಪು ಪ್ರಕಾಶ್ ಅವರು ಕಣದಿಂದ ಹಿಂದೆ ಸರಿದಿದ್ದಾರೆ.

ಇನ್ನೊಬ್ಬ ಅಭ್ಯರ್ಥಿ ಎಂ.ತಿಮ್ಮಯ್ಯ ಅವರಿಗೆ ಪ್ರಕಾಶ್ ಬೆಂಬಲ ವ್ಯಕ್ತಪಡಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಗುರುವಾರ ಅವರು ಈ ವಿಚಾರ ತಿಳಿಸಿದರು.

'ತಿಮ್ಮಯ್ಯ ಅವರನ್ನು ಐದು ದಶಕಗಳಿಂದ ಬಲ್ಲೆ. ಕನ್ನಡ ನಾಡು, ನುಡಿ, ನೆಲ, ಜಲ ಸಂರಕ್ಷಣೆಗೆ ಸಂಬಂಧಿಸಿದ ಹೋರಾಟಗಳಲ್ಲಿ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಗೋಕಾಕ್ ಚಳವಳಿ, ಸರೋಜಿನಿ ಮಹಿಷಿ ವರದಿ ಜಾರಿಗೆ ಸಂಬಂಧಿಸಿದ ಚಳವಳಿಗಳಲ್ಲೂ ಭಾಗವಹಿಸಿದ್ದಾರೆ. ತಿಮ್ಮಯ್ಯ ಅವರಿಗೆ ಮತ ನೀಡಿ ಅವರನ್ನು ಗೆಲ್ಲಿಸಬೇಕು' ಎಂದು ಪ್ರಕಾಶ್ ಮನವಿ ಮಾಡಿದರು.

ಮನ್‌ಮುಲ್: ಹಾಲು ಖರೀದಿ ದರ ₹ 2 ಕಡಿತ

ಮದ್ದೂರು (ಮಂಡ್ಯ ಜಿಲ್ಲೆ): ಮಂಡ್ಯ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ (ಮನ್‌ಮುಲ್) ನಷ್ಟ, ಆರ್ಥಿಕ ಹಿನ್ನಡೆ ಕಾರಣ ನೀಡಿ, ರೈತರಿಂದ ಖರೀದಿಸುವ ಲೀಟರ್ ಹಾಲಿನ ದರದಲ್ಲಿ ₹ 2 ಕಡಿತಗೊಳಿಸಿದೆ.

ನೂತನ ದರ ನ.11ರಿಂದಲೇ ಜಾರಿಗೆ ಬಂದಿದ್ದು ಪ್ರತಿ ಲೀಟರ್ ಹಾಲು ₹ 26.90ರಿಂದ ₹ 24.90ಕ್ಕೆ ಇಳಿದಿದೆ. ಜೊತೆಗೆ ಸರ್ಕಾರದ ₹ 5 ಸಹಾಯಧನ ಸೇರಿ ರೈತರಿಗೆ ₹ 29.90 ದೊರೆಯಲಿದೆ. ಮೊದಲು ₹ 31.90 ಸಿಗುತ್ತಿತ್ತು.

ಮತಾಂತರ ಕಾಯ್ದೆ ಯಾರನ್ನೂ ಗುರಿಯಾಗಿಸಿ ಅಲ್ಲ– ಆರಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಒಂದು ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿ ಪ್ರಸ್ತಾವಿತ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರುವ ಉದ್ದೇಶ ಇಲ್ಲ' ಎಂದು ಕ್ರೈಸ್ತ ಸಮುದಾಯದ ಮುಖಂಡರಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಸ್ಪಷ್ಟಪಡಿಸಿದರು.

'ಸಮಗ್ರ ಸಾಮಾಜಿಕ ಹಿತಾಸಕ್ತಿ ಹಾಗೂ ಎಲ್ಲ ಧರ್ಮೀಯರೂ, ತಮ್ಮ ತಮ್ಮ ಧರ್ಮವನ್ನು ಶಾಂತಿ ಹಾಗೂ ಸಹಬಾಳ್ವೆಯಿಂದ ಆಚರಿಸಲು ಪೂರಕವಾಗುವಂತೆ ಕಾಯ್ದೆ ರೂಪಿಸಲು ಚಿಂತನೆ ನಡೆದಿದೆ' ಎಂದೂ ಅವರು ಹೇಳಿದರು.

ಮತಾಂತರ ನಿಷೇಧ ಕಾಯ್ದೆ ತರುವ ಕುರಿತು ಕ್ರೈಸ್ತ ಸಮುದಾಯದ ಮುಖಂಡರು ಸಚಿವರನ್ನು ಗುರುವಾರ ಭೇಟಿ ಮಾಡಿ ಚರ್ಚಿಸಿದರು. 'ಬಲವಂತದ ಮತಾಂತರವನ್ನು ನಾವೂ ವಿರೋಧಿಸುತ್ತೇವೆ' ಎಂದೂ ಮುಖಂಡರು ತಿಳಿಸಿದರು.

ನೆಲದಡಿಯಿಂದ ಹೊರ ಬಂದ ವರದಾ, ರುದ್ರ

ಬೆಂಗಳೂರು: ನಮ್ಮ ಮೆಟ್ರೊ ಎರಡನೇ ಹಂತದ ವಿಸ್ತರಣೆಯಲ್ಲಿ ಸುರಂಗ ಕೊರೆಯುತ್ತಿದ್ದ ವರದಾ ಹಾಗೂ ರುದ್ರ ಯಂತ್ರಗಳು ಗುರುವಾರ ನೆಲದಿಂದ ಹೊರಗೆ ಬಂದವು.

ವರದಾಯಂತ್ರವುರಾಷ್ಟ್ರೀಯಸೈನಿಕ ಶಾಲೆ ಬಳಿಯಿಂದ ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣದವರೆಗೆ ಒಟ್ಟು 594 ಮೀ ಉದ್ದದ ಸುರಂಗ ಕೊರೆದಿದೆ. ಈ ಯಂತ್ರವು 2021ರ ಮಾರ್ಚ್ 13ರಂದು ಕೆಲಸ ಆರಂಭಿಸಿತ್ತು.

ರುದ್ರ ಯಂತ್ರವು ಸುರಂಗ ಮಾರ್ಗದ ದಕ್ಷಿಣ ರ್‍ಯಾಂಪ್‌ನಿಂದ ಡೇರಿ ವೃತ್ತದವರೆಗೆ 614 ಮೀ ಸುರಂಗ ಕೊರೆದಿದೆ. ಈ ಯಂತ್ರವು 2021ರ ಏ. 23ರಂದು ಕೆಲಸ ಆರಂಭಿಸಿತ್ತು.

ಈ ಎರಡೂ ಯಂತ್ರಗಳನ್ನು ಜರ್ಮನಿಯಿಂದ ತರಿಸಿಕೊಳ್ಳಲಾಗಿದೆ. ಇವು 5.80 ಮೀ ವ್ಯಾಸದ ಸುರಂಗ ನಿರ್ಮಿಸುತ್ತಿವೆ.

13 ದ್ವಿಚಕ್ರ ವಾಹನ ಕದ್ದಿದ್ದವರ ಬಂಧನ


ಬೆಂಗಳೂರು: ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕದ್ದಿದ್ದ ಇಬ್ಬರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನವೀದ್ ಪಾಷಾ (21) ಹಾಗೂ ಸೈಯದ್ ರೋಷನ್ ಅಲಿಯಾಸ್ ರಾಕೆಸ್ (21) ಬಂಧಿತರು. ಅವರಿಂದ ₹ 6.45 ಲಕ್ಷ ಮೌಲ್ಯದ 13 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸುಬ್ರಹ್ಮಣ್ಯಪುರ, ಪುಟ್ಟೇನಹಳ್ಳಿ, ಕೋಣನಕುಂಟೆ, ಜೆ.ಪಿ. ನಗರ, ಬನಶಂಕರಿ, ಹನುಮಂತನಗರ, ಚನ್ನಮ್ಮನಕೆರೆ ಅಚ್ಚುಕಟ್ಟು ಹಾಗೂ ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಸಿಕ್ಕಿದೆ' ಎಂದೂ ವಿವರಿಸಿದರು.

ಮಳೆ ಹಾನಿ: ಬೆಳೆ ಸಮೀಕ್ಷೆ ಮಾಡಿಸಿ- ಸಿಎಂಗೆ ಪತ್ರ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ಮಳೆಯಿಂದ ಹಾನಿಯಾಗಿರುವ ಬೆಳೆಗಳ ಬಗ್ಗೆ ತಕ್ಷಣ ಸಮೀಕ್ಷೆ ಮಾಡಿಸಿ, ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

'ಕೃಷಿ ಇಲಾಖೆಯ ಮಾಹಿತಿಯ ಪ್ರಕಾರ ಅಕ್ಟೋಬರ್ ಅಂತ್ಯದ ವೇಳೆಗೆ 11.22 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಆದರೆ, ಸರ್ಕಾರ ಕೈ ಕಟ್ಟಿ ಕುಳಿತಿದೆ. ಹಾನಿಯಾದ ಬೆಳೆಗಳನ್ನು ಸಮರ್ಪಕವಾಗಿ ಸಮೀಕ್ಷೆ ಮಾಡಿಸುವುದಾಗಲಿ, ಪರಿಹಾರ ನೀಡುವುದಾಗಲಿ ಮಾಡಿಲ್ಲ' ಎಂದು ಅವರು ದೂರಿದ್ದಾರೆ.

'ಕೊಯ್ಲಿಗೆ ಬಂದ ಬೆಳೆಗಳು ಮಳೆಯಿಂದಾಗಿ ಹೊಲ ಗದ್ದೆಗಳಲ್ಲಿ ಕೊಳೆತು ಹೋಗುತ್ತಿವೆ. ಕಳೆದ ವರ್ಷ 77.65 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ಈ ಬಾರಿ 1.07 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹೆಚ್ಚಾಗಿ ಬಿತ್ತನೆಯಾಗಿದೆ. ಆದರೆ, ಆರಂಭದಲ್ಲಿ ಬಿತ್ತನೆ ಮಾಡುವಾಗ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಮಳೆ ಕೈಕೊಟ್ಟ ಕಾರಣ ಅನೇಕ ಜಿಲ್ಲೆಗಳಲ್ಲಿ ಬಿತ್ತನೆ ಬೀಜಗಳು ಸರಿಯಾಗಿ ಹುಟ್ಟಲಿಲ್ಲ. ಆನಂತರ ಸರಿಯಾದ ಸಮಯಕ್ಕೆ ರಸಗೊಬ್ಬರ ಸಿಗಲಿಲ್ಲ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಸುರಿಯುತ್ತಿರುವ ವ್ಯಾಪಕ ಮಳೆಯಿಂದಾಗಿ ಅಡಿಕೆ, ಕಾಫಿ, ಮೆಣಸು ಮುಂತಾದ ವಾಣಿಜ್ಯ ಬೆಳೆಗಳು ಸಮಸ್ಯೆಗಳನ್ನು ಎದುರಿಸುತ್ತಿವೆ. ಕೊಳೆ ರೋಗದ ಜೊತೆಗೆ ಅಡಿಕೆಗೆ ಹಳದಿ ಎಲೆ ರೋಗ ಬಂದಿದೆ. ಮೆಣಸಿನ ಬಳ್ಳಿಗಳು ಕೊಳೆತು ಹೋಗುತ್ತಿವೆ. ಕಾಫಿಯೂ ಕೊಳೆ ರೋಗದ ಸಮಸ್ಯೆ ಎದುರಿಸುತ್ತಿದೆ. ಆದರೆ, ಕೃಷಿ ಇಲಾಖೆಯ ಮಾಹಿತಿಗಳಲ್ಲಿ ಕಳೆದ ಒಂದೂವರೆ ತಿಂಗಳಿಂದ ಅತಿ ಹೆಚ್ಚು ಮಳೆ ಬಿದ್ದು ಹಾನಿಯಾಗಿರುವ ಜಿಲ್ಲೆಗಳ ಮಾಹಿತಿ ಇಲ್ಲ. ಮಲೆನಾಡು, ಕರಾವಳಿ ಜಿಲ್ಲೆಗಳ ಅಡಿಕೆ, ಮೆಣಸು, ಕಾಫಿಗೆ ಆಗಿರುವ ನಷ್ಟದ ಮಾಹಿತಿಯೂ ಇಲ್ಲ'.

'ಕೇಂದ್ರ ಸರ್ಕಾರವೂ ಕೂಡ ಸಮರ್ಪಕ ಪರಿಹಾರ ನೀಡುತ್ತಿಲ್ಲ. 2019-20, 2020-21ರ ವರ್ಷಗಳಲ್ಲಿ ಸುಮಾರು ₹ 1.5 ಲಕ್ಷದಿಂದ ₹ 2 ಲಕ್ಷ ಕೋಟಿ ನಷ್ಟವಾಗಿತ್ತು. ಕೇಂದ್ರ 2019-20ರಲ್ಲಿ ₹ 1,652.85, 2020-21ರಲ್ಲಿ ₹ 1,328.30 ಕೋಟಿ ಮಾತ್ರ ಬಿಡುಗಡೆ ಮಾಡಿದೆ. ಅಂದರೆ, ಕೇವಲ ₹ 2981.15 ಕೋಟಿ ಬಿಡುಗಡೆ ಮಾಡಿದೆ. 2021-22ರ ನಷ್ಟಕ್ಕೆ ನಯಾ ಪೈಸೆ ನೀಡಿಲ್ಲ. ಕೇಂದ್ರ ಮತ್ತು ರಾಜ್ಯಗಳೆರಡೂ ಈ ರೀತಿ ನಿರ್ಲಕ್ಷ್ಯ ತೋರಿಸುವುದು ಅಮಾನವೀಯ ನಡವಳಿಕೆ' ಎಂದೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಭಾಷೆ, ಸಾಂಸ್ಕೃತಿಕ ಅಸ್ಮಿತೆಯೇ ಬಿಜೆಪಿಗೆ ಸವಾಲು'

ಬೆಂಗಳೂರು: ಭಾಷೆ ಮತ್ತು ಸಾಂಸ್ಕೃತಿಕ ಅಸ್ಮಿತೆಯೇ ಮುಖ್ಯವಾಗಿರುವ ದಕ್ಷಿಣ ಭಾರತದತ್ತ ಬಿಜೆಪಿ ತನ್ನ ಚಿತ್ತ ಹರಿಸಿದೆ. ಕರ್ನಾಟಕ ಹೊರತುಪಡಿಸಿ ಉಳಿದ ರಾಜ್ಯಗಳಲ್ಲಿ ಅಧಿಕಾರ ಹಿಡಿಯಲು ಬಿಜೆಪಿಗೆ ಇದುವರೆಗೆ ಸಾಧ್ಯವಾಗಿಲ್ಲ. ಈ ರಾಜ್ಯಗಳಲ್ಲಿ ಅಸ್ತಿತ್ವ ಕಂಡುಕೊಳ್ಳಲು ಸಾಹಸ ಮಾಡುತ್ತಿರುವ ಬಿಜೆಪಿ, ವಿವಿಧ ರೀತಿಯ ಕಾರ್ಯತಂತ್ರಗಳನ್ನು ರೂಪಿಸಿದ್ದರೂ ಸಫಲವಾಗಿಲ್ಲ. 'ದಕ್ಷಿಣ ಭಾರತದಲ್ಲಿ ಬಿಜೆಪಿ ಹಿನ್ನಡೆಗೆ ಕಾರಣಗಳೇನು?' ಎನ್ನುವ ಕುರಿತು 'ಪ್ರಜಾವಾಣಿ' ಗುರುವಾರ ಆಯೋಜಿಸಿದ್ದ ಫೇಸ್ ಬುಕ್ ಲೈವ್ ಸಂವಾದದಲ್ಲಿ ಅತಿಥಿಗಳು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

'ಪ್ರಾದೇಶಿಕ ಪಕ್ಷಗಳಿಗೆ ಆದ್ಯತೆ'

ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಆದ್ಯತೆ ನೀಡಲಾಗುತ್ತಿದೆ. ಆದರೆ, ಈ ಪ್ರಾದೇಶಿಕ ಪಕ್ಷಗಳನ್ನು ಬದಿಗೊತ್ತಲು ಬಿಜೆಪಿ ಯತ್ನಿಸುತ್ತಿದೆ. ಹುಸಿ ಭರವಸೆಗಳಿಂದ ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರ ಹಿಡಿಯಲು ಇದುವರೆಗೆ ಸಾಧ್ಯವಾಗಿಲ್ಲ. ಭವಿಷ್ಯದಲ್ಲಿಯೂ ಸಾಧ್ಯವಿಲ್ಲ. ಕರ್ನಾಟಕದಲ್ಲಿಯೂ 'ಆಪರೇಷನ್ ಕಮಲ'ದ ಮೂಲಕ ಅಧಿಕಾರಕ್ಕೆ ಬಂದಿದೆಯೇ ಹೊರತು ಜನರು ನೀಡಿರುವ ಸ್ಪಷ್ಟ ಬಹುಮತದಿಂದ ಅಲ್ಲ. ಬಿಜೆಪಿಯ ಕಾರ್ಯಸೂಚಿ ಸ್ಪಷ್ಟವಾಗಿಲ್ಲ. ಬಿಜೆಪಿಯ ರಿಮೋಟ್ ಕಂಟ್ರೋಲ್ ಆರ್‌ಎಸ್‌ಎಸ್ ಬಳಿ ಇದೆ. ಮೊದಲು ಆರ್‌ಎಸ್‌ಎಸ್ ಒಳ್ಳೆಯ ಕಾರ್ಯಗಳನ್ನು ಮಾಡುತ್ತಿತ್ತು. ಆದರೆ, ಈಗ ರಾಜಕೀಯ ಆಸೆಗೋಸ್ಕರ ಬಿಜೆಪಿಯನ್ನು ಬೆಳೆಸುತ್ತಿದೆ. ಇದರ ಬದಲು ಆರ್‌ಎಸ್‌ಎಸ್ ನೇರವಾಗಿ ರಾಜಕೀಯಕ್ಕೆ ಧುಮಕಬೇಕಾಗಿತ್ತು. ಬಿಜೆಪಿ ಈ ಹಂತಕ್ಕೆ ಬೆಳೆಯಲು ಆರ್‌ಎಸ್‌ಎಸ್ ಕಾರಣವಾಗಿರಬಹುದು. ಆದರೆ, ಸದ್ಯ ಆರ್‌ಎಸ್‌ಎಸ್ ತತ್ವ ಸಿದ್ಧಾಂತಗಳನ್ನು ಅನುಸರಿಸುವವರು ಬಿಜೆಪಿಯಲ್ಲಿ ಯಾರೂ ಇಲ್ಲ. ಮುಖ್ಯಮಂತ್ರಿ ಅವರಿಗೂ ಆರ್‌ಎಸ್‌ಎಸ್ ಹಿನ್ನೆಲೆ ಇಲ್ಲ. ಬಿಜೆಪಿ ಹೇಳುವುದು ಒಂದು. ಆಚರಣೆಯಲ್ಲಿ ತರುವುದೇ ಇನ್ನೊಂದು. ಗುಪ್ತ ಕಾರ್ಯಸೂಚಿ ಜಾರಿಗೊಳಿಸಲು ಬಿಜೆಪಿ ಯತ್ನಿಸುತ್ತಿದೆ.



ಸಿ.ಎಂ. ಧನಂಜಯ, ಕೆಪಿಸಿಸಿ ವಕ್ತಾರ, ಶಿಸ್ತು ಸಮಿತಿ ಸದಸ್ಯ

'ಜನರ ನಾಡಿಮಿಡಿತ ಅರಿತು ಹೋರಾಟ'



ಪ್ರತಿಯೊಂದು ರಾಜ್ಯದಲ್ಲಿಯೂ ಬಿಜೆಪಿ ಶಕ್ತಿಯಾಗಿ ಬೆಳೆಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಹೀಗಾಗಿ, ದಕ್ಷಿಣ ಭಾರತದಲ್ಲಿಯೂ ಶಕ್ತಿ ಮೀರಿ ಬೆಳೆಸುವ ಪ್ರಯತ್ನ ಮಾಡಲಾಗುತ್ತಿದೆ. ದಕ್ಷಿಣ ಭಾರತದ ರಾಜಕೀಯ ಸನ್ನಿವೇಶ ವಿಭಿನ್ನವಾಗಿದೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ನೆಲಕಚ್ಚಿದೆ. ಅಲ್ಲಿ ಪ್ರಾದೇಶಿಕ ಪಕ್ಷಗಳು ಮೇಲುಗೈ ಸಾಧಿಸಿವೆ. ಕರ್ನಾಟಕದಲ್ಲಿ 1990ರ ನಂತರ ಬಿಜೆಪಿಗೆ ಮನ್ನಣೆ ಸಿಗುತ್ತಿದೆ. ದೊಡ್ಡ ಸಮುದಾಯದ ಬೆಂಬಲ ನಮಗೆ ಸಿಕ್ಕಿದೆ. ಅದನ್ನೇ ಆಧಾರವನ್ನಾಗಿಟ್ಟುಕೊಂಡು ಸಂಘಟನೆಯಲ್ಲಿ ತೊಡಗಿದ್ದೇವೆ. ಕೇರಳ ಮತ್ತು ತಮಿಳುನಾಡಿನಲ್ಲಿ ಸಾಂಸ್ಕೃತಿಕ ಮತ್ತು ಭಾಷೆ ಅಸ್ಮಿತೆಗಳೇ ಮುಖ್ಯವಾಗಿವೆ. ಹೀಗಾಗಿ, ಈ ರಾಜ್ಯಗಳ ಜನತೆಯ ನಾಡಿಮಿಡಿತ ಅರಿತುಕೊಂಡು ಕಾರ್ಯನಿರ್ವಹಿಸಬೇಕಾಗಿದೆ. ಅಲ್ಲಿನ ಜನರ ಜತೆಗೆ ಬಿಜೆಪಿ ಗುರುತಿಸಿಕೊಳ್ಳಬೇಕಾಗಿದೆ. 'ಸಬ್‌ಕಾ ಸಾಥ್, ಸಬ್‌ಕಾ ವಿಶ್ವಾಸ್, ಸಬ್‌ಕಾ ವಿಕಾಸ' ಎನ್ನುವ ಆಶಯದೊಂದಿಗೆ ಸಂಘಟನೆಯಲ್ಲಿ ಪಕ್ಷವು ತೊಡಗಿದೆ. ದಕ್ಷಿಣ ಭಾರತದಲ್ಲಿ ನಮ್ಮ ಶಕ್ತಿ ಎಲ್ಲಿ ಕಡಿಮೆ ಇದೆ ಎನ್ನುವುದನ್ನು ಗುರುತಿಸಿ ಕೆಲಸ ಮಾಡಬೇಕಾಗಿದೆ. ಕೇರಳದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಣ್ಣ ಶಕ್ತಿಯಾಗಿ ಬಿಜೆಪಿ ಈಗಾಗಲೇ ಹೊರಹೊಮ್ಮಿದೆ.

ಸುರೇಶ ನೆಲಮಂಗಲ, ಬೆಂಗಳೂರು ಜಿಲ್ಲಾ ಬಿಜೆಪಿ ವಕ್ತಾರ

ಪ್ರಜಾವಾಣಿ ಸಂವಾದ

ಸಂವಾದ ವೀಕ್ಷಿಸಲು
https://www.facebook com/prajavani.net

'ಹಿಂದುತ್ವದ ಆಧಾರದ ಸಂಘಟನೆ ಕಷ್ಟಸಾಧ್ಯ'



ಕರ್ನಾಟಕದ ಬಿಜೆಪಿಗೂ ಇಡೀ ರಾಷ್ಟ್ರದಲ್ಲಿನ ಬಿಜೆಪಿಗೂ ಅಪಾರ ವ್ಯತ್ಯಾಸವಿದೆ. ರಾಜ್ಯದಲ್ಲಿ ಹಿಂದುತ್ವದ ಆಧಾರದ ಮೇಲೆ ಪಕ್ಷ ಬೆಳೆದಿಲ್ಲ. ರೈತ ಚಳವಳಿ ಮತ್ತು ಇತರ ಸ್ಥಳೀಯ ಸಮಸ್ಯೆಗಳ ಆಧಾರದ ಮೇಲೆ ಪಕ್ಷ ಬೆಳೆದಿದೆ. ತಮಿಳುನಾಡಿನಲ್ಲಿ ಒಂದು ಪ್ರಾದೇಶಿಕ ಪಕ್ಷಕ್ಕೆ ಇನ್ನೊಂದು ಪ್ರಾದೇಶಿಕ ಪಕ್ಷ ಇದೆ. ಕಾಂಗ್ರೆಸ್ ಧೋರಣೆಗಳನ್ನು ಟೀಕಿಸಿ ಸಂಘಟನೆ ಮಾಡಿರುವ ರಾಜ್ಯಗಳಲ್ಲಿ ಬಿಜೆಪಿ ಯಶಸ್ಸು ಸಾಧಿಸಿದೆ. ಕಾಂಗ್ರೆಸ್ ಅಸ್ತಿತ್ವ ಕ್ಷೀಣಿಸಿರುವ ರಾಜ್ಯಗಳಲ್ಲಿ ಅಲ್ಲಿನ ಪ್ರಾದೇಶಿಕ ಪಕ್ಷಗಳೇ ಪ್ರಬಲವಾಗಿವೆ. ದಕ್ಷಿಣ ಭಾರತದಲ್ಲಿ ಭಾಷೆಯೂ ಮುಖ್ಯವಾಗಿದೆ. ಹಿಂದಿ ಭಾಷೆ ಮಾತನಾಡುವ ರಾಜ್ಯಗಳಲ್ಲಿ ಹಿಂದುತ್ವದ ಅಂಶವೂ ಪ್ರಮುಖವಾಗಿ ಎದ್ದು ಕಾಣುತ್ತಿದೆ. ಜತೆಗೆ, ಪ್ರಬಲ ಸಮುದಾಯಗಳ ಜತೆಯೇ ಬಿಜೆಪಿ ಗುರುತಿಸಿಕೊಂಡು ಅಧಿಕಾರ ಹಿಡಿಯುತ್ತಿದೆ. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೂ ಒಟ್ಟು ಮತಗಳಲ್ಲಿ ಶೇಕಡ 16ರಷ್ಟು ಪಾಲು ಮಾತ್ರ ಹೊಂದಿದೆ. ದಕ್ಷಿಣ ಭಾರತದ ಸಾಂಸ್ಕೃತಿಕ ಮತ್ತು ನಾಡಿಮಿಡಿತ ಹಿನ್ನೆಲೆ ವಿಭಿನ್ನವಾಗಿದೆ. ಹೀಗಾಗಿ, ಇಲ್ಲಿ ಬಿಜೆಪಿ ಅಸ್ತಿತ್ವ ಕಷ್ಟವಾಗುತ್ತಿದೆ. ಈ ರಾಜ್ಯಗಳಲ್ಲಿ ಹಿಂದುತ್ವ ಎನ್ನುವುದೇ ಅವರಿಗೆ ತಿರುಗುಬಾಣವಾಗುವ ಸಾಧ್ಯತೆಗಳಿವೆ.

ರಾಜಲಕ್ಷ್ಮಿ ಅಂಕಲಗಿ, ವಕೀಲರು, ಸಾಮಾಜಿಕ ಕಾರ್ಯಕರ್ತೆ

'ಧರ್ಮ ರಾಜಕಾರಣ ಜನರು ಒಪ್ಪಿಕೊಳ್ಳುವುದಿಲ್ಲ'



ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರ ಹಿಡಿಯುವ ಸಾಧ್ಯತೆಗಳು ಕ್ಷೀಣಿಸಿವೆ. ಈ ರಾಜ್ಯಗಳಲ್ಲಿ ಬಿಜೆಪಿಗೆ ನೆಲೆಯೂ ಇಲ್ಲ. ಧರ್ಮ ಮತ್ತು ಜಾತಿ ರಾಜಕಾರಣ ಮಾಡುತ್ತಿರುವ ಬಿಜೆಪಿಯನ್ನು ದಕ್ಷಿಣ ಭಾರತದ ಜನತೆ ಒಪ್ಪಿಕೊಳ್ಳುವುದು ಕಷ್ಟ ಸಾಧ್ಯ. ದಕ್ಷಿಣ ಭಾರತದವರ ಮನಸ್ಥಿತಿಯೇ ವಿಭಿನ್ನ. ಕರ್ನಾಟಕದಲ್ಲೂ ಬಿಜೆಪಿ, ಶಾಸಕರನ್ನು ಖರೀದಿಸಿ, ದುಷ್ಟ ಮಾರ್ಗದಲ್ಲಿ ಅಧಿಕಾರಕ್ಕೆ ಬಂದಿದೆಯೇ ಹೊರತು ಜನರು ಸಂಪೂರ್ಣ ಬಹುಮತ ನೀಡಿಲ್ಲ. ಜತೆಗೆ, ನರೇಂದ್ರ ಮೋದಿ ಸರ್ಕಾರದ ಕಾರ್ಯವೈಖರಿಯ ಬಗ್ಗೆಯೂ ಜನರಿಗೆ ಭ್ರಮನಿರಸವಾಗಿದೆ. ಮೋದಿ ಅವರು ಸರ್ವಾಧಿಕಾರಿಯಂತೆ ನಡೆಸುತ್ತಿದ್ದಾರೆ. ಪ್ರಜಾಸತ್ತಾತ್ಮಕ ಆಡಳಿತ ನಡೆಸಿದರೆ ಮಾತ್ರ ಜನರು ಬೆಂಬಲಿಸುತ್ತಾರೆ. ಉತ್ತರ ಭಾರತದಲ್ಲಿ ಭಯ ಹುಟ್ಟಿರುವುದರಿಂದ, ಬಿಜೆಪಿ ಈಗ ದಕ್ಷಿಣ ಭಾರತದತ್ತ ಗಮನಹರಿಸಿದೆ. ಪ್ರಾದೇಶಿಕವಾಗಿ ಬಲಿಷ್ಠವಾಗಿರುವ ಮತ್ತು ಜನಪರವಾಗಿರುವ ಜೆಡಿಎಸ್ ಶಕ್ತಿ ಕಡಿಮೆಯಾಗಿರಬಹುದು. ಆದರೆ, ನೆಲೆ ಗಟ್ಟಿಯಾಗಿದೆ. ಜೆಡಿಎಸ್ ಧರ್ಮ ಅಥವಾ ಜಾತಿ ರಾಜಕೀಯ ಮಾಡುತ್ತಿಲ್ಲ.

ಮಲ್ಲಿಕಾರ್ಜುನ ಯಂಡಿಗೇರಿ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ, ವಿಜಯಪುರ

ಶಾಲೆಯಲ್ಲಿ ಬಾಲಕಿಗೆ ಲೈಂಗಿಕ ಕಿರುಕುಳ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ತಾಲ್ಲೂಕಿನ ಗ್ರಾಮವೊಂದರ ಸರ್ಕಾರಿ ಶಾಲೆಯಲ್ಲಿ ಬಾಲಕಿಗೆ (10) ಲೈಂಗಿಕ ಕಿರುಕುಳ ನೀಡಲಾಗಿದ್ದು, ಆರೋಪಿ ಮಹೇಶ್ (30) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಗ್ರಾಮದಲ್ಲಿ ಬುಧವಾರ ಸಂಜೆ ಶಾಲೆ ಬಿಟ್ಟ ನಂತರ ಬಾಲಕಿ ಹಾಗೂ ಆಕೆಯ ಸ್ನೇಹಿತೆ ಶಾಲೆಯಲ್ಲಿಯೇ ಹೋಂವರ್ಕ್ ಮಾಡುತ್ತಿದ್ದರು. ಆಗ ಆರೋಪಿಯು ಆಕೆಯ ಸ್ನೇಹಿತೆಯನ್ನು ಗದರಿಸಿ ಹೊರಗೆ ಕಳುಹಿಸಿ, ನಂತರ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆ' ಎಂದು ಪೋಷಕರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

3 ವರ್ಷದ ಬಾಲಕಿ ಮೇಲೆ ಅತ್ಯಾಚಾರ

ಶಿಕಾರಿಪುರ: ತಾಲ್ಲೂಕಿನ ಗ್ರಾಮವೊಂದರಲ್ಲಿ ಮೂರು ವರ್ಷದ ಬಾಲಕಿ ಮೇಲೆ ಬಾಲಕನೊಬ್ಬ ಗುರುವಾರ ಅತ್ಯಾಚಾರ ಎಸಗಿದ್ದಾನೆ.

ಬಾಲಕಿಯು ಪಕ್ಕದ ಮನೆಗೆ ತೆರಳಿದ ಸಂದರ್ಭದಲ್ಲಿ ಬಾಲಕ (17 ವರ್ಷ 11 ತಿಂಗಳು) ಅತ್ಯಾಚಾರ ಎಸಗಿದ್ದಾನೆ ಎಂದು ಬಾಲಕಿಯ ತಾಯಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ವಶಕ್ಕೆ ಪಡೆದಿದ್ದಾರೆ.

ನಿರ್ಜನ ಪ್ರದೇಶದಲ್ಲಿ ತಾಯಿ ಬಿಟ್ಟು ಹೋದ ಮಗಳು

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ: ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವುದಾಗಿ ಮನೆಯಿಂದ ತನ್ನ ಶತಾಯುಷಿ ತಾಯಿಯನ್ನು ಕರೆ ತಂದ ಮಗಳೊಬ್ಬಳು, ಇಲ್ಲಿಗೆ ಸಮೀಪದ ಅಂತರಸಂತೆ ಬಳಿಯ ನಿರ್ಜನ ಪ್ರದೇಶದ ರಸ್ತೆ ಬದಿಯೇ ಬಿಟ್ಟುಹೋದ ಅಮಾನವೀಯ ಘಟನೆ ಬುಧವಾರ ನಡೆದಿದೆ.

ವೃದ್ಧೆಗೆ ಮನೆಯ ವಿಳಾಸ ನೆನಪಿಲ್ಲ. 'ನನ್ನೂರು ಮೈಸೂರು. ಅಳಿಯ–ಮಗಳು ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದರು. ನನ್ನನ್ನು ಕರೆದೊಯ್ಯಲು ಬರುತ್ತಾರೆ' ಎಂದೇ ಹೇಳುತ್ತಿದ್ದಾರೆ.



ಕೆ.ಆರ್.ನಗರದ ಮಾತೃಶ್ರೀ ಅನಾಥಾಶ್ರಮದಲ್ಲಿ ಆಶ್ರಯ ಪಡೆದಿರುವ ಶತಾಯುಷಿ

ಬುಧವಾರ ಮಧ್ಯಾಹ್ನದಿಂದಲೂ ಅಳಿಯ–ಮಗನ ನಿರೀಕ್ಷೆಯಲ್ಲಿದ್ದ ವೃದ್ಧೆಗೆ ಸ್ಥಳೀಯರು ನೆರವಾಗಿದ್ದು, ಅಂತರಸಂತೆಯ ಪೊಲೀಸ್ ಠಾಣೆಗೆ ಕರೆದೊಯ್ದರು.

ಊಟ ಮಾಡಲಾಗದ ಸ್ಥಿತಿಗೆ ತಲುಪಿದ್ದ ವೃದ್ಧೆ, 'ಆಟೊದಲ್ಲಿ ಮನೆಗೆ ಕಳುಹಿಸಿಕೊಡಿ' ಎಂದು ನೆರೆದಿದ್ದವರನ್ನು ಕೋರಿದ ದೃಶ್ಯ ಮನಕಲಕಿತು. 'ವಿಷಯ ತಿಳಿದೊಡನೆ ಶತಾಯುಷಿಯನ್ನು ಕೆ.ಆರ್.ನಗರದ ಮಾತೃಶ್ರೀ ವೃದ್ಧಾಶ್ರಮಕ್ಕೆ ದಾಖಲಿಸಲಾಗಿದೆ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಆಶಾ 'ಪ್ರಜಾವಾಣಿ'ಗೆ ತಿಳಿಸಿದರು.

ಪಿಐಎಲ್ : ನಿಯಮ ಪಾಲನೆ ಕಡ್ಡಾಯ

ಬೆಂಗಳೂರು: ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸುವಾಗ, 'ಕರ್ನಾಟಕ ಹೈಕೋರ್ಟ್ ಪಿಐಎಲ್ ನಿಯಮ'ಗಳನ್ನು ಕಡ್ಡಾಯವಾಗಿ ಅನುಸರಿಸಬೇಕು ಎಂದು ಹೈಕೋರ್ಟ್ ಹೇಳಿದೆ.

ಕೃಷ್ಣ ಜಲಭಾಗ್ಯ ನಿಗಮ ಕರೆದಿದ್ದ ಅಲ್ಪಾವಧಿ ಟೆಂಡರ್ ಪ್ರಶ್ನಿಸಿ ರಾಯಚೂರಿನ ಮುದಗಲ್ ನಿವಾಸಿ ಡಿ.ಬಸವರಾಜ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಇದರಲ್ಲಿ ಕರ್ನಾಟಕ ಹೈಕೋರ್ಟ್ ಪಿಐಎಲ್ ನಿಯಮ ಪಾಲನೆ ಆಗಿಲ್ಲ' ಎಂದು ಅಭಿಪ್ರಾಯಪಟ್ಟು ಅರ್ಜಿ ವಜಾಗೊಳಿಸಿದ ನ್ಯಾಯಪೀಠ, 'ಹೈಕೋರ್ಟ್‌ಗೆ ಸಲ್ಲಿಸುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಲ್ಲಿ ಕಡ್ಡಾಯವಾಗಿ ನಿಯಮ ಪಾಲನೆ ಮಾಡಬೇಕು. ಇಲ್ಲವಾದರೆ, ಅಂತಹ ಅರ್ಜಿಗಳನ್ನು ನ್ಯಾಯಾಲಯದ ಮುಂದೆ ವಿಚಾರಣೆಗೆ ನಿಗದಿಪಡಿಸಬಾರದು' ಎಂದು ನಿರ್ದೇಶಿಸಿತು.

ಕೊಲ್ಲೂರು: 52 ದಿನಗಳಲ್ಲಿ ₹1.36 ಕೋಟಿ ಸಂಗ್ರಹ

ಕುಂದಾಪುರ: ಕೊಲ್ಲೂರಿನ ಮೂಕಾಂಬಿಕಾ ದೇಗುಲದಲ್ಲಿ 52 ದಿನಗಳಲ್ಲಿ ₹1.36 ಕೋಟಿ ಸಂಗ್ರಹವಾಗಿದೆ.

ಕೋವಿಡ್ ಕಾರಣದಿಂದ ಎರಡು ವರ್ಷಗಳಿಂದ ದೇಗುಲದಲ್ಲಿ ಭಕ್ತರ ಪ್ರವೇಶ ನಿರ್ಬಂಧಿಸಿದ್ದರಿಂದ ಆದಾಯ ಕುಂಠಿತವಾಗಿತ್ತು. ಕಳೆದ 2 ತಿಂಗಳಿನಿಂದ ನಿರ್ಬಂಧ ಸಡಿಲಿಸಿದ್ದು, ಭಕ್ತರ ಸಂಖ್ಯೆ ಜಾಸ್ತಿಯಾಗುತ್ತಿದೆ. ಪ್ರತಿದಿನ ಸಾವಿರಾರು ಸಂಖ್ಯೆಯ ಭಕ್ತರು ಹರಕೆಯೊಡನೆ ದೇವಿಗೆ ಕಾಣಿಕೆ ರೂಪದಲ್ಲಿ ಚಿನ್ನಾಭರಣಗಳನ್ನೂ ಸಮರ್ಪಿಸುತ್ತಿದ್ದಾರೆ ಎಂದು ದೇವಳದ ಕಾರ್ಯ ನಿರ್ವಹಣಾಧಿಕಾರಿ ಎಸ್.ಪಿ.ಬಿ ಮಹೇಶ್ ತಿಳಿಸಿದ್ದಾರೆ.

ಕಾಣಿಕೆ: ನ.10ರಂದು ನಡೆದ ಕಾಣಿಕೆ ಹುಂಡಿ ಲೆಕ್ಕಾಚಾರದಲ್ಲಿ 585 ಗ್ರಾಂ ಚಿನ್ನ ಹಾಗೂ 6.4 ಕೆಜಿ ಬೆಳ್ಳಿ ಸಂಗ್ರಹವಾಗಿದೆ. 2020ನೇ ಸಾಲಿನ ನವರಾತ್ರಿ ವೇಳೆ ನಡೆದ ಲೆಕ್ಕಾಚಾರದಲ್ಲಿ ₹92 ಲಕ್ಷ, 615 ಗ್ರಾಂ ಚಿನ್ನ ಹಾಗೂ 3.5 ಕೆ.ಜಿ. ಬೆಳ್ಳಿ ಸಂಗ್ರಹವಾಗಿತ್ತು. ಇದೀಗ ಕೇವಲ 52 ದಿನಗಳಲ್ಲಿ ₹1.36 ಕೋಟಿ ಸಂಗ್ರಹವಾಗಿರುವುದು ದಾಖಲೆಯಾಗಿದೆ.

'ಪ್ರಜಾವಾಣಿ' ಸಂವಾದದಲ್ಲಿ ಸಚಿವ ಡಾ.ಅಶ್ವತ್ಥನಾರಾಯಣ


ತಂತ್ರಜ್ಞಾನದ ಕೇಂದ್ರಗಳಾಗಿ ಪ್ರಮುಖ ನಗರಗಳು

ಬೆಂಗಳೂರು: ರಾಜ್ಯದ ಪ್ರಮುಖ ನಗರಗಳನ್ನು ತಂತ್ರಜ್ಞಾನದ ಕೇಂದ್ರಗಳನ್ನಾಗಿ ರೂಪಿಸಲು ರಾಜ್ಯ ಸರ್ಕಾರ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳಲಿದ್ದು, 'ಬೆಂಗಳೂರು ತಂತ್ರಜ್ಞಾನ ಶೃಂಗ' ಇದಕ್ಕೆ ನೆರವಾಗಲಿದೆ ಎಂದು ಐಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

'ಪ್ರಜಾವಾಣಿ' ಕಚೇರಿಯಲ್ಲಿ ಗುರುವಾರ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಈ ಉದ್ದೇಶದಿಂದ ಬೆಂಗಳೂರು ಬಿಟ್ಟು ರಾಜ್ಯದ ಇತರ ನಗರಗಳಲ್ಲಿ ಉದ್ಯಮಗಳನ್ನು ಸ್ಥಾಪಿಸುವವರಿಗೆ ವಿವಿಧ ರೀತಿಯ ರಿಯಾಯ್ತಿಗಳನ್ನು ನೀಡಲಾಗುತ್ತಿದೆ ಎಂದರು.

'ಬೆಂಗಳೂರಿನಿಂದಾಚೆ ಉದ್ಯಮ ಬೆಳೆಸುವ ನಮ್ಮ ಪ್ರಯತ್ನಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ. ವಿಶೇಷವಾಗಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಬಿಗ್ ಡೇಟಾ, ಸೆಮಿಕಂಡಕ್ಟರ್, ಸೈಬರ್ ಸೆಕ್ಯುರಿಟಿ ಮುಂತಾದವು ಹಲವು ನಗರಗಳಲ್ಲಿ ನೆಲೆ ನಿಲ್ಲುತ್ತಿವೆ. ಸೆಮಿಕಂಡಕ್ಟರ್ ವಿನ್ಯಾಸ ಮತ್ತು ತಯಾರಿಕೆ ಕ್ಷೇತ್ರದ ಮೇಲೆ ಹೂಡಿಕೆ ಮಾಡುವವರಿಗೆ ಭೂಮಿ, ಹೂಡಿಕೆ ಪ್ರಮಾಣದ ಮೇಲಿರುವ ಮಿತಿಯನ್ನು ಸಡಿಲಗೊಳಿಸಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಲಾಗುವುದು. ದೇವನಹಳ್ಳಿ ಸಮೀಪದಲ್ಲಿ ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪಿಸಲು ಉದ್ದೇಶಿಸಲಾಗಿದೆ' ಎಂದರು.

ಉನ್ನತ ಶಿಕ್ಷಣ: ಪ್ರತಿ ವರ್ಷವೂ ಬೋಧಕರ ನೇಮಕ



ಡಾ.ಸಿ.ಎನ್.ಅಶ್ವತ್ಥನಾರಾಯಣ

ಉನ್ನತ ಶಿಕ್ಷಣದಲ್ಲಿ ಬೋಧಕರ ಕೊರತೆಯನ್ನು ನೀಗಿಸಲು ಪ್ರತಿ ವರ್ಷವೂ ಬೋಧಕರ ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ನೇಮಕಾತಿ ತಡ ಮಾಡುವುದರಿಂದ ಪ್ರತಿಭಾವಂತರು ಬೇರೆ ಉದ್ಯೋಗಗಳಿಗೆ ಹೋಗುತ್ತಿದ್ದಾರೆ ಎಂದು ಅಶ್ವತ್ಥನಾರಾಯಣ ಹೇಳಿದರು.

ವಿವಿಧ ವಿಶ್ವವಿದ್ಯಾಲಯಗಳು ಸೇರಿ ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಪ್ರತಿಭಾವಂತ ಬೋಧಕರ ನೇಮಕ ಅತ್ಯಗತ್ಯ. 300 ಬೋಧಕರ ಹುದ್ದೆಗಳನ್ನು ಬಿಟ್ಟು ಉಳಿದ ಎಲ್ಲ ಹುದ್ದೆಗಳನ್ನೂ ಭರ್ತಿ ಮಾಡಲಾಗಿದೆ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ತರಾತುರಿಯಲ್ಲಿ ಜಾರಿ ಮಾಡಿಲ್ಲ. ಬೋಧಕರಿಗೆ ಸಾಕಷ್ಟು ತರಬೇತಿ ನೀಡಲಾಗಿದೆ ಎಂದು ಅವರು ವಿವರಿಸಿದರು.

ಕನ್ನಡದಲ್ಲಿ ಎಂಜಿನಿಯರಿಂಗ್ ಕೋರ್ಸ್ ಆರಂಭಿಸಲು ಎಲ್ಲ ಸಿದ್ಧತೆಗಳು ನಡೆದಿವೆ. ಬೋಧಕರನ್ನು ಇದಕ್ಕಾಗಿ ಅಣಿಗೊಳಿಸಲಾಗುತ್ತಿದೆ. ಹಿಂದೆ ಯಾರೂ ಈ ನಿಟ್ಟಿನಲ್ಲಿ ಯೋಚಿಸಿರಲಿಲ್ಲ. ಇದರಿಂದ ಕನ್ನಡದ ಮಾಧ್ಯಮದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ತಂತ್ರಜ್ಞಾನ, ವೈಮಾನಿಕ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರವಾಗಿಯೂ ಬೆಂಗಳೂರು ರೂಪುಗೊಂಡಿದೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಅವಕಾಶಗಳು ಸೃಷ್ಟಿಯಾಗಲಿವೆ. ಒಟ್ಟಾರೆ ತಂತ್ರಜ್ಞಾನ ಕ್ಷೇತ್ರದಿಂದ ಮುಂಬರುವ ವರ್ಷಗಳಲ್ಲಿ 2 ಲಕ್ಷದಿಂದ 3 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಕೌಶಲ್ಯ ಅಭಿವೃದ್ಧಿಗೆ ಒತ್ತು: ರಾಜ್ಯದಲ್ಲಿ ಸ್ಥಾಪನೆಯಾಗುವ ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸ್ಟಾರ್ಟ್‌ಅಪ್ ಮತ್ತು ಉದ್ಯಮಗಳಿಗೆ ಪೂರಕವಾಗಿ ಸರ್ಕಾರಿ ತಂತ್ರಜ್ಞಾನ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ. ಇದಕ್ಕಾಗಿ ಹಲವು ಉದ್ಯಮಗಳ ಜತೆಯಲ್ಲಿ ಒಪ್ಪಂದವನ್ನೂ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳ ಇಂಟರ್ನ್‌ಶಿಪ್ ಅವಧಿಯನ್ನು 30 ವಾರಗಳಿಗೆ ಹೆಚ್ಚಿಸಲಾಗಿದೆ ಎಂದು ಅವರು ಹೇಳಿದರು.

ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗಾಗಿಯೇ ಸೂಪರ್ 30 ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಇದರಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕಾಲೇಜು ಮತ್ತು ಕಂಪನಿಗಳ ಜಂಟಿ ಪಾಲುದಾರಿಕೆ ಇದೆ. ಉದ್ಯಮ ಮತ್ತು ಕಾಲೇಜುಗಳನ್ನು ಹತ್ತಿರಕ್ಕೆ ತಂದಿದ್ದೇವೆ ಎಂದರು.

- ಬೆಂಗಳೂರು ತಂತ್ರಜ್ಞಾನ ಶೃಂಗ ನ.17 ರಿಂದ 19 ರವರೆಗೆ ನಡೆಯಲಿದೆ. ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಉದ್ಘಾಟಿಸಲಿದ್ದಾರೆ.
- ಈ ಬಾರಿ 75 ಕ್ಕೂ ಹೆಚ್ಚು ತಾಂತ್ರಿಕ ಗೋಷ್ಠಿಗಳು ನಡೆಯಲಿದ್ದು, 300 ಕ್ಕೂ ಹೆಚ್ಚು ಪ್ರಮುಖ ಕಂಪನಿಗಳು ಭಾಗವಹಿಸಲಿವೆ. 20 ಸಾವಿರಕ್ಕೂ ಹೆಚ್ಚು ವಾಣಿಜ್ಯ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. 5 ರಿಂದ 10 ಲಕ್ಷ ಜನ ವರ್ಚ್ಯುವಲ್ ಆಗಿ ಭಾಗವಹಿಸುವ ನಿರೀಕ್ಷೆ ಇದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಸಿಬ್ಬಂದಿ ಆರೋಪ

ಬಡ್ತಿಗೆ ಲಂಚ, ಪಿಂಚಣಿಗೆ ಕಮಿಷನ್!

• ಶಶಿಕಾಂತ ಎಸ್. ಶೆಂಬೆಳ್ಳಿ

ಪ್ರಜಾವಾಣಿ ವಿಶೇಷ

ಹೊಸಪೇಟೆ (ವಿಜಯನಗರ): ಬಡ್ತಿಗೆ ಲಂಚ ನೀಡಬೇಕು. ಪಿಂಚಣಿ ಸೌಲಭ್ಯಕ್ಕೆ ಕಮಿಷನ್ ಕೊಡಬೇಕು! ಇದು ಕನ್ನಡ ವಿಶ್ವವಿದ್ಯಾಲಯದ ಸದ್ಯದ ಸ್ಥಿತಿ. 'ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ಕೊಡಲು ಹಾಲಿ ಕುಲಪತಿ ಪ್ರೊ. ಸ.ಚಿ. ರಮೇಶ ₹6 ಲಕ್ಷ ಲಂಚ ಕೇಳುತ್ತಿದ್ದಾರೆ' ಎಂದು ಸಹ ಪ್ರಾಧ್ಯಾಪಕ ಎಂ. ಮಲ್ಲಿಕಾರ್ಜುನಗೌಡ ಎಂಬುವವರು ಆರೋಪಿಸಿದರೆ, ಪಿಂಚಣಿ ಬಿಡುಗಡೆಗೆ ಒಟ್ಟು ಹಣದಲ್ಲಿ ಶೇ 2ರಿಂದ 3ರಷ್ಟು ಕಮಿಷನ್ ಕೇಳುತ್ತಿದ್ದಾರೆ ಎಂದು ನಿವೃತ್ತ ಪ್ರಾಧ್ಯಾಪಕರು ಆರೋಪಿಸಿದ್ದಾರೆ.

'ಆದಾಯ ತೆರಿಗೆ, ಹಿಂದಿನ ಬಾಕಿ ಹೆಸರಿನಲ್ಲಿ ನಿವೃತ್ತ ನೌಕರರ ಒಪ್ಪಿಗೆಯಿಲ್ಲದೆ ಪಿಂಚಣಿಯಿಂದ ವಿಶ್ವವಿದ್ಯಾಲಯ ಬೇಕಾಬಿಟ್ಟಿ ಹಣ ಕಡಿತಗೊಳಿಸುತ್ತಿದೆ. ಬಾಕಿಯೂ ಕೊಡುತ್ತಿಲ್ಲ. ಈ ಕುರಿತು ದೂರು ಕೊಟ್ಟರೆ ಅದಕ್ಕೆ ಸ್ಪಂದಿಸುತ್ತಿಲ್ಲ' ಎಂದು ನಿವೃತ್ತ ಕುಲಪತಿ ಪ್ರೊ. ಮಲ್ಲಿಕಾ ಎಸ್. ಘಂಟಿ, ನಿವೃತ್ತ ಪ್ರಾಧ್ಯಾಪಕರಾದ ಎಂ. ಚಂದ್ರ ಪೂಜಾರಿ, ಅಮರೇಶ ನುಗಡೋಣಿ, ರಹಮತ್ ತರಿಕೆರೆ, ಕೆ.ಜಿ. ಭಟ್ ಸೂರಿ, ಎಸ್.ಸಿ. ಪಾಟೀಲ್, ಕೇಶವನ್ ಪ್ರಸಾದ್, ಉಷಾ, ನಾಗೇಶ್ ಅವರು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ಈ ಪತ್ರದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.



ಹಂಪಿ ಕನ್ನಡ ವಿಶ್ವವಿದ್ಯಾಲಯ

'ಮೂರು ವರ್ಷ, ಎರಡು ವರ್ಷ ಹಾಗೂ ಆರು ತಿಂಗಳ ಹಿಂದೆ ನಿವೃತ್ತರಾದವರಿಗೆ ಇದುವರೆಗೆ ಪಿಂಚಣಿ ಹಣ ಕೊಟ್ಟಿಲ್ಲ. ಹಲವು ಸಲ ಪತ್ರ ಬರೆದರೂ ಅದಕ್ಕೆ ಸ್ಪಂದಿಸಿಲ್ಲ. ಒಟ್ಟು ಪಿಂಚಣಿಯಲ್ಲಿ ಶೇ 2ರಿಂದ 3ರಷ್ಟು ಕಮಿಷನ್ ಕೊಟ್ಟರೆ ಹಣ ಬಿಡುಗಡೆಗೊಳಿಸುವುದಾಗಿ ಕುಲಪತಿ ಹೇಳುತ್ತಿದ್ದಾರೆ' ಎಂದು ಹೆಸರು ಹೇಳಲಿಚ್ಛಿಸದ ನಿವೃತ್ತ ಪ್ರಾಧ್ಯಾಪಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

> **ಮುಂಬಡ್ತಿಗಾಗಿ ಸಮಿತಿ ರಚನೆ ಮಾಡಲಾಗಿದೆ. ಸಮಿತಿಯಿಂದ ಕಡತ ನನ್ನ ಬಳಿಗೆ ಬಂದಿಲ್ಲ. ಲಂಚ ಕೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.**
> **ಪ್ರೊ.ಸ.ಚಿ. ರಮೇಶ,** ಕುಲಪತಿ

> **ಮುಂಬಡ್ತಿಗಾಗಿ ಕುಲಪತಿಯವರು ₹6 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಅದರ ಬಗ್ಗೆ ಪ್ರತಿಕ್ರಿಯಿಸಲ್ಲ**
> **ಪ್ರೊ.ಎ. ಸುಬ್ಬಣ್ಣ ರೈ,** ಕುಲಸಚಿವ

> **ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ಕೊಡಲು ₹6 ಲಕ್ಷ ಲಂಚ ಕೇಳುತ್ತಿದ್ದಾರೆ. ಇದು ಅನೈತಿಕವಾದ ಕೆಲಸವಲ್ಲವೇ?**
> **ಎಂ. ಮಲ್ಲಿಕಾರ್ಜುನಗೌಡ**
> ಸಹ ಪ್ರಾಧ್ಯಾಪಕ

> **ನಿವೃತ್ತಿ ನಂತರದ ಸೌಲಭ್ಯ, ಪಿಂಚಣಿಗೆ ಸಂಬಂಧಿಸಿ ಕುಲಸಚಿವರಿಗೆ ಪತ್ರ ಬರೆದರೆ ಅವರು ಸೌಜನ್ಯಕ್ಕೂ ಪ್ರತಿಕ್ರಿಯಿಸುವ ಗೋಜಿಗೆ ಹೋಗಿಲ್ಲ**
> **ಅಮರೇಶ ನುಗಡೋಣಿ**
> ನಿವೃತ್ತ ಪ್ರಾಧ್ಯಾಪಕ

'ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಮ್' (ಸಿಎಎಸ್) ಯೋಜನೆಯಡಿ ನನ್ನ ನಾಲ್ವರು ಸಹದ್ಯೋಗಿಗಳಿಂದ ತಲಾ ₹6 ಲಕ್ಷ ಲಂಚ ಪಡೆದು ಮುಂಬಡ್ತಿ ನೀಡಲಾಗಿದೆ. ಭಾಷಾ ನಿಕಾಯದಲ್ಲಿದ್ದ ನಾನು ಅರ್ಹನಾಗಿದ್ದರೂ ಮುಂಬಡ್ತಿ ನೀಡಿಲ್ಲ. ಈ ಕುರಿತು ಕುಲಪತಿಯನ್ನು ನೇರ ಭೇಟಿಯಾಗಿ ಮುಂಬಡ್ತಿ ಪ್ರಕ್ರಿಯೆ ಪೂರ್ಣಗೊಳಿಸಲು ಕೋರಿದೆ. ಅದಕ್ಕವರು, 'ಈಗಾಗಲೇ ಮುಂಬಡ್ತಿ ಪಡೆದ ಸಹದ್ಯೋಗಿಗಳ ಮಾರ್ಗದರ್ಶನ ಪಡೆದು, ಅವರ ಕ್ರಮ ಅನುಸರಿಸಬೇಕು' ಎಂದು ತಿಳಿಸಿದ್ದಾರೆ. ಇದು ಸರಿಯಾದ ಕ್ರಮವೇ? ಎಂದು ಸಹ ಪ್ರಾಧ್ಯಾಪಕ ಎಂ. ಮಲ್ಲಿಕಾರ್ಜುನಗೌಡ ಪ್ರಶ್ನಿಸಿದ್ದಾರೆ.

'ಹೊಸದಾಗಿ 17 ಜನ ಬೋಧಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿದೆ. ಅರ್ಜಿ ಪರಿಶೀಲನಾ ಸಮಿತಿಯಲ್ಲಿ ನಾನು ಕೂಡ ಒಬ್ಬ ಸದಸ್ಯನಾಗಿದ್ದೆ. ನೇಮಕಕ್ಕೆ ಸಂಬಂಧಿಸಿದ ಯುಜಿಸಿ ನಿಯಾಮವಳಿ, ರಾಜ್ಯಪಾಲರ ಅನುಮೋದನೆ ಪತ್ರ ಕೇಳಿದರೆ ಕೊಡಲಿಲ್ಲ. ಸಮಿತಿ ಸಭೆಯೂ ಕರೆದಿಲ್ಲ. ಇಡೀ ನೇಮಕಾತಿ ಪ್ರಕ್ರಿಯೆ ಗೊಂದಲದಿಂದ ಕೂಡಿದೆ. ಇದರ ಬಗ್ಗೆ ತಕರಾರು ತೆಗೆದಿದ್ದಕ್ಕೆ ನನ್ನನ್ನು ವಿ.ವಿಯ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಿಂದ ಕೂಡಲಸಂಗಮ ಅಂತರರಾಷ್ಟ್ರೀಯ ವಚನ ಸಾಹಿತ್ಯ ಅಧ್ಯಯನ ಕೇಂದ್ರಕ್ಕೆ ವರ್ಗಾವಣೆಗೊಳಿಸಿದ್ದಾರೆ' ಎಂದು ಹೇಳಿದರು.

'ಮುಂಬಡ್ತಿ, ಅವೈಜ್ಞಾನಿಕ ಬೋಧಕರ ನೇಮಕಾತಿ ಪ್ರಕ್ರಿಯೆ ಕುರಿತು ತನಿಖೆ ನಡೆಸಬೇಕು. ಅಲ್ಲಿಯವರೆಗೆ ಕುಲಪತಿಗಳನ್ನು ಆ ಸ್ಥಾನದಿಂದ ತೆಗೆಯಬೇಕು. ವಿಶ್ವವಿದ್ಯಾಲಯವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಬೇಕು. ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಸಕ್ಷಮ ಪ್ರಾಧಿಕಾರದ ಮೊರೆ ಹೋಗಬೇಕಾಗುತ್ತದೆ' ಎಂದು ಅವರು ಕುಲಸಚಿವ ಪ್ರೊ.ಎ.ಸುಬ್ಬಣ್ಣರೈ ಅವರಿಗೆ ಪತ್ರ ಬರೆದಿದ್ದಾರೆ. ಆ ಪತ್ರದ ಪ್ರತಿಯೂ 'ಪ್ರಜಾವಾಣಿ'ಗೆ ಸಿಕ್ಕಿದೆ.

'ಪಿಂಚಣಿ ಕೊಡಲು ನಮ್ಮ ಬಳಿ ಹಣ ಇಲ್ಲ. ಈ ಕುರಿತು ಸರ್ಕಾರದ ಗಮನಕ್ಕೆ ತರಲಾಗಿದೆ. ಮುಂಬಡ್ತಿ ಸೇರಿದಂತೆ ಎಲ್ಲವೂ ನಿಯಮಾನುಸಾರವಾಗಿ ನಡೆಯುತ್ತಿದೆ' ಎಂದು ಕುಲಪತಿ ಪ್ರೊ.ಸ.ಚಿ. ರಮೇಶ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಬೈಪಾಸ್ ರಸ್ತೆ ಕಾಮಗಾರಿಗೆ ಜಮೀನು ಕೊಡಲು ವಿರೋಧ

ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಹಲಗಾ-ಮಚ್ಛೆ ಬೈಪಾಸ್ ರಸ್ತೆ ಕಾಮಗಾರಿಗೆ ಕೃಷಿ ಜಮೀನು ಸ್ವಾಧೀನಪಡಿಸಿಕೊಂಡಿರುವುದನ್ನು ವಿರೋಧಿಸಿ, ಮಚ್ಛೆ ಗ್ರಾಮದ ರೈತರು ಗುರುವಾರ ಭಾರಿ ಪ್ರತಿಭಟನೆ ನಡೆಸಿದರು.

ಬೆಳಿಗ್ಗೆ ಆರಂಭವಾಗಿದ್ದ ಕಾಮಗಾರಿ ವಿರೋಧಿಸಿ ಆ ಭಾಗದ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ರೈತ ಅನಿಲ ಅನಗೋಳಕರ ಪುತ್ರ ಪ್ರಕಾಶ ಅನಗೋಳಕರ ಎಂಬುವವರು ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿಗೆ ಆಹುತಿ ಮಾಡಿಕೊಳ್ಳಲು ಯತ್ನಿಸಿದ ಘಟನೆ ನಡೆಯಿತು.

ಪೊಲೀಸರು ಕೂಡಲೇ ರಕ್ಷಿಸಿ, ಸುಟ್ಟಗಾಯಗಳ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಕರೆದೊಯ್ದರು. ಹೆಚ್ಚಿನ ಚಿಕಿತ್ಸೆಗೆ ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸಹೋದರ ಅಮಿತ್ ಮರದಿಂದ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆ ಹಾಕಿದರು.

ಜಮೀನು ಕಸಿದುಕೊಳ್ಳಬೇಡಿ: 'ನಮ್ಮ ಜಮೀನಿನ ವಿವಾದ ನ್ಯಾಯಾಲಯದಲ್ಲಿದೆ. ಹೀಗಿದ್ದರೂ ಕಾಮಗಾರಿ ಆರಂಭಿಸಲಾಗಿದೆ' ಎಂದು ಅನಗೋಳಕರ ಸಹೋದರರು ದೂರಿದರು.

ಕೂಡಲೇ ಕಾಮಗಾರಿ ನಿಲ್ಲಿಸಬೇಕು ಎಂದು ಆಗ್ರಹಿಸಿ ರೈತ ಸಂಘದ ಮುಖಂಡ ಪ್ರಕಾಶ್ ನಾಯ್ಕ ನೇತೃತ್ವದಲ್ಲಿ ರೈತರು, ಕುಟುಂಬದ ಮಹಿಳೆಯರು ಪ್ರತಿಭಟಿಸಿದರು. ಜೆಸಿಬಿ ಮೊದಲಾದ ವಾಹನಗಳಿಗೆ ಅಡ್ಡ ಮಲಗಲು ಯತ್ನಿಸಿದರು. ರೈತರೊಬ್ಬರು ಬ್ಯಾಗ್‌ನಲ್ಲಿ ತಂದಿದ್ದ ಕುಡುಗೋಲಿನಿಂದ ಕತ್ತು ಕೊಯ್ದುಕೊಳ್ಳಲು ಯತ್ನಿಸಿದರು. ಅವರಿಂದ ಕುಡುಗೋಲು ಕಸಿದುಕೊಂಡು ಅನಾಹುತ ತಪ್ಪಿಸಲು ಪೊಲೀಸರು ಹರಸಾಹಸಪಟ್ಟರು. ಹಸುಗೂಸಿನೊಂದಿಗೆ ಬಂದಿದ್ದ ಮಹಿಳೆಯರೊಬ್ಬರು, ಜಮೀನು ಕಸಿದುಕೊಳ್ಳಬೇಡಿ ಎಂದು ಕಣ್ಣೀರಿಟ್ಟರು.



ಹಲಗಾ–ಮಚ್ಛೆ ಬೈಪಾಸ್‌ಗೆ ಜಾಗ ನೀಡಲು ವಿರೋಧಿಸಿ ರೈತ ಅನಗೋಳಕರ ಕುಟುಂಬದವರು ಜಮೀನಿನ ಬಳಿ ಪ್ರತಿಭಟನೆ ನಡೆಸಿದರು

ಪ್ರತಿಭಟನಾ ನಿರತರ ಮೇಲೆ ಪೊಲೀಸರು ಅನುಚಿತವಾಗಿ ವರ್ತಿಸಿಲ್ಲ. ಮಹಿಳಾ ಪ್ರತಿಭಟನಕಾರರನ್ನು ಮಹಿಳಾ ಕಾನ್‌ಸ್ಟೆಬಲ್‌ಗಳೇ ವಶಕ್ಕೆ ಪಡೆದಿದ್ದಾರೆ

ವಿಕ್ರಂ ಅಮಟೆ, ಡಿಸಿಪಿ

ಭೂ ಸ್ವಾಧೀನ ಪ್ರಕ್ರಿಯೆ ಮುಗಿದಿದ್ದು, ಪರಿಹಾರ ಕೊಡಲು ಸಿದ್ಧರಿದ್ದೇವೆ. ಆದರೆ, ಅನಗೋಳಕರ ಕುಟುಂಬದವರು ಪರಿಹಾರ ಬೇಡ ಎನ್ನುತ್ತಿದ್ದಾರೆ

ರವೀಂದ್ರ ಕರಲಿಂಗಣ್ಣವರ, ಉಪ ವಿಭಾಗಾಧಿಕಾರಿ, ಬೆಳಗಾವಿ

'ಗುಂಡಿಕ್ಕಿ ಕೊಂದು ಬಿಡಿ'

ಪ್ರತಿಭಟನೆಯು ತೀವ್ರ ಸ್ವರೂಪ ಪಡೆಯುತ್ತಿದ್ದಂತೆಯೇ ಪೊಲೀಸರು, 30 ಮಂದಿ ರೈತರನ್ನು ವಶಕ್ಕೆ ಪಡೆದರು. 'ನಮಗೆ ಗುಂಡು ಹಾಕಿ ಬಿಡಿ, ಕೊಂದು ಬಿಡಿ. ಆದರೆ, ಜಮೀನು ಕೊಡುವುದಿಲ್ಲ' ಎಂದು ರೈತರು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ರೈತ ಮಹಿಳೆಯರು ಕಣ್ಣೀರಿಡುತ್ತಾ ಪೊಲೀಸರಿಗೆ ಹಿಡಿಶಾಪ ಹಾಕಿದರು. 'ಮಹಿಳಾ ಪೊಲೀಸರು ನನ್ನ ಸೀರೆ ಹರಿದರು' ಎಂದು ಮಹಿಳೆಯೊಬ್ಬರು ಆರೋಪಿಸಿದರು. ಸೆರಗು ಹರಿದಿದ್ದನ್ನು ಪ್ರದರ್ಶಿಸಿ ಕಣ್ಣೀರಿಟ್ಟರು.

'ಬಡ ರೈತರ ಭೂಮಿಯನ್ನು ಸರ್ಕಾರ ದೌರ್ಜನ್ಯದಿಂದ ಕಸಿದುಕೊಳ್ಳುತ್ತಿದೆ. ಪ್ರಶ್ನಿಸುವುದಕ್ಕೆ ಬಂದ ನಮ್ಮ ಮೇಲೆ ಪೊಲೀಸರು ದಬ್ಬಾಳಿಕೆ ಪ್ರದರ್ಶಿಸಿದ್ದಾರೆ. ಎಳೆದಾಡಿದ್ದಾರೆ. ಸೀರೆ ಹರಿದಿದ್ದಾರೆ' ಎಂದು ರೈತ ಮಹಿಳೆ ಜಯಶ್ರೀ ಗುರನ್ನವರ ದೂರಿದರು.

ಪೋಷಕರ ಸಾಲ ತೀರಿಸಲು ಮಗುವಿಗೆ ನೋಟಿಸ್!

ಮೈಸೂರು: 'ನನ್ನ ತಂದೆ-ತಾಯಿ ನಿಧನರಾಗಿದ್ದಾರೆ. ತಂದೆ ಮಾಡಿದ್ದ ಸಾಲ ಮರುಪಾವತಿಸುವಂತೆ ಬ್ಯಾಂಕಿನವರು ನನ್ನ ಹೆಸರಲ್ಲಿ ನೋಟಿಸ್ ಕಳುಹಿಸುತ್ತಿದ್ದು, ಶಾಲೆಗೆ ಹೋಗಲು ತೊಂದರೆಯಾಗಿದೆ' ಎಂದು ಕೊಡಗು ಜಿಲ್ಲೆಯ ವಿದ್ಯಾರ್ಥಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಎದುರು ಕಣ್ಣೀರು ಹಾಕಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಗುರುವಾರ ಇಲ್ಲಿ ಆಯೋಜಿಸಿದ್ದ ಮೈಸೂರು ವಿಭಾಗಮಟ್ಟದ 'ಮಕ್ಕಳ ಅಹವಾಲು ವಿಚಾರಣೆ, ಹಕ್ಕುಗಳ ಪ್ರತಿಪಾದನೆಗಾಗಿ' ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಯ ಅಹವಾಲು ಆಲಿಸಿದ ಆಯೋಗದ ಅಧ್ಯಕ್ಷ ಡಾ.ಆಂಥೋಣಿ ಸಬಾಸ್ಟಿನ್, 'ಪೋಷಕರು ಮಾಡಿರುವ ಸಾಲ ಮರುಪಾವತಿಸುವಂತೆ ಮಗುವಿಗೆ ನೋಟಿಸ್ ನೀಡಿದ ಮಡಿಕೇರಿಯ ಖಾಸಗಿ ಬ್ಯಾಂಕ್‌ವೊಂದರ ಮ್ಯಾನೇಜರ್ ವಿರುದ್ಧ ಎಫ್‌ಐಆರ್ ದಾಖಲಿಸಿ' ಎಂದು ಸೂಚಿಸಿದರು. ಮಗುವಿನ ಹೆಸರಲ್ಲಿ ನೋಟಿಸ್ ಕಳುಹಿಸಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಮತ್ತು ರಾಮನಗರ ಜಿಲ್ಲೆಗಳ ಮಕ್ಕಳು ಪಾಲ್ಗೊಂಡರು. ಪೋಷಕರು, ಶಿಕ್ಷಕರಲ್ಲಿ ಹೇಳಿಕೊಳ್ಳಲು ಆಗದೇ ಇರುವ, ಹೇಳಿದರೂ ಪರಿಹಾರ ಸಿಗದ ಸಮಸ್ಯೆಗಳನ್ನು ತೆರೆದಿಟ್ಟರು. ತಮ್ಮ ನೋವು ಹಂಚಿಕೊಂಡು, ಮನಸ್ಸನ್ನು ಅಲ್ಪ ಹಗುರವಾಗಿಸಿಕೊಂಡರು.

ಶಾಲೆಗೆ ಹೋಗಲು ಬಸ್ ಸೌಲಭ್ಯ ಒದಗಿಸಬೇಕು. ಕೋವಿಡ್‌ನಿಂದ ತಂದೆ ಮೃತಪಟ್ಟಿದ್ದು, ಶಿಕ್ಷಣಕ್ಕೆ ನೆರವಾಗಬೇಕು. ಕೋವಿಡ್‌ನಿಂದ ಶಾಲೆ ಬಿಟ್ಟವರು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ; ಹಲವು ಗೆಳತಿಯರು ಬಾಲ್ಯ ವಿವಾಹವಾಗಿದ್ದಾರೆ. ಶಾಲೆಗಳ ಬಳಿ ಡ್ರಗ್ಸ್ ಮಾರಾಟ ದಂಧೆ ಹೆಚ್ಚಿದೆ ಎಂದು ಕೆಲವರು ಅಸಹಾಯಕತೆ ವ್ಯಕ್ತಪಡಿಸಿದರು.



[ತಾಯಿ ಕಸ್ತೂರ್ ಗಾಂಧಿ | ಕಿಶೋರ್, ಹರಿಪ್ರಿಯಾ]

ಬಹುಭಾಷಾ ಕಲಾವಿದರಾದ ಹರಿಪ್ರಿಯಾ ಹಾಗೂ ಕಿಶೋರ್ ಯಾವುದೇ ಪಾತ್ರಗಳಾಗಲಿ ಅದಕ್ಕೆ ಜೀವ ತುಂಬುವವರು. ಇದಕ್ಕೆ ಸಾಕ್ಷಿ ಎಂಬಂತಿದೆ ಇವರ ನಟನೆಯ 'ತಾಯಿ ಕಸ್ತೂರ್ ಗಾಂಧಿ'ಯಲ್ಲಿ ಕಸ್ತೂರ್‌ಬಾ ಹಾಗೂ ಗಾಂಧೀಜಿ ಪಾತ್ರ...

ಹರಿಪ್ರಿಯಾ ಅಲ್ಲ ಇವ್ರು ಕಸ್ತೂರ್‌ಬಾ!

ಅಭಿಲಾಷ್ ಪಿ.ಎಸ್.

ನಿರ್ದೇಶಕ ಪ್ರೊ.ಬರಗೂರು ರಾಮಚಂದ್ರಪ್ಪ ಅವರು 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರೆದ 'ಕಸ್ತೂರ್ ಬಾ ವರ್ಸಸ್ ಗಾಂಧಿ' ಕಾದಂಬರಿ ಆಧರಿಸಿ ನಿರ್ಮಾಣವಾಗಿರುವ 'ತಾಯಿ ಕಸ್ತೂರ್ ಗಾಂಧಿ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಕಸ್ತೂರ್‌ಬಾ ಪಾತ್ರದಲ್ಲಿ ಬಹುಭಾಷಾ ನಟಿ ಹರಿಪ್ರಿಯಾ ಹಾಗೂ ಗಾಂಧೀಜಿ ಪಾತ್ರದಲ್ಲಿ ಬಹುಭಾಷಾ ನಟ ಕಿಶೋರ್ ಅಭಿನಯಿಸಿದ್ದಾರೆ. ಹರಿಪ್ರಿಯಾ ಅವರು ಯುವ, ಮಧ್ಯ ಹಾಗೂ ಇಳಿವಯಸ್ಸಿನ ಕಸ್ತೂರ್‌ಬಾ ಪಾತ್ರದಲ್ಲಿ ಕಾಣಿಸಿಕೊಂಡು ತಮ್ಮ ನಟನೆಯ ಸಾಮರ್ಥ್ಯವನ್ನು ಒರೆಗೆ ಹಚ್ಚಿದ್ದಾರೆ. ಕಿಶೋರ್ ಅವರು ಗಾಂಧೀಜಿ ಪಾತ್ರಕ್ಕೆ ಜೀವ ತುಂಬಿದ್ದಾರೆ.

ಚಿತ್ರಕ್ಕೆ ತಮ್ಮ ಆಯ್ಕೆ ಹಾಗೂ ಸಿನಿಮಾದಲ್ಲಿ ಎದುರಿಸಿದ ಸವಾಲಿನ ಬಗ್ಗೆ 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದ ಹರಿಪ್ರಿಯಾ ಹೀಗೆಂದರು...


'ಬರಗೂರು ಅವರು ಒಂದು ದಿನ 'ಕಸ್ತೂರ್‌ಬಾ ವರ್ಸಸ್ ಗಾಂಧಿ' ಕೃತಿಯನ್ನು ತಂದು ನನ್ನ ಕೈಯಲ್ಲಿಟ್ಟರು. ಈ ಕೃತಿ ನನಗೆ ಬಹಳ ಇಷ್ಟವಾಯಿತು. ಕಸ್ತೂರ್‌ಬಾ ಅವರ ಪಾತ್ರ ಎಷ್ಟೊಂದು ಪ್ರಬಲ ಅಲ್ಲವೇ ಎಂದು ಆಗಲೇ ಅನಿಸಿತ್ತು. ಕೃತಿ ಓದಿದ ಬಳಿಕ ನನ್ನ ಅಭಿಪ್ರಾಯವನ್ನು ಬರಗೂರು ಅವರಿಗೆ ತಿಳಿಸಿದೆ. ಆ ಸಂದರ್ಭದಲ್ಲಿ ಅವರು 'ಈ ಕೃತಿಯನ್ನು ನಾನು ಸಿನಿಮಾ ಮಾಡಬೇಕು ಎಂದಿದ್ದೇನೆ. ನೀವು ಕಸ್ತೂರ್‌ಬಾ ಪಾತ್ರವನ್ನು ಮಾಡುತ್ತೀರಾ?' ಎಂದು ಕೇಳಿದರು. ನನಗೆ ಆ ಕ್ಷಣವೇ ಖುಷಿಯಾಗಿತ್ತು. ಆ ಪಾತ್ರವನ್ನು ಮಾಡಲು ಮತ್ತಷ್ಟು ಉತ್ಸುಕಳಾಗಿದ್ದೆ. ಇಲ್ಲಿಯವರೆಗೂ ಸವಾಲಿನ ಪಾತ್ರಗಳನ್ನೇ ಮಾಡಿಕೊಂಡು ಬಂದಿದ್ದೇನೆ. ಹೊಸ ಪಾತ್ರಗಳನ್ನೇ ಹುಡುಕುತ್ತಿರುತ್ತೇನೆ. ಆತ್ಮಕಥೆ ಹೊಂದಿರುವ ಚಿತ್ರಗಳು ಕನ್ನಡದಲ್ಲಿ ಬರುವುದೇ ಅಪರೂಪ. ಬೇರೆ ಭಾಷೆಗಳಲ್ಲಿ ಇಂಥ ಸಿನಿಮಾಗಳು ಹೆಚ್ಚು ಬರುತ್ತಿವೆ. ಜೊತೆಗೆ ನಾನೂ ಆತ್ಮಕಥೆ ಚಿತ್ರಗಳಲ್ಲಿ ಪಾತ್ರ ಮಾಡಿಲ್ಲ. 'ಬಿಚ್ಚುಗತ್ತಿ' ಎನ್ನುವ ಇತಿಹಾಸ ಕಥೆ ಆಧರಿತ ಸಿನಿಮಾದಲ್ಲಿ 'ಸಿದ್ದಾಂಬೆ' ಎನ್ನುವ ಪಾತ್ರ ಮಾಡಿದ್ದೆ. ಆದರೆ ಇದು ಆತ್ಮಕಥೆ ಆಗಿರಲಿಲ್ಲ. ಭರಮಣ್ಣನ ಕಥೆ ಇದಾಗಿತ್ತು. ಹೀಗಾಗಿ ಬರಗೂರು ಅವರ ಮಾತಿಗೆ ತಕ್ಷಣ ಒಪ್ಪಿಕೊಂಡೆ'.

'ಕಸ್ತೂರ್‌ಬಾ ಅವರ ದೃಷ್ಟಿಕೋನದಲ್ಲಿ ಗಾಂಧೀಜಿಯನ್ನು ನೋಡುವ ಪಾತ್ರವಿದು. ಗಾಂಧೀಜಿ ಅವರ ಕೆಲಸಗಳು ಜನರಿಗೆ ಗೊತ್ತಿವೆಯೇ ಹೊರತು ಗಾಂಧೀಜಿಯವರಿಗೆ ಕಸ್ತೂರ್‌ಬಾ ಹೇಗೆ ಪ್ರೇರಣೆಯಾಗಿದ್ದರು ಎನ್ನುವುದು ಯಾರಿಗೂ ತಿಳಿದಿಲ್ಲ. ಗಾಂಧಿ ಅವರಿಗೆ ಕಸ್ತೂರ್‌ಬಾ ಅವರು ಎಷ್ಟು ಬೆಂಬಲವಾಗಿದ್ದರು, ಗಾಂಧೀಜಿ ಅವರು ಮಹಾತ್ಮ ಎಂದೆನಿಸಿಕೊಳ್ಳಲು ಕಸ್ತೂರ್‌ಬಾ ಗಾಂಧಿ ಅವರ ತ್ಯಾಗ, ಬೆಂಬಲ ಎಂತಹದ್ದಿತ್ತು ಎಂಬುದೆಲ್ಲವನ್ನು ತೆರೆಯ ಮೇಲೆ ತಂದಿದ್ದೇವೆ.'

ಸವಾಲಿನ ಪಾತ್ರಗಳ ಆಯ್ಕೆ

'ಕಾಲೇಜು ಹುಡುಗಿ ಅಥವಾ ಪೊಲೀಸ್ ಅಧಿಕಾರಿ ಪಾತ್ರವಾಗಲಿ ಪೌರಾಣಿಕ, ಇತಿಹಾಸ ಅಥವಾ ಕಮರ್ಷಿಯಲ್ ಚಿತ್ರಗಳಲ್ಲಿ ಪಾತ್ರಗಳನ್ನು ಮಾಡಲು ನಾನು ಸದಾ ಸಿದ್ಧ. ಈ ಸವಾಲು ನನಗೆ ವೈಯಕ್ತಿಕವಾಗಿ ಖುಷಿ ಹಾಗೂ ತೃಪ್ತಿ ನೀಡುತ್ತದೆ. ಈ ಚಿತ್ರದಲ್ಲಿ ನಾನು ಮೂರು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದು, ಈ ಮೂರೂ ಪಾತ್ರಗಳೂ ಸವಾಲಿನದ್ದಾಗಿದ್ದವು. ಕಾಲ್ಪನಿಕ ಚಿತ್ರಗಳನ್ನು ಮಾಡುವಾಗ ಪಾತ್ರಗಳಿಗೆ ಜೀವ ತುಂಬಲು ಏನಾದರೂ ಸೇರಿಸಬಹುದು. ಆದರೆ ಆತ್ಮಕಥೆಯಲ್ಲಿ ಈ ರೀತಿ ಮಾಡಲು ಅಸಾಧ್ಯ. ಎಚ್ಚರಿಕೆಯಿಂದ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಜೊತೆಗೆ ಗಾಂಧೀಜಿ ಅವರು ಹೇಗೆ ಮಾತನಾಡುತ್ತಾರೆ, ನಡೆಯುತ್ತಾರೆ ಎನ್ನುವುದಕ್ಕೆ ಬಹಳಷ್ಟು ವಿಡಿಯೊ ದಾಖಲೆಗಳಿವೆ. ಆದರೆ ಕಸ್ತೂರ್‌ಬಾ ಅವರ ಫೋಟೊಗಳನ್ನು ಹೊರತುಪಡಿಸಿ ನಮ್ಮ ಬಳಿ ಬೇರೆ ಯಾವುದೇ ದಾಖಲೆಗಳಿಲ್ಲ. ಇರುವ ಫೋಟೊ ಇಟ್ಟುಕೊಂಡೇ ಉಡುಪು, ಲುಕ್ ಎಲ್ಲ ಸಿದ್ಧಪಡಿಸಿಕೊಂಡೆವು. ಮೊದಲ ಬಾರಿ ಇಳಿವಯಸ್ಸಿನ ಪಾತ್ರವನ್ನು ಮಾಡಿದ್ದೇನೆ. ಇದು ಸ್ವಲ್ಪ ಸವಾಲೆನಿಸಿತು.'





ಕಸ್ತೂರ್‌ಬಾ ಪಾತ್ರದಲ್ಲಿ ಹರಿಪ್ರಿಯಾ

'ಈ ಪಾತ್ರಕ್ಕೆ ನಾನು ಸಂಪೂರ್ಣವಾಗಿ ಬರಗೂರು ಅವರ ಮೇಲೆಯೇ ಅವಲಂಬಿತವಾಗಿದ್ದೆ. ಕಸ್ತೂರ್‌ಬಾ ಅವರ ಲುಕ್ ಹಾಗೂ ದೃಷ್ಟಿಕೋನದ ಮೇಲೆ ಅವರು ಬಹಳ ಸಂಶೋಧನೆ ಮಾಡಿದ್ದರು. ಅದಕ್ಕೆ ತಕ್ಕ ಹಾಗೆಯೇ ಪಾತ್ರವನ್ನು ಬರೆದಿದ್ದರು. ಒಬ್ಬರನ್ನು ಒಬ್ಬರು ಅರ್ಥ ಮಾಡಿಕೊಂಡು ಅವರಿಬ್ಬರೂ ಹೇಗೆ ಬೆಳೆದರು ಎನ್ನುವುದನ್ನು ಅವರು ಬಹಳ ಅದ್ಭುತವಾಗಿ ಬರೆದಿದ್ದಾರೆ' ಎಂದರು ಹರಿಪ್ರಿಯಾ.

ವೀರಪ್ಪನ್ ಪಾತ್ರಕ್ಕೂ ಸೈ ಗಾಂಧೀಜಿ ಪಾತ್ರಕ್ಕೂ ಸೈ

ಕಿಶೋರ್ ಅವರ ಜೊತೆ ಕನ್ನಡ ಸೇರಿದಂತೆ ಮಲಯಾಳಂ, ತಮಿಳಿನ ಹಲವು ಸಿನಿಮಾಗಳಲ್ಲಿ ನಾನು ನಟಿಸಿದ್ದೇನೆ. ಆದರೆ ಜೋಡಿಯಾಗಿ ನಟಿಸಿದ್ದು 'ಅಮೃತಮತಿ' ಸಿನಿಮಾ ಹಾಗೂ ಇದೀಗ 'ತಾಯಿ ಕಸ್ತೂರ್ ಗಾಂಧಿ'ಯಲ್ಲಿ. ಅವರೊಬ್ಬ ಅತ್ಯದ್ಭುತ ಕಲಾವಿದ. ಅವರು ವೀರಪ್ಪನ್ ಪಾತ್ರಕ್ಕೂ ಜೀವ ತುಂಬುತ್ತಾರೆ ಗಾಂಧೀಜಿ ಪಾತ್ರಕ್ಕೂ. ಒಬ್ಬರು ಒಂದು ಪಾತ್ರದಲ್ಲಿ ಮಿಂಚಿದರೆ ಉಳಿದ ಸಿನಿಮಾಗಳಲ್ಲೂ ಅವರು ಆ ಪಾತ್ರಕ್ಕಷ್ಟೇ ಸೀಮಿತವಾಗಿಬಿಡುತ್ತಾರೆ. ಆದರೆ ಕಿಶೋರ್ ಅವರು ಎಲ್ಲ ಪಾತ್ರಕ್ಕೂ ಒಗ್ಗುತ್ತಾರೆ. ಅವರು ಮಾಡುವ ಕಠಿಣ ಶ್ರಮವೂ ಹಾಗೆಯೇ ಇರುತ್ತದೆ. ಅವರ ಜೊತೆ ಕೆಲಸ ಮಾಡುವಾಗ ನಮಗೂ ಕಲಿಯಲು ಸಿಗುತ್ತದೆ ಹಾಗೂ ಒಂದು ರೀತಿ ಆರೋಗ್ಯಕರ ಸ್ಪರ್ಧೆ ಇರುತ್ತದೆ ಎಂದರು ಹರಿಪ್ರಿಯಾ. ❖



'ಸಾರಿ'ಯಲ್ಲಿ ರಾಗಿಣಿ

ಆ್ಯಕ್ಷನ್, ಕ್ರೈಂ ಥ್ರಿಲ್ಲರ್ ಕಥಾಹಂದರ ಒಳಗೊಂಡಿರುವ 'ಸಾರಿ' (Sorry-Karma Returns) ಎಂಬ ಚಿತ್ರದ ಮೂಲಕ ನಟಿ ರಾಗಿಣಿ ದ್ವಿವೇದಿ ಮತ್ತೆ ಚಂದನವನದಲ್ಲಿ ಬಣ್ಣಹಚ್ಚಿದ್ದಾರೆ. ಬ್ರಹ್ಮ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಸಿನಿಮಾ ಮಹಿಳಾ ಪ್ರಧಾನ ಚಿತ್ರವಾಗಿದೆ.

ಕಿಸ್ ಇಂಟರ್‌ನ್ಯಾಷನಲ್ ಪ್ರೊಡಕ್ಷನ್‌ನಡಿ ನವೀನ್ ಕುಮಾರ್ ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಚಿತ್ರದ ಮುಹೂರ್ತ ಮಾಚೋಹಳ್ಳಿಯಲ್ಲಿರುವ ಲಕ್ಕೇನಹಳ್ಳಿ ಗ್ರಾಮದೇವತೆ ದೇವಸ್ಥಾನದಲ್ಲಿ ಕಳೆದ ಮಂಗಳವಾರ ನಡೆಯಿತು. ಸಕಲೇಶಪುರ, ಬೆಂಗಳೂರು ಹಾಗೂ ಕಗ್ಗಲೀಪುರದ ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆಯಲಿದ್ದು, ಅಫ್ಜಲ್ ಈ ಚಿತ್ರಕ್ಕೆ ಕಾರ್ಯಕಾರಿ ನಿರ್ಮಾಪಕರಾಗಿದ್ದು, ಜಾನ್ ಜಾರ್ಜ್ ಹಾಗೂ ಜೈಕೃಪಲಾನಿ ಅವರ ಸಹನಿರ್ಮಾಪಕರು.

ಚಿತ್ರಕ್ಕೆ ರಾಜು ಎಮ್ಮಿಗನೂರು ಅವರ ಸಂಗೀತ, ರಾಜೀವ್ ಗಣೇಸನ್ ಅವರ ಛಾಯಾಗ್ರಹಣವಿದೆ. ಅಫ್ಜಲ್, ವಿ.ಜೆ.ಮನೋಜ್, ರಣವೀರ್, ಯುಕ್ತ ಪೆರ್ವಿ, ಪೂಜಾ ಪಾಟೀಲ್ ತಾರಾಗಣದಲ್ಲಿದ್ದಾರೆ. ❖



26ಕ್ಕೆ ಗಣಿ 'ಸಖತ್'

[ಸಖತ್ | ಗಣೇಶ್]

ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ, ಸಿಂಪಲ್ ಸುನಿ ನಿರ್ದೇಶನದ 'ಸಖತ್' ಚಿತ್ರದ ಬಿಡುಗಡೆಯನ್ನು ಚಿತ್ರತಂಡವು ನ.26ಕ್ಕೆ ಮುಂದೂಡಿದೆ. ನಟ ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ನಿಧನದಿಂದಾಗಿ ಕನ್ನಡ ಚಿತ್ರರಂಗ ದಿಗ್ಭ್ರಮೆಗೆ ಒಳಗಾಗಿದೆ. ಹೀಗಾಗಿ ಚಿತ್ರತಂಡ ಬಿಡುಗಡೆ ದಿನಾಂಕವನ್ನು ಬದಲಿಸಿದೆ. ನವೆಂಬರ್ 12ರ ಬದಲು 26ಕ್ಕೆ ಸಿನಿಮಾ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ.

ಈಗಾಗಲೇ ಟೀಸರ್ ಹಾಗೂ ಹಾಡುಗಳ ಮೂಲಕ 'ಸಖತ್' ಸಖತ್ತಾಗಿ ಸದ್ದು ಮಾಡುತ್ತಿದೆ. ಸಿಂಪಲ್ ಸುನಿ, ಗಣೇಶ್ ಕಾಂಬಿನೇಶನ್‌ನಲ್ಲಿ ಬರುತ್ತಿರುವ ಎರಡನೇ ಸಿನಿಮಾ ಇದಾಗಿದ್ದು, ಅಂಧನ ಪಾತ್ರದಲ್ಲಿ ಗಣೇಶ್ ಲುಕ್.. ಸಿಂಪಲ್ ಸುನಿ ಡೈಲಾಗ್ ಕಿಕ್.. ಜೂಡಾ ಸ್ಯಾಂಡಿ ಸಂಗೀತ ಎಲ್ಲವೂ ಚಿತ್ರಪ್ರೇಮಿಗಳನ್ನು ಸೆಳೆದಿದೆ.

ರೊಮ್ಯಾಂಟಿಕ್ ಕಾಮಿಡಿ ಕ್ರೈಂ ಥ್ರಿಲ್ಲರ್ ಕಥಾಹಂದರವನ್ನು ಚಿತ್ರ ಒಳಗೊಂಡಿದೆ. ಟಿ.ವಿ. ರಿಯಾಲಿಟಿ ಶೋ ಹಾಗೂ ಕೋರ್ಟ್ ಕೇಸ್ ಸುತ್ತ ಸಿನಿಮಾ ಕಥೆ ಹೆಣೆಯಲಾಗಿದೆ. ಗಣೇಶ್ ರಿಯಾಲಿಟಿ ಶೋ ಸ್ಪರ್ಧಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ನಟಿ ನಿಶ್ವಿಕಾ ನಾಯ್ಡು ಹಾಗೂ ಸುರಭಿ ಚಿತ್ರದಲ್ಲಿ ನಾಯಕಿಯರಾಗಿ ನಟಿಸಿದ್ದಾರೆ. ರಂಗಾಯಣ ರಘು, ಸಾಧುಕೋಕಿಲ, ಧರ್ಮಣ್ಣ ಕಡೂರು ಸೇರಿದಂತೆ ಮುಂತಾದವರು ತಾರಾಗಣದಲ್ಲಿದ್ದಾರೆ. ಕೆವಿಎನ್ ಪ್ರೊಡಕ್ಷನ್‌ನಡಿ ತಯಾರಾಗಿರುವ ಈ ಚಿತ್ರಕ್ಕೆ ನಿಶಾ ವೆಂಕಟ್ ಕೋನಾಂಕಿ ಹಾಗೂ ಸುಪ್ರಿತ್ ಬಂಡವಾಳ ಹೂಡಿದ್ದಾರೆ. ❖



ಕನ್ಯಾದಾನ ಧಾರಾವಾಹಿ ತಂಡ

'ಕನ್ಯಾದಾನ'ಕ್ಕೆ ಮುಹೂರ್ತ

ಕಿರುತೆರೆ

ಐವರು ಹೆಣ್ಣುಮಕ್ಕಳ ಜವಾಬ್ದಾರಿ ಹೊತ್ತ ತಂದೆಯ ಕಥೆಯನ್ನು ಹೊತ್ತು ಬಂದಿದೆ 'ಕನ್ಯಾದಾನ'. ಉದಯ ಟಿ.ವಿಯಲ್ಲಿ ನ.15ರಿಂದ ಪ್ರತಿ ಶನಿವಾರ ರಾತ್ರಿ 8.30ಕ್ಕೆ ಈ ಧಾರಾವಾಹಿ ಪ್ರಸಾರವಾಗಲಿದೆ.

ಅರುಣ್ ಹರಿಹರನ್ ನಿರ್ದೇಶನ ಹಾಗೂ ಅಂಜಲಿ ವೆಂಚರ್ಸ್‌ನಡಿ ಈ ಧಾರಾವಾಹಿ ನಿರ್ಮಾಣವಾಗಿದೆ. 'ಬೆಂಗಳೂರು ಸಮೀಪದ ಹಳ್ಳಿಯಲ್ಲಿ ವಾಸಿಸುತ್ತಿರುವ ಅಶ್ವತ್ಥ್ ಎಂಬುವವರಿಗೆ ಐವರು ಹೆಣ್ಣು ಮಕ್ಕಳು. ಅಶ್ವತ್ಥ್ ಮೌಲ್ಯಗಳಿಗೆ ಬೆಲೆ ಕೊಡುವ ಮನುಷ್ಯ. ತಾಯಿ ಇಲ್ಲದ ಮಕ್ಕಳನ್ನು ಸಂಸ್ಕಾರವಂತರಾಗಿ ಬೆಳೆಸಿರುತ್ತಾರೆ. ಮಕ್ಕಳ ಮೇಲಿನ ಜವಾಬ್ದಾರಿ ತಂದೆಗೆ ಕೊನೆಯ ಉಸಿರಿನವರೆಗೂ ಹೇಗೆ ಇರುತ್ತದೆ ಎನ್ನುವುದು 'ಕನ್ಯಾದಾನ'ದ ಕಥೆ. ಈ ಧಾರಾವಾಹಿಯ ವಿಷಯ ಬೇರೆ ಕಥೆಗಳಿಗಿಂತ ಭಿನ್ನ. ಅಪರೂಪವಾದ ಜೋಡಿಗಳು ನಮ್ಮ ಧಾರಾವಾಹಿಯಲ್ಲಿವೆ' ಎನ್ನುತ್ತಾರೆ ನಿರ್ದೇಶಕ ಅರುಣ್. ಹಿರಿಯ ನಟ ಮೈಕೊ ಮಂಜು ತಂದೆಯ ಪಾತ್ರ ನಿರ್ವಹಿಸಿದ್ದಾರೆ. ❖

ಬೆಳ್ಳಿತೆರೆಯಲ್ಲಿ ಸಿನಿಮಾ ಹಬ್ಬ

ಇಂದು ತೆರೆಗೆ

ಕೋವಿಡ್‌ನಿಂದ ಕಳೆಗುಂದಿದ್ದ ಚಿತ್ರಮಂದಿರಗಳು ಮತ್ತೆ ಕಳೆಗಟ್ಟಿವೆ. ಇಂದು ಆರು ಚಿತ್ರಗಳು ಬಿಡುಗಡೆಯಾಗುತ್ತಿವೆ.

ನವೆಂಬರ್‌ನಲ್ಲಿ ಒಟ್ಟು 17 ಚಿತ್ರಗಳು ತೆರೆಕಾಣುತ್ತಿದೆ. ಡಾ.ರಾಘವೇಂದ್ರ ಅವರು ನಿರ್ದೇಶಿಸಿರುವ, ನೆನಪಿರಲಿ ಖ್ಯಾತಿಯ ನಟ ಪ್ರೇಮ್ ಅವರ 25ನೇ ಸಿನಿಮಾ 'ಪ್ರೇಮಂ ಪೂಜ್ಯಂ', 'ಗಂಟುಮೂಟೆ' ಮೂಲಕ ಖ್ಯಾತಿ ಪಡೆದ ನಟ ನಿಶ್ಚಿತ್ ಕೊರೋಡಿ ನಟನೆಯ 'ಟಾಮ್ ಆ್ಯಂಡ್ ಜೆರಿ', ಬಹುಭಾಷಾ ನಟ ಕಿಶೋರ್ ನಟನೆಯ 'ಬೈ1 ಗೆಟ್ 1 ಫ್ರೀ', ಸುಮಿತ್ರಾ ರಮೇಶ್ ಗೌಡ ನಟಿಸಿ, ನಿರ್ದೇಶಿಸಿರುವ 'ಕಪೋ ಕಲ್ಪಿತಂ', ಲೋಹಿತ್ ನಟನೆಯ 'ಹಿಟ್ಲರ್' ನ.12ರಂದು ಪ್ರೇಕ್ಷಕರ ಮುಂದೆ ಬರಲಿವೆ. ❖



ಪ್ರೇಮ್

ತೆರೆಗೆ ಬರುತ್ತಿದೆ 'ಲಕ್ಷ್ಯ'

ನೈಜ ಘಟನೆಗಳನ್ನು ಆಧರಿಸಿದ, ಸಾಮಾಜಿಕ ವಿಷಯ ಒಳಗೊಂಡ ಚಿತ್ರ 'ಲಕ್ಷ್ಯ'. ನ. 18ರಂದು ಚಿತ್ರ ತೆರೆ ಕಾಣುತ್ತಿದೆ. ರವಿ ಸಾಸನೂರು ಅವರು ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅವರು ಸಹ ನಿರ್ಮಾಪಕರೂ ಹೌದು.

'18ರ ಹರೆಯದಲ್ಲಿ ನಡೆಯುವ ಘಟನೆಗಳನ್ನೇ ಮುಂದಿಟ್ಟುಕೊಂಡು ನಿರ್ಮಿಸಲಾದ ಚಿತ್ರವಿದು. ಇದು ಎಲ್ಲರಿಗೂ ಇಷ್ಟವಾಗುವ ಭರವಸೆಯಿದೆ' ಎಂದಿದ್ದಾರೆ ರವಿ. ❖



ಸಂತೋಷ್ ಜಾವರೆ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಪ್ರಪಂಚದ ಜನ ನಿಮ್ಮ ಬಗ್ಗೆ ಏನು ಯೋಚಿಸುತ್ತಾರೆ ಎಂದು ಚಿಂತಿಸುವುದು ನಿಜಕ್ಕೂ ನಿಮ್ಮ ಕೆಲಸವಲ್ಲ.

–ಮಾರ್ಥಾ ಗ್ರಹಾಂ

ಸಂಸದರ ನಿಧಿ: ಮೊದಲು ನ್ಯೂನತೆ ಸರಿಪಡಿಸಿ

ಕೋವಿಡ್ ಕಾರಣಕ್ಕೆ ಅಮಾನತಿನಲ್ಲಿಟ್ಟಿದ್ದ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ (ಎಂ.ಪಿ. ಲ್ಯಾಡ್ಸ್) ಪುನಃ ಚಾಲನೆ ಕೊಟ್ಟು ಮುಂದುವರಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ದೇಶದ ಸಂಸದರ ಪಾಲಿಗೆ ಸಂತಸದ ಸಮಾಚಾರ ಇದಾಗಿದೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಪ್ರಸಕ್ತ ಹಣಕಾಸು ವರ್ಷದಲ್ಲಿ ಪ್ರತಿಯೊಬ್ಬ ಸಂಸದರ ಕ್ಷೇತ್ರಕ್ಕೆ ₹2 ಕೋಟಿಯಷ್ಟು ಅನುದಾನ ಸಿಗಲಿದೆ. ಮುಂದಿನ ಹಣಕಾಸು ವರ್ಷದಿಂದ ಯಥಾಪ್ರಕಾರ ₹5 ಕೋಟಿಯಷ್ಟು ಅನುದಾನ ಒದಗಿಸಲಾಗುವುದು ಎಂದೂ ಸರ್ಕಾರ ಪ್ರಕಟಿಸಿದೆ. ಎರಡು ವರ್ಷಗಳವರೆಗೆ ಅಮಾನತಿನಲ್ಲಿಡಲು ನಿರ್ಧರಿಸಿದ್ದ ಯೋಜನೆಗೆ ಅವಧಿ ಮುಗಿಯುವ ಮೊದಲೇ ಮರುಚಾಲನೆ ನೀಡುವಂತಹ ಅಗತ್ಯ ಏನಿತ್ತು ಎಂಬ ಪ್ರಶ್ನೆ ಮೂಡಿದೆ. ಹಾಗೆಯೇ 2020–21ನೇ ಹಣಕಾಸು ವರ್ಷದಲ್ಲಿ ಯೋಜನೆಯನ್ನು ಅಮಾನತಿನಲ್ಲಿ ಇಟ್ಟಿದ್ದರಿಂದ ಉಳಿದ ₹4,000 ಕೋಟಿಯಷ್ಟು ನಿಧಿಯನ್ನು ಯಾವ ಉದ್ದೇಶಕ್ಕಾಗಿ ಬಳಕೆ ಮಾಡಲಾಯಿತು ಮತ್ತು ಕೋವಿಡ್ ಸಾಂಕ್ರಾಮಿಕದ ವಿರುದ್ಧ ಹೋರಾಡುವ ದಿಸೆಯಲ್ಲಿ ಅದು ಹೇಗೆ ದೇಶದ ನೆರವಿಗೆ ಬಂತು ಎಂಬ ಪ್ರಶ್ನೆಯೂ ಇದೆ. ಸಕಾರಣದ ಮತ್ತು ಸಕಾಲಿಕವಾದ ಈ ಪ್ರಶ್ನೆಗಳಿಗೆ ಉತ್ತರಿಸುವ ಹೊಣೆ ಕೇಂದ್ರ ಸರ್ಕಾರದ ಮೇಲಿದೆ. ರಾಜ್ಯವನ್ನು ರಾಜ್ಯಸಭಾ ಸದಸ್ಯರೂ ಸೇರಿದಂತೆ 40 ಸಂಸದರು ಪ್ರತಿನಿಧಿಸುತ್ತಿದ್ದಾರೆ. ಕಳೆದ ಆರ್ಥಿಕ ವರ್ಷದಲ್ಲಿ ಅವರೆಲ್ಲರ ಸ್ಥಳೀಯ ಪ್ರದೇಶಾಭಿವೃದ್ಧಿಗೆ ಸಿಗಬೇಕಾಗಿದ್ದ ಒಟ್ಟು ಮೊತ್ತ ₹200 ಕೋಟಿ. ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ಈ ಅನುದಾನ ಬಳಸಬಹುದಿತ್ತು. ಅಂತಹ ಸುವರ್ಣಾವಕಾಶವನ್ನು ಕೈಚೆಲ್ಲಲಾಗಿದೆ. ಹಾಗಾದರೆ ಆ ಹಣ ಯಾವ ಉದ್ದೇಶಕ್ಕೆ ಬಳಕೆಯಾಯಿತು ಎಂಬುದನ್ನು ತಿಳಿಯುವ ಹಕ್ಕು ಜನರಿಗಿದೆ.



ಈ ಯೋಜನೆಯ ಅಗತ್ಯ, ಸ್ವರೂಪ ಹಾಗೂ ಹಣದ ವರ್ಗಾವಣೆ ಬಗ್ಗೆ ಸರ್ಕಾರ ಪುನರ್ ಪರಿಶೀಲನೆ ನಡೆಸಬೇಕು

ಎಂ.ಪಿ. ಲ್ಯಾಡ್ಸ್ ಅನ್ನು ತರಾತುರಿಯಲ್ಲಿ ಪುನರಾರಂಭಿಸುವ ತುರ್ತು ಸಂದರ್ಭವೊಂದು ಈಗ ಸೃಷ್ಟಿಯಾಗಿರುವಂತೆ ಕಾಣುವುದಿಲ್ಲ. ವಾಸ್ತವವಾಗಿ ಈ ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆಯ ಕೊರತೆ ತೀವ್ರವಾಗಿದ್ದು, ಅನುದಾನ ಬಳಕೆಯ ಸ್ವರೂಪದ ಕುರಿತು ಮೊದಲಿನಿಂದಲೂ ಅಪಸ್ವರಗಳು ಕೇಳಿಬರುತ್ತಿವೆ. ಹಣ ದುರ್ಬಳಕೆ, ಅಪವ್ಯಯ, ಸ್ವಜನಪಕ್ಷಪಾತ ಹಾಗೂ ಭ್ರಷ್ಟಾಚಾರದ ಕೆಸರು ಈ ಯೋಜನೆಗೆ ಮೆತ್ತಿಕೊಂಡಿರುವುದು ಮಹಾಲೇಖಪಾಲರ (ಸಿಎಜಿ) ವರದಿಗಳಲ್ಲಿ ಮೇಲಿಂದ ಮೇಲೆ ವ್ಯಕ್ತವಾಗುತ್ತಲೇ ಇದೆ. ಇದರಿಂದ ಇಡೀ ಯೋಜನೆಯನ್ನು ಅನುಮಾನದಿಂದಲೇ ನೋಡುವಂತಾಗಿದೆ. ಕುಡಿಯುವ ನೀರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಹಾಗೂ ರಸ್ತೆ ಸೌಕರ್ಯ ಒದಗಿಸುವಂತಹ ಮಹತ್ವದ ಯೋಜನೆಗಳಿಗೆ ಈ ನಿಧಿಯನ್ನು ಬಳಕೆ ಮಾಡಬೇಕೆಂದು ಆದ್ಯತಾ ವಲಯಗಳನ್ನೇನೋ ಗುರುತಿಸಲಾಗಿದೆ. ಆದರೆ, ಮತ ತರುವಂತಹ ಸಮುದಾಯ ಭವನಗಳ ನಿರ್ಮಾಣಕ್ಕೇ ಈ ಹಣ ಬಳಕೆಯಾಗಿದ್ದು ಹೆಚ್ಚು. ಕೆಲವು ಸಂಸದರು ಜಾತಿವಾರು ಸೌಲಭ್ಯಗಳಿಗೆ ಅನುದಾನ ಹಂಚಿಕೆ ಮಾಡಿದ ದೂರುಗಳೂ ಇಲ್ಲದಿಲ್ಲ. ಅನುದಾನ ಹಂಚಿಕೆಯ ವಿವೇಚನಾಧಿಕಾರವನ್ನು ಹೊಂದಿರುವ ಸಂಸದರಿಗೆ ಉತ್ತರದಾಯಿತ್ವದ ಹೊಣೆಗಾರಿಕೆ ಇಲ್ಲದಿರುವುದು ಯೋಜನೆಯ ಅನುಷ್ಠಾನದಲ್ಲಿನ ಲೋಪಗಳಿಗೆ ಬಹುಮುಖ್ಯ ಕಾರಣ. ಹಾಗೆ ನೋಡಿದರೆ, ರಾಜಕೀಯವಾಗಿ, ನೈತಿಕವಾಗಿ ತಪ್ಪು ಹೆಜ್ಜೆ ಎನಿಸಿರುವ ಈ ಯೋಜನೆಯನ್ನು ಜಾರಿಗೆ ತರುವ ಮೂಲಕ ಸಾರ್ವಜನಿಕ ಹಣಕಾಸು ನಿರ್ವಹಣೆಯ ನಿಯಮಗಳನ್ನು ಉಲ್ಲಂಘನೆ ಮಾಡಲಾಗಿದೆ. ಬಹುಮತವನ್ನು ಕಾಯ್ದುಕೊಳ್ಳುವ ತಂತಿಯ ಮೇಲಿನ ನಡಿಗೆಯಲ್ಲಿ ತೊಡಗಿದ್ದ ಪಿ.ವಿ. ನರಸಿಂಹ ರಾವ್ ನೇತೃತ್ವದ ಆಗಿನ ಕೇಂದ್ರ ಸರ್ಕಾರವು 1993ರಲ್ಲಿ ಜಾರಿಗೆ ತಂದ ಯೋಜನೆ ಇದಾಗಿದೆ. ಸಂಸದರನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳಲು ಅವರಿಗೆ ಕೊಟ್ಟಂತಹ ಸರ್ಕಾರಿ ಪ್ರಾಯೋಜಿತ ‘ಬಹುಮಾನ’ ಇದಾಗಿತ್ತು ಎನ್ನುವ ಆರೋಪದಲ್ಲಿ ಹುರುಳಿಲ್ಲದೇ ಇಲ್ಲ.

ಕಾರ್ಯಾಂಗ ಮತ್ತು ಶಾಸಕಾಂಗದ ನಡುವಣ ಕಾರ್ಯವ್ಯಾಪ್ತಿ ಸ್ಪಷ್ಟವಾಗಿರಬೇಕು ಎಂಬ ತತ್ವಕ್ಕೆ ಈ ಯೋಜನೆ ಬದ್ಧವಾಗಿಲ್ಲ. ಕಾರ್ಯಗತ ಆಗಬೇಕಿರುವ ಯೋಜನೆಗಳು ಯಾವುವು ಎಂಬುದನ್ನು ಸಂಸದರು ಆಯ್ಕೆ ಮಾಡುವುದು ಕಾರ್ಯಾಂಗದ ಅಧಿಕಾರ ವ್ಯಾಪ್ತಿಯಲ್ಲಿ ಹಸ್ತಕ್ಷೇಪ ನಡೆಸಿದಂತೆ ಎಂಬ ಟೀಕೆಗಳಲ್ಲಿನ ಸತ್ಯಾಂಶವನ್ನು ಗ್ರಹಿಸಿ, ಈ ಯೋಜನೆಯ ಅಗತ್ಯದ ಬಗ್ಗೆ, ಸ್ವರೂಪದ ಬಗ್ಗೆ, ಹಣದ ವರ್ಗಾವಣೆ ಬಗ್ಗೆ ಸರ್ಕಾರ ಪುನರ್ ಪರಿಶೀಲನೆ ನಡೆಸಬೇಕು. ಸಾರ್ವಜನಿಕರ ಹಣ ಪೋಲಾಗುವುದನ್ನು ತಪ್ಪಿಸಬೇಕು. ಆದ್ಯತೆಯ ಕೆಲಸಗಳಿಗೆ ಮಾತ್ರ ಅದು ಬಳಕೆಯಾಗುವಂತೆ ನೋಡಿಕೊಳ್ಳಬೇಕು.

ದಿನದ ಟ್ವೀಟ್



ಸಂಕಟ ಬಂದಾಗ...

ಭಾರಿ ಪ್ರಮಾಣದಲ್ಲಿ ಮಳೆ ಬಂದಾಗ ಮಾತ್ರ ನಾವು ಜಲಮೂಲಗಳ ಮೇಲೆ ದೀರ್ಘಕಾಲದಿಂದ ನಡೆಸಿರುವ ಅತಿಕ್ರಮಣ, ನಗರ ಯೋಜನೆ ರೂಪಿಸುವಲ್ಲಿನ ಕೊರತೆ, ಸ್ಮಾರ್ಟ್ ಸಿಟಿ– ರಾಜಕಾಲುವೆ ಕಾಮಗಾರಿ ಗುತ್ತಿಗೆ ನೀಡುವಲ್ಲಿನ ಭಾರಿ ಭ್ರಷ್ಟಾಚಾರದಿಂದ ಆಗಿರುವ ಸಂಯೋಜಿತ ಪರಿಣಾಮಗಳ ಬಗ್ಗೆ ಚಿಂತಿಸುತ್ತೇವೆಯೇ? ದೀರ್ಘಕಾಲಿಕ ರಾಚನಿಕ ಸುಧಾರಣೆಗಳ ಅಗತ್ಯವಿದೆ ಎಂಬುದು ನಿಚ್ಚಳವಾಗಿದೆ.

ಡಾ. ಪಿ.ತ್ಯಾಗರಾಜನ್, ಹಣಕಾಸು ಸಚಿವ, ತಮಿಳುನಾಡು

ಕಿಡಿನುಡಿ



ನನ್ನ ಜೀವನ–ಸಾಧನೆ ಕುರಿತು ಬಯೋಪಿಕ್ ಮಾಡಲು ಹಲವರು ಪ್ರಸ್ತಾವ ಸಲ್ಲಿಸಿದ್ದಾರೆ. ಆದರೆ ಈಗಿನ ಸಾಧನೆ ಆರಂಭವಷ್ಟೇ. ಇದು ನನ್ನ ಮೊದಲ ಒಲಿಂಪಿಕ್ಸ್ ಆಗಿತ್ತು. ಇನ್ನೂ ಒಂದಿಷ್ಟು ಪದಕಗಳನ್ನು ಗೆಲ್ಲುವ ಗುರಿ ನನಗಿದೆ. ಆದ್ದರಿಂದ ಗಮನವನ್ನೆಲ್ಲ ಕ್ರೀಡೆಯತ್ತ ಕೇಂದ್ರೀಕರಿಸುತ್ತೇನೆ. ಈಗಲೇ ಬಯೋಪಿಕ್ ಮಾಡಿದರೆ ತೋಪಾಗಬಹುದು. ಆದರೆ, ಮತ್ತಷ್ಟು ಸಾಧನೆಗಳ ನಂತರ ಮಾಡಿದರೆ ಹಿಟ್ ಆಗುವ ಸಾಧ್ಯತೆ ಹೆಚ್ಚು.

ನೀರಜ್ ಚೋಪ್ರಾ, ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಅಥ್ಲೀಟ್

25 ವರ್ಷಗಳ ಹಿಂದೆ

ಮಂಗಳವಾರ, 12-11-1996

• ನಗರಕ್ಕೆ ಬಂದಿಳಿದ ಚೆಲುವು

ಬೆಂಗಳೂರು, ನ. 11– ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ವಿವಿಧ ದೇಶಗಳ 88 ಚೆಲುವೆಯರು ಸೋಮವಾರ ಮಧ್ಯರಾತ್ರಿ ನಗರಕ್ಕೆ ಆಗಮಿಸಿದರು. ಇದರೊಂದಿಗೆ ನಗರವು ವಿಶ್ವ ಎದುರು ನೋಡುತ್ತಿರುವ ಮಹಾನ್ ಸ್ಪರ್ಧೆಗೆ ಸಜ್ಜಾಯಿತು.

ಸ್ಪರ್ಧೆಗೆ ಪೂರ್ವಭಾವಿಯಾಗಿ ನಡೆದ ಈಜುಡುಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಸೀಷೆಲ್ಸ್ ದ್ವೀಪಕ್ಕೆ ತೆರಳಿದ್ದ ಎಲ್ಲ ಸ್ಪರ್ಧಿಗಳು ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಯ ವಿಶೇಷ ವಿಮಾನದಲ್ಲಿ ನಗರದ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿದ್ದಂತೆಯೇ ನಾಲ್ಕು ಹವಾನಿಯಂತ್ರಿತ ಬಸ್ಸುಗಳಲ್ಲಿ ಅವರನ್ನು ವಿಂಡ್ಸರ್ ಮ್ಯಾನರ್ ಹೋಟೆಲ್‌ಗೆ ಕರೆದೊಯ್ಯಲಾಯಿತು.

ವಿಶ್ವಸುಂದರಿ ಸ್ಪರ್ಧೆಯ ವಿರುದ್ಧ ಕೆಲವು ಸಂಘ ಸಂಸ್ಥೆಗಳು ಪ್ರತಿಭಟನೆ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಸುಂದರಿಯರು ಆಗಮಿಸುವ ಸಂದರ್ಭದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

• ‘ರಂಗ ಸರ್ಕಾರಕ್ಕೆ ಶೀಘ್ರವೇ ಕಾಂಗ್ರೆಸ್’

ಹುಬ್ಬಳ್ಳಿ, ನ. 11– ‘ಯಾರು ಏನೇ ಹೇಳಿದರೂ ರಾಷ್ಟ್ರೀಯ ರಂಗ ಸರ್ಕಾರ ಪೂರ್ಣಾವಧಿವರೆಗೆ ಬಾಳುತ್ತದೆ. ಕಾಂಗ್ರೆಸ್ ಶೀಘ್ರದಲ್ಲೇ ರಂಗ ಸರ್ಕಾರ ಸೇರುವ ಸಾಧ್ಯತೆ ಇದೆಯೇ ಹೊರತು ಅದು ಬೆಂಬಲ ಹಿಂತೆಗೆಯುವ ಪ್ರಶ್ನೆಯೇ ಇಲ್ಲ’ ಎಂದು ಕೇಂದ್ರ ಸಚಿವ ಎಸ್.ಆರ್. ಬೊಮ್ಮಾಯಿ ಅವರು ಇಂದು ಇಲ್ಲಿ ಹೇಳಿದರು.

50 ವರ್ಷಗಳ ಹಿಂದೆ

ಶುಕ್ರವಾರ, 12-11-1971

• ಸಂಕೇತ ಸ್ವತ್ತಲ್ಲ

ನವದೆಹಲಿ, ನ. 11– ಕಾಂಗ್ರೆಸ್ ಚುನಾವಣೆ ಸಂಕೇತವನ್ನು ಇಬ್ಭಾಗವಾಗಿ ಮಾಡಿ ಒಂದು ಎತ್ತಿನ ಸಂಕೇತವನ್ನು ಒಂದು ಗುಂಪಿಗೂ ಮತ್ತೊಂದನ್ನು ಮತ್ತೊಂದು ಗುಂಪಿಗೂ ಕೊಡಲು ಅವಕಾಶವಿಲ್ಲ.

‘ನೊಗ ಹೊತ್ತ ಜೋಡಿ ಎತ್ತು’ ಸಂಕೇತ ಬಳಕೆಯಿಂದ ತನ್ನನ್ನು ತಪ್ಪಿಸಬಾರದೆಂಬ ಸಂಸ್ಥಾ ಕಾಂಗ್ರೆಸ್ಸಿನ ವಾದವನ್ನು ಸುಪ್ರೀಂ ಕೋರ್ಟ್ ನಿರಾಕರಿಸಿ ಇಂದು ಇತ್ತ ತೀರ್ಪಿನಲ್ಲಿ ಈ ಅಂಶವನ್ನು ತಿಳಿಸಿದೆ. ಸಂಕೇತವು ಸಹ– ಮಾಲೀಕರ ನಡುವೆ ಹಂಚುವಂತಹ ಆಸ್ತಿಯಲ್ಲ ಸಂಕೇತ. ರಾಜಕೀಯ ಪಕ್ಷವೊಂದು ಇಬ್ಭಾಗವಾಗಿ ಅಥವಾ ಅನೇಕ ಗುಂಪುಗಳಲ್ಲಿ ಒಡೆಯಬಹುದು. ‘ಆದರೆ ಸಂಕೇತವನ್ನು ಒಡೆಯುವಂತಿಲ್ಲ’ ಎಂದಿದೆ.

• ರೈಲು ಕಂಬಿ ತಪ್ಪಿ ಸಂಚಾರಕ್ಕೆ ಅಡ್ಡಿ

ಹುಬ್ಬಳ್ಳಿ, ನ. 11– ಇಲ್ಲಿಗೆ ಸುಮಾರು 18 ಕಿ.ಮೀ ದೂರವಿರುವ ಹೆಬ್ಸೂರು ರೈಲು ನಿಲ್ದಾಣದ ಬಳಿ ನಿನ್ನೆ ರಾತ್ರಿ ಗೂಡ್ಸ್ ರೈಲಿನ ಎಂಜಿನ್ ಮತ್ತು 5 ಬೋಗಿಗಳು ಕಂಬಿ ತಪ್ಪಿ ಉರುಳಿ ಹುಬ್ಬಳ್ಳಿ– ಗದಗ ಮಧ್ಯೆ 8 ಗಂಟೆಗಳಿಗೂ ಹೆಚ್ಚು ಕಾಲ ರೈಲು ಸಂಚಾರಕ್ಕೆ ಅಡ್ಡಿಯಾಯಿತು.

ಸಾಹಿತ್ಯ ಪರಿಷತ್ತು ಚುನಾವಣೆಯಲ್ಲಿನ ಪಕ್ಷ ರಾಜಕಾರಣವು ಅಮೃತಕ್ಕೆ ವಿಷವಿಕ್ಕುವಂತಿದೆ

‘ರಕ್ಷಿಸು ಕರ್ನಾಟಕ ದೇವಿ...’



ಪಡಸಾಲೆ

ರಘುನಾಥ ಚ.ಹ.

ಧಾರವಾಡ ಸಾಹಿತ್ಯ ಸಮ್ಮೇಳನದ (1957) ಅಧ್ಯಕ್ಷ ಭಾಷಣದಲ್ಲಿ ಕುವೆಂಪು, ಸಾರ್ವತ್ರಿಕ ಚುನಾವಣೆಗಳ ಸ್ವರೂಪ ವಿಷಮಗೊಂಡಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಅವರ ಮಾತುಗಳು ಹೀಗಿವೆ: ‘ಐದು ವರ್ಷಕ್ಕೊಮ್ಮೆ ನಡೆಯುವ ಹಾಗೂ ಜನಹೃದಯ-ಸಾಗರವನ್ನು ಕಡೆಯುವ ಮಹಾಚುನಾವಣೆ ನಮ್ಮಲ್ಲಿ ಪ್ರಜಾಪ್ರಭುತ್ವದ ತತ್ತ್ವವನ್ನು ಬಿತ್ತಿ, ಸಮನ್ವಯದೃಷ್ಟಿ-ಯನ್ನು ವಿಸ್ತರಿಸುವುದಕ್ಕೆ ಬದಲಾಗಿ, ನಾಲ್ಕು ವರ್ಷದ ಅವಧಿಯಲ್ಲಿ ಕೊಂಚ ಸಮಾಧಾನ ಹೊಂದಿ ತಣ್ಣಗಾಗಿ ಕಡಲ ತಳಕ್ಕೆ ಇಳಿದು ಕುಳಿತ ಕ್ರೋಧ, ಅಸೂಯೆ, ಸ್ಪರ್ಧೆ, ವೈರ, ಜಾತಿಮಾತ್ಸರ್ಯ, ದ್ವೇಷ, ದುರ್ಬುದ್ಧಿ, ಸ್ವಾರ್ಥತೆ ಇತ್ಯಾದಿ ಭಾವೋನ್ಮಾದ ಬುದ್ಧಿ ಭ್ರಾಂತಿಗಳನ್ನೆಲ್ಲ ಕಡೆದೆಬ್ಬಿಸಿ ಹೊಡೆದೆಬ್ಬಿಸಿ ಎಂತಹ ಅನಾಹುತವಾಗುತ್ತಿದೆ ಎನ್ನುವುದನ್ನು ತಿಳಿದವರೆಲ್ಲ ಬಲ್ಲರು. ಸಾಹಿತ್ಯ ಈ ವಿಷವನ್ನೆಲ್ಲ ಈಂಟುವ ನೀಲಕಂಠನಾಗಬೇಕು; ಅಮೃತವನ್ನು ಹಂಚುವ ದಿವ್ಯಮೋಹಿನಿಯಾಗಬೇಕು’.

ಅರವತ್ತರ ದಶಕದ ಚುನಾವಣೆಗಳು ಕಾಲಕೂಟದ ಸ್ವರೂಪ ಪಡೆಯುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದ್ದ ಕುವೆಂಪು, ಇಂದಿನ ಚುನಾವಣೆಗಳ ಸ್ವರೂಪವನ್ನು ನೋಡಿದ್ದರೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು? ಸಾರ್ವತ್ರಿಕ ಚುನಾವಣೆಗಳ ಮಾತಿರಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಹಸ್ತಕ್ಷೇಪ ನಡೆಯುತ್ತಿರುವುದರ ಬಗ್ಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು? ಯಾವ ವಿಷಕ್ಕೆ ಸಾಹಿತ್ಯ ಅಮೃತವೆಂದು ಅವರು ಭಾವಿಸಿದ್ದರೋ, ಆ ಅಮೃತಕ್ಕೆ ವಿಷವನ್ನು ಬೆರೆಸುವ ಕೆಲಸ ಈಗ ನಡೆಯುತ್ತಿದೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಯಲ್ಲಿ ಪಕ್ಷ ರಾಜಕಾರಣ ಬಹಿರಂಗವಾಗಿ ಕಾಣಿಸುತ್ತಿದೆ.

ಚುನಾವಣೆಯಲ್ಲಿ ಸ್ಪರ್ಧಿಸಿರುವ ಮಹೇಶ್ ಜೋಶಿ ಅವರ ಪರವಾಗಿ ಸಂಸದ ಬಿ.ವೈ.ರಾಘವೇಂದ್ರ, ಶಾಸಕ ಪರಣ್ಣ ಮುನವಳ್ಳಿ, ಮಾಜಿ ಶಾಸಕ ಮುನಿರಾಜು ಸೇರಿದಂತೆ ಹಲವು ಬಿಜೆಪಿ ನಾಯಕರು ಬೆಂಬಲ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರು ಪರಿಷತ್ತಿನ ಸದಸ್ಯರ ಮನೆಗಳಿಗೆ ಭೇಟಿ ಕೊಟ್ಟು ಮತ ಯಾಚಿಸುತ್ತಿದ್ದಾರೆ. ಈ ಬೆಳವಣಿಗೆಯನ್ನು ನೋಡಿದರೆ, ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಸಾಹಿತ್ಯ–ಸಂಸ್ಕೃತಿಯ ವಿಚಾರಗಳು ಹಿಂದಾಗಿ ಪಕ್ಷ ರಾಜಕೀಯ ಮುನ್ನೆಲೆಗೆ ಬಂದಂತಿದೆ.

ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಪಕ್ಷ ರಾಜಕೀಯ ಕಾಣಿಸಿಕೊಂಡಿರುವುದು ಇದು ಮೊದಲೇನಲ್ಲ. 1969ರಲ್ಲಿ ಜಿ.ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾದಾಗಲೇ ಪಕ್ಷ ರಾಜಕೀಯದ ವಾಸನೆ ಚುನಾವಣೆಯಲ್ಲಿ ಕಾಣಿಸಿಕೊಂಡಿತು. ಕಾಂಗ್ರೆಸ್ಸಿಗರಾದ ನಾರಾಯಣರನ್ನು ಪಕ್ಷದ ಕೆಲವು ಮುಖಂಡರು ಬೆಂಬಲಿಸಿದ್ದರು ಹಾಗೂ ಪರಿಷತ್ತಿನ ಚುನಾವಣೆಯಲ್ಲಿ ಪಕ್ಷ ರಾಜಕಾರಣದ ವಿರುದ್ಧ ಕೆಲವು ಸಾಹಿತಿಗಳು ಧ್ವನಿ ಎತ್ತಿದ್ದರು. ಆ ವಿರೋಧವನ್ನು ಮೀರಿ ನಾರಾಯಣ ಚುನಾವಣೆಯಲ್ಲಿ ಗೆದ್ದು ಪರಿಷತ್ತಿನ ಅಧ್ಯಕ್ಷರಾಗಿದ್ದರು. ನಂತರದ ಚುನಾವಣೆಯಲ್ಲಿ ಸೋಲುಂಡು, ಅಧಿಕಾರ ಹಸ್ತಾಂತರದ ಸಮಯದಲ್ಲಿ, ‘ನಾನು ರಾಜಕಾರಣಿ. ರಾಜಕಾರಣ ಮಾಡಿಯೇ ಅಧ್ಯಕ್ಷನಾದೆ. ಆದರೆ, ಈಗ ನನ್ನ ಸ್ಥಾನಕ್ಕೆ ಬಂದಿರುವವರು ನನಗಿಂತಲೂ ದೊಡ್ಡ ರಾಜಕಾರಣಿ’ ಎಂದು ನಾರಾಯಣ ಹೇಳಿದ್ದರಂತೆ. ಪಕ್ಷ ರಾಜಕಾರಣದೊಂದಿಗೆ ಗುರ್ತಿಸಿಕೊಂಡರೂ ನಾರಾಯಣ ಅವರು ಮಾಡಿದ ಕೆಲಸಗಳು ಪರಿಷತ್ತಿನ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತಹವು.

ಈಗಿನ ಸನ್ನಿವೇಶ ಸಂಪೂರ್ಣ ಭಿನ್ನವಾದುದು. ಜಾತಿ ಮತ್ತು ಧರ್ಮದೊಂದಿಗೆ ತಳಕು ಹಾಕಿಕೊಂಡ ಇಂದಿನ ಪಕ್ಷ ರಾಜಕಾರಣ, ನಾಡು–ನುಡಿಯ ಹಿತಾಸಕ್ತಿಗಿಂತಲೂ ಧರ್ಮ ಹಾಗೂ ಪಕ್ಷದ ಹೈಕಮಾಂಡ್ ಓಲೈಕೆಯೇ ಮುಖ್ಯವಾದುದು ಎಂದು ಭಾವಿಸಿರುವಂತಹದ್ದು. ಇಂತಹ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ಬೆಂಬಲಿತ ಅಭ್ಯರ್ಥಿಗಳು ಪರಿಷತ್ತಿನ ಅಧ್ಯಕ್ಷರಾದರೆ, ಅವರು ಕನ್ನಡದ ಕಟ್ಟಾಳುವಾಗುವ ಬದಲು ಪಕ್ಷದ ಕಾರ್ಯಕರ್ತರಂತೆಯೇ ವರ್ತಿಸತೊಡಗುತ್ತಾರೆ.

ಸಾಹಿತ್ಯ ಪರಿಷತ್ತು ಈಗಾಗಲೇ ನಾಡಿನ ಪ್ರಬಲ ಜಾತಿಗಳ ಹಿಡಿತದಲ್ಲಿ ಸಿಕ್ಕಿಕೊಂಡಿದೆ. ಹಿಂದಿನ ಕೆಲವು ಅಧ್ಯಕ್ಷರು ಜಾತಿಕೇಂದ್ರಿತವಾಗಿ ಸದಸ್ಯತ್ವ ಆಂದೋಲನ ನಡೆಸಿದ್ದರಿಂದಾಗಿ, ಪರಿಷತ್ತಿನ ಸದಸ್ಯರಲ್ಲಿ ನಿರ್ದಿಷ್ಟ ಜಾತಿಗೆ ಸೇರಿದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜಾತಿಬೆಂಬಲ ಇಲ್ಲದವರು ಪರಿಷತ್ತಿನ ಚುಕ್ಕಾಣಿ ಹಿಡಿಯುವುದು ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಜಾತಿಯ ಜೊತೆಗೆ ಪಕ್ಷ ರಾಜಕಾರಣವೂ ಸೇರಿಕೊಂಡರೆ, ಪರಿಷತ್ತಿನೊಂದಿಗೆ ತಳಕು ಹಾಕಿಕೊಂಡಿರುವ ‘ಸಾಹಿತ್ಯ’ ಪಾರ್ಶ್ವವಾಯುವಿಗೆ ಒಳಗಾಗುವುದು ಖಚಿತ.

ಈಗಿನ ಸದಸ್ಯರ ಸಂಖ್ಯೆ ಮೂರು ಲಕ್ಷ ನಲವತ್ತು ಸಾವಿರದಷ್ಟಿದೆ. ಅದನ್ನು ಒಂದು ಕೋಟಿಗೆ ಏರಿಸುತ್ತೇನೆ ಎಂದು ಅಭ್ಯರ್ಥಿಯೊಬ್ಬರು ಹೇಳಿದ್ದಾರೆ. ಈಗ ಮೂರು ಲಕ್ಷ ನಲವತ್ತು ಸಾವಿರ ಸದಸ್ಯರು ಇರುವಾಗಲೇ ಚುನಾವಣೆಯಲ್ಲಿ ಸ್ಪರ್ಧಿಸುವುದು ದುಬಾರಿ ಬಾಬತ್ತಾಗಿದೆ. ಇನ್ನು ಕೋಟಿ ಸದಸ್ಯರ ಲೆಕ್ಕ ಹಿಡಿದರೆ, ಪರಿಷತ್ತಿಗೂ ದನಗಳ ದೊಡ್ಡಿಗೂ ವ್ಯತ್ಯಾಸ ಇರುವುದಿಲ್ಲ.

ಪರಿಷತ್ತು ಜನಮುಖಿ, ಜನಪರ ಆಗಬೇಕೆನ್ನುವುದು ನಿಜ. ಜನಮುಖಿ ಆಗುವುದೆಂದರೆ ಪರಿಷತ್ತನ್ನು ಕಲ್ಯಾಣಮಂಟಪ ಮಾಡುವುದು ಎಂದರ್ಥವಲ್ಲ.



ಪರಿಷತ್ತಿನ ಚಟುವಟಿಕೆಗಳು ನಾಡುನುಡಿಯ ಏಳಿಗೆಗೆ ಪೂರಕವಾಗಿರಬೇಕು. ಆ ಬಗ್ಗೆ ಈಗಿನ ಕೆಲವು ಅಭ್ಯರ್ಥಿ-ಗಳಲ್ಲಿ ಯೋಜನೆಗಳಿದ್ದಂತಿಲ್ಲ.

ಸಾಹಿತಿಗಳ ಆಯ್ಕೆ ಸಾಧ್ಯವಿಲ್ಲದಿರುವ ಸಂದರ್ಭದಲ್ಲಿ ಸಾಹಿತ್ಯ ಪರಿಚಾರಕರನ್ನಾದರೂ ಆಯ್ದುಕೊಳ್ಳೋಣವೆಂದರೆ, ಈಗ ಸಾಹಿತ್ಯ ಪರಿಚಾರಕರ ವೇಷದಲ್ಲಿ ರಾಜಕಾರಣಿಗಳು, ರಾಜಕೀಯ ಪಕ್ಷಗಳಿವೆ. ಧರ್ಮ-ಗ್ರಂಥಗಳ ಜನಪ್ರಿಯ ಘೋಷಗಳನ್ನೇ ಸಾಹಿತ್ಯ–ಸಂಸ್ಕೃತಿಯೆಂದು ತಿಳಿದವರು ಪರಿಷತ್ತಿನೊಳಗೆ ಪ್ರವೇಶ ಪಡೆಯಲು ಹವಣಿಸುತ್ತಿರುವುದು, ಕನ್ನಡದ ಹೆಸರಿನಲ್ಲಿ ಪಕ್ಷ ರಾಜಕಾರಣ ಮಾಡುವ ಪ್ರಯತ್ನದಂತಿದೆ.

ಕೇಂದ್ರ ಸರ್ಕಾರದ ಹಿಂದಿ ಲಲ್ಲೆಗರೆಯುವಿಕೆಯ ಬಗ್ಗೆ ಧ್ವನಿ ಎತ್ತಬೇಕಾದಾಗಲೆಲ್ಲ ಗಂಟಲಲ್ಲಿ ಕಡುಬು ತುರುಕಿ-ಕೊಳ್ಳುವವರು ಹಾಗೂ ಕನ್ನಡ ಬಾವುಟಕ್ಕೆ ಬೆಂಬಲವಾಗಿ ನಿಲ್ಲದವರು ಪರಿಷತ್ತಿನೊಳಗೆ ಪ್ರವೇಶ ಪಡೆದರೆ, ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಗೆ ಬಣ್ಣಗುರುಡು ಆವರಿಸಿ-ಕೊಂಡಂತಾಗುತ್ತದೆ.

ಸಾಹಿತ್ಯ ಪರಿಷತ್ತಿನ ಕಾರ್ಯವೈಖರಿ ಮತ್ತು ಅದರ ಈಗಿನ ಸ್ವರೂಪದ ಬಗ್ಗೆ ಅನೇಕರಿಗೆ ಪ್ರಶ್ನೆಗಳಿವೆ. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎನ್ನುವ ದಂತಗೋಪುರ-ದಲ್ಲೇ ಪರಿಷತ್ತು ಸಿಲುಕಿಕೊಂಡಿರುವುದೂ ನಿಜ. ಆದರೆ, ಲಕ್ಷಾಂತರ ಮಂದಿ ಸ್ವಯಂಪ್ರೇರಣೆಯಿಂದ ಸಾಹಿತ್ಯ ಸಮ್ಮೇಳನಗಳಿಗೆ ಆಗಮಿಸುತ್ತಾರೆ ಎನ್ನುವುದೇ ಪರಿಷತ್ತಿನ ಮಹತ್ವ ಹಾಗೂ ಪ್ರಸ್ತುತತೆಯನ್ನು ಸೂಚಿಸುವಂತಿದೆ. ಈ ಚುಂಬಕಶಕ್ತಿಯ ಕಾರಣದಿಂದಲೇ ಪರಿಷತ್ತನ್ನು ಪ್ರಜಾಸತ್ತಾತ್ಮಕವಾಗಿ ಉಳಿಸಬೇಕಾಗಿದೆ ಹಾಗೂ ಅದಕ್ಕೆ ಬಲ ತುಂಬಬೇಕಾಗಿದೆ.

ರಾಜಕಾರಣ ಮತ್ತು ರಾಜಕಾರಣಿ ಸಾಹಿತ್ಯ ಪರಿಷತ್ತಿಗೆ ವರ್ಜ್ಯವಾಗಬೇಕಿಲ್ಲ. ಪರಿಷತ್ತಿನ ಯೋಜನೆಗಳನ್ನು ಬೆಂಬಲಿಸುವ ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸು-ವಷ್ಟಕ್ಕೆಮಾತ್ರ ರಾಜಕಾರಣಿಗಳ ಪಾತ್ರ ಸೀಮಿತವಾಗಬೇಕು. ಪರಿಷತ್ತಿನ ಕಾರ್ಯವೈಖರಿಗಳಲ್ಲಿ ಪಕ್ಷ ರಾಜಕಾರಣಕ್ಕೆ ಅವಕಾಶ ಇರಬಾರದು. ಅದು ಸಾಧ್ಯವಾಗದೆ ಹೋದಲ್ಲಿ, ಸಮ್ಮೇಳನಗಳಿಗೆ ಹರಿದುಬರುವ ಜನಸಾಗರದಲ್ಲಿ ಕನ್ನಡ ಬಾವುಟದ ಅಲೆಗಳು ಕಂಗೊಳಿಸುವ ಬದಲು ಪಕ್ಷದ ಧ್ವಜಗಳು ಹಾರಾಡತೊಡಗುತ್ತವೆ.

ರಾಜಕಾರಣದ ಸಂಪರ್ಕಗಳನ್ನು ಚುನಾವಣೆಗೆ ಬಳಸಿಕೊಳ್ಳುವ ಉಮೇದುವಾರರನ್ನು ಪರಿಷತ್ತಿನ ಸದಸ್ಯರು ದೂರವಿಡಬೇಕು. ರಾಜಕಾರಣಿಗಳ ವೇಷದ ಸಾಹಿತ್ಯ ಪರಿಚಾರಕರ ವಿರುದ್ಧ ಜಾಗೃತಿ ಮೂಡಿಸುವ ಕೆಲಸವನ್ನು ಸಾಹಿತಿಗಳು ಮಾಡಬೇಕು. 1943ರಲ್ಲಿ ಶಿವಮೊಗ್ಗದಲ್ಲಿ ನಡೆದ 27ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ– ‘ಸಾಹಿತ್ಯ ಯಾವ ಪಕ್ಷಕ್ಕೂ ಸೇರಲಾರದು. ಸಾಹಿತ್ಯಕ್ಕೆ ಪಕ್ಷಪಾತವು ಪಕ್ಷಪಾತವಿದ್ದಂತೆ. Executive-ದಿಂದ Judiciary ಬೇರೆ ಇರುವಂತೆ ಸಾಹಿತ್ಯವು ಉಪಜೀವನದ ಎಲ್ಲ ಪಕ್ಷಗಳಿಂದ ತಟಸ್ಥವಾಗಿ ರಸ ಸಾಕ್ಷಿಯಾಗಿ ಕಾರ್ಯ ಮಾಡಬೇಕು. ಅದು ಯಾರ ಆಳೂ ಆಗಲಾರದು; ಅದನ್ನು ಮಾಡಬಾರದು. ಹಾಗೆ ಮಾಡುವುದು ಜನಜೀವನಕ್ಕೆ ಹಿತವಲ್ಲ’ ಎಂದು ದ.ರಾ. ಬೇಂದ್ರೆ ಹೇಳಿದ್ದರು. ಆ ಮಾತನ್ನು ಚುನಾವಣೆ ಸಂದರ್ಭದಲ್ಲಿ ಪರಿಷತ್ತಿನ ಸದಸ್ಯರು ನೆನಪಿನಲ್ಲಿಡಬೇಕಾಗಿದೆ.

‘ರಕ್ಷಿಸು ಕರ್ನಾಟಕ ದೇವಿ’ ಎನ್ನುವ ಶಾಂತಕವಿ ಅವರ ಪ್ರಾರ್ಥನೆಯನ್ನು ‘ಕನ್ನಡ ಸಾಹಿತ್ಯ ಪರಿಷತ್ತನ್ನು ರಕ್ಷಿಸು ಕರ್ನಾಟಕ ದೇವಿ’ ಎಂದೀಗ ಬದಲಿಸಿಕೊಳ್ಳಬೇಕಾಗಿದೆ.

ಚುರುಮುರಿ



ಬಿ(ಟ್ಟಿ)ಟ್ ಕಾಯಿನ್!

• ಬಿ.ಎನ್.ಮಲ್ಲೇಶ್

‘ರೀ... ಈ ಬಿಟ್ ಕಾಯಿನ್ ಅಂದ್ರೆ ಏನು?’ ಮಡದಿ ಪಮ್ಮಿ ಪ್ರಶ್ನೆಗೆ ತಬ್ಬಿಬ್ಬಾದ ತೆಪರೇಸಿ ‘ಅದೂ... ಅದೊಂಥರ ದುಡ್ಡು, ಯಾಕೆ?’ ಎಂದ ತಡವರಿಸುತ್ತ.

‘ಅಲ್ಲರೀ ಟಿ.ವಿ. ರಿಪೋರ್ಟ್ರಾಗಿ ನಿಮಗೇ ಗೊತ್ತಿಲ್ಲ ಅಂದ್ರೆ ಹೆಂಗೆ?’

‘ಗೊತ್ತಿಲ್ಲ ಅಂತಲ್ಲ, ನಿಂಗೆ ಹೆಂಗೆ ಹೇಳಬೇಕು ಅಂತ ಗೊತ್ತಾಗ್ತಿಲ್ಲ. ಅದೊಂಥರಾ ಆನ್‌ಲೈನ್ ಕ್ಯಾಶು...’

‘ಕ್ಯಾಶು ಅಂದ್ರೆ ಅದ್ರಲ್ಲಿ ರೂಪಾಯಿ ಇರಲ್ವ? ಬರೀ ಕಾಯಿನ್ ಇರ್ತಾವಾ?’

‘ಥೋ... ಅದು ಕಾಯಿನ್ ಹೆಸರಲ್ಲಿರೋ ದುಡ್ಡು ಕಣೆ...’

‘ಹೌದಾ? ವಿಚಿತ್ರ. ಸಾವಿರಾರು ಕೋಟಿ ರೂಪಾಯಿ ಹಗರಣ ಅಂತೀರಿ, ಯಾರಾದ್ರೂ ಕಾಯಿನ್‌ನಲ್ಲಿ ವ್ಯವಹಾರ ಮಾಡ್ತಾರಾ? ಈಗಿನ ಕಾಲದಲ್ಲಿ ಭಿಕ್ಷುಕರೂ ಕಾಯಿನ್ ಮುಟ್ಟಲ್ಲಪ್ಪ’.

‘ಥೋತ್ತೇರಿ, ಇದು ಆ ಕಾಯಿನ್ ಅಲ್ಲ. ಇದೊಂಥರ ಕಣ್ಣಿಗೆ ಕಾಣದ ದುಡ್ಡು. ಲೆಕ್ಕಿಲ್ಲ ಬುಕ್ಕಿಲ್ಲ, ಯಾರ್ಯಾರು ವ್ಯವಹಾರ ಮಾಡ್ತಾರೆ ಯಾರಿಗೂ ಗೊತ್ತಾಗಲ್ಲ’.

‘ಹೌದಾ? ಅಂದ್ರೇ ಆ ದುಡ್ಡಿಂದ ತರಕಾರಿ, ಕೊತ್ತಮರಿ ಸೊಪ್ಪು ತಗಳ್ಳಾಕೆ ಆಗಲ್ವ?’

‘ಏನೋಪ್ಪ, ಆ ದುಡ್ಡನ್ನು ನಾನೂ ನೋಡಿಲ್ಲ. ರಾಜಕಾರಣಿಗಳ ಅಕೌಂಟಲ್ಲಿದೆ-ಯಂತೆ...’

‘ಅಲ್ಲರೀ, ಈ ಬಿಟ್ ಕಾಯಿನ್ನನ್ನ ನಕಲಿ ಮಾಡಾಕೆ ಬರಲ್ವ?’

‘ನೀನೊಳ್ಳೆ... ಅದರ ಒರಿಜಿನಲ್ಲೇ ಸಿಕ್ಕಿಲ್ಲ, ನೀನು ನಕಲಿ ಮಾಡಾಕೆ ಹೊಂಟೆ...’ ತೆಪರೇಸಿ ನಕ್ಕ.

‘ನಾನೆಲ್ಲೋ ಈ ಬಿಟ್ ಕಾಯಿನ್ ಅಂದ್ರೆ ಬಿಟ್ಟಿ ಕಾಯಿನ್ನೋ, ಯಾರೂ ಮುಟ್ಟದ ಹಾಗೇ ಬಿಟ್ಟ ಕಾಯಿನ್ನೋ ಅನ್ಕೊಂಡಿದ್ದೆ...’

‘ಅದೂ ಒಂಥರಾ ಕರೆಕ್ಟೇ. ನೀನು ನನ್ನ ಶರ್ಟು ಪ್ಯಾಂಟಲ್ಲಿರೋ ರೂಪಾಯಿ ಎಲ್ಲ ಎತ್ಕಂಡು ಬರೀ ಕಾಯಿನ್ ಬಿಟ್ಟರ್ತೀಯಲ್ಲ, ಹಂಗೆ...’ ತೆಪರೇಸಿ ಮಾತಿಗೆ ಪಮ್ಮಿಗೂ ನಗು ಬಂತು.

ಸಂಗತ

ಗೋವು: ಎಲ್ಲಿದೆ ಮೇವಿನ ತಾವು?

ಪಶುಪಾಲನೆಗೆ ಉತ್ತೇಜನಕಾರಿ ದೃಢ ಹೆಜ್ಜೆಗಳನ್ನಿಡುವುದು ಸದ್ಯದ ಅನಿವಾರ್ಯ

• ಡಾ. ಮುರಳೀಧರ ಕಿರಣಕೆರೆ

ಈ ಬಾರಿಯ ದೀಪಾವಳಿ ಹಬ್ಬದಲ್ಲಿ ಹೆಚ್ಚು ಸದ್ದು ಮಾಡಿದ್ದು ‘ಗೋಪೂಜೆ’. ನಾಡಿನೆಲ್ಲೆಡೆ ಗೋಮಾತೆಯನ್ನು ಪೂಜಿಸಿ ಅದರ ಉಪಯುಕ್ತತೆ, ಸಾಂಸ್ಕೃತಿಕ ಮಹತ್ವವನ್ನು ಸಾರಲಾಗಿದೆ. ದೇಸಿ ಹಸುಗಳ ಕ್ಷೀರ, ಕ್ಷೀರೋತ್ಪನ್ನಗಳು, ಗೋಮಯ, ಗೋಮೂತ್ರಗಳಿಗಿರುವ ಆರೋಗ್ಯಕಾರಿ, ಔಷಧೀಯ ಗುಣಗಳ ಬಗ್ಗೆ ಹಲವು ಅಧ್ಯಯನಗಳು ಬೆಳಕು ಚೆಲ್ಲಿವೆ. ನಮ್ಮ ಆಕಳು ತಳಿಗಳ ಸಂರಕ್ಷಣೆಯ ಪ್ರಾಮುಖ್ಯತೆಯ ಅರಿವಿದ್ದರೂ ಅಗತ್ಯಕ್ಕೆ ತಕ್ಕಷ್ಟು ಮೇವು ಒದಗಿಸುವಲ್ಲಿ ಸೋಲುವ ಕಾರಣ ರೈತರು ಹತಾಶೆಯಿಂದ ಕೈಚೆಲ್ಲುತ್ತಿದ್ದಾರೆ.

ಮಲೆನಾಡು, ಕರಾವಳಿ ಭಾಗಗಳಲ್ಲಿ ಮುಂಜಾನೆ ಹೊತ್ತಿನಲ್ಲಿ ಸಾಗುವಾಗ ಕರುಣಾಜನಕ ನೋಟಗಳು ಕಾಣಸಿಗುತ್ತವೆ. ಹೆಗಲಲ್ಲಿ ಉದ್ದನೆಯ ಮರದ ತುಂಡು ಜೋತಾಡಿಸಿಕೊಂಡು ಮೇಯಲು ಹೋಗುತ್ತಿರುವ ನಾಟಿ ಹಸುಗಳು, ಕೆಲವು ಆಕಳುಗಳ ಕತ್ತಿನಲ್ಲಿ ಕವಲಾಗಿರುವ ಮರದ ಕೋಲು, ದೂರದಿಂದ ನೋಡಿದರೆ ಏನಪ್ಪಾ ಇಷ್ಟು ಉದ್ದದ ಕೋಡುಗಳು ಎನಿಸುವಷ್ಟು! ಮತ್ತೆ ಕೆಲವಕ್ಕೆ ಮುಂಗಾಲಿಗೂ ಕುತ್ತಿಗೆಗೂ ಹಗ್ಗದಿಂದ ಬಿಗಿದು ತಲೆ ತಗ್ಗಿಸಿ ನಡೆಯುವ ವ್ಯವಸ್ಥೆ. ದಪ್ಪ ಕುಂಟೆಯ ಒಂದು ತುದಿಯನ್ನು ಕತ್ತಿಗೆ ಕಟ್ಟಿಸಿಕೊಂಡು ಅದನ್ನೆಳೆಯುತ್ತಾ ಕಷ್ಟದಿಂದ ಹೆಜ್ಜೆ ಹಾಕುವ ದನಗಳೂ ಕಂಡಾವು. ಇಂಥ ದೃಶ್ಯವನ್ನು ನೋಡುತ್ತಿದ್ದರೆ ಒಮ್ಮೆಲೆ ಎದೆ ಭಾರವಾಗಿ ‘ಛೇ! ಮೂಕ ಪಶುಗಳ ಮೇಲೆ ಇದೆಂತಹ ಕ್ರೌರ್ಯ’ ಎನಿಸದಿರದು!

ಹಾಗಂತ ರೈತರು ತಮ್ಮ ಸಾಕುಪ್ರಾಣಿಗಳನ್ನು ಈ ಪರಿಯಾಗಿ ನಿಯಂತ್ರಿಸುವುದು ಹಿಂಸೆ ನೀಡಿ ವಿಕೃತಾನಂದ ಪಡೆಯುವ ಉದ್ದೇಶಕ್ಕಲ್ಲ. ತುಡು ದನಗಳೆಂಬ ಹಣೆಪಟ್ಟಿಯ ಮಲೆನಾಡು ಗಿಡ್ಡಗಳು ಕಂಡ ಕಂಡವರ ತೋಟ, ಗದ್ದೆಗಳಿಗೆ ನುಗ್ಗದಿರಲೆಂದು ಕುತ್ತಿಗೆಗೆ ಕೊಕ್ಕೆ, ಕುಂಟೆ ಇಲ್ಲವೆ ಕುಂಟುಗಾಲು ಮಾಡಿ ಮೇಯಲಟ್ಟುವ ಪದ್ಧತಿಯಿದು.

ದೇಸಿ ಜಾನುವಾರುಗಳು ಅದರಲ್ಲೂ ಮಲೆನಾಡು ಗಿಡ್ಡ ತಳಿಯ ದನಕರುಗಳು ಎಂಥದ್ದೇ ಬೇಲಿಯನ್ನು ಸುಲಭವಾಗಿ ಹಾರಬಲ್ಲವು. ಹೊಟ್ಟೆಪಾಡಿಗಾಗಿ ಇಂಥದ್ದೊಂದು ಕೌಶಲ ಇವುಗಳಿಗೆ ಕರಗತ. ಹೀಗೆ ಕತ್ತಿನಲ್ಲಿ ಅಡಚಣೆಯಿದ್ದಾಗ ಹೈಜಂಪ್‌ಗಾಗಿ ಶರೀರವನ್ನು ಪೊಸಿಷನ್‌ಗೆ ತಂದುಕೊಳ್ಳಲು ಆಗದ ಕಾರಣ ಬೇಲಿ ಹಾರುವುದು ಇಲ್ಲವೇ ಕಂಡಿ ಮಾಡಿಕೊಂಡು ಒಳನುಸುಳಲು ಸಾಧ್ಯವಾಗದು.

ಬೆಳೆ, ಮರ, ಗಿಡಗಳು ತುಡು ದನಗಳ ಪಾಲಾದಾಗ ಜಮೀನು, ಜಾನುವಾರು ಮಾಲೀಕರ ಮಧ್ಯೆ ಜಗಳ ಸಾಮಾನ್ಯ. ಒಮ್ಮೊಮ್ಮೆ ಅತಿರೇಕಕ್ಕೆ ಹೋಗಿ ಹೊಡೆದಾಟ, ಬಡಿದಾಟ, ದನಕರುಗಳ ಕೈಕಾಲು ಕಡಿಯುವ, ಅವುಗಳ ಪ್ರಾಣ ತೆಗೆಯುವ ಘಟನೆಗಳೂ ನಡೆಯುವುದುಂಟು. ಇಂತಹದ್ದಕ್ಕೆಲ್ಲಾ ಅವಕಾಶ ಆಗದಿರಲೆಂಬ ಕಾರಣಕ್ಕೆ ಹಸುಗಳನ್ನು ಹೀಗೆ ನಿರ್ಬಂಧಿಸುವುದು ಕೃಷಿಕರ ದೃಷ್ಟಿಯಲ್ಲಿ ಅನಿವಾರ್ಯ.

ಗೋವುಗಳ ಈ ಸಂಕಷ್ಟದ ಬದುಕಿಗೆ ಕಾರಣ ಗೋಮಾಳಗಳು ಕಣ್ಮರೆಯಾಗಿರುವುದು. ಮೇವಿಗಾಗಿಯೇ ನಿರ್ದಿಷ್ಟ ಪ್ರದೇಶವನ್ನು ಕಾಯ್ದಿರಿಸುವ ಕ್ರಮ ಲಾಗಾಯ್ತಿನಿಂದಲೂ ಬಂದಿದ್ದು. ಮಾನವನ ಹಸ್ತಕ್ಷೇಪವಿಲ್ಲದೆ ತಮಗಾಗಿ ಮೀಸಲಿಟ್ಟ ಜಾಗದಲ್ಲಿನ ಹುಲ್ಲು, ಸೊಪ್ಪುಸದೆಗಳನ್ನು ದಿನವಿಡೀ ಮೇಯ್ದು ಅವುಗಳ ಆರೋಗ್ಯ, ಹಾಲಿನ ಇಳುವರಿ ಜೊತೆಗೆ ಗುಣಮಟ್ಟವೂ ಚೆನ್ನಾಗಿರುತ್ತಿತ್ತು. ಜನಸಂಖ್ಯೆಯ ಹಠಾತ್ ಹೆಚ್ಚಳ, ಮಾನವನ ಅತಿಯಾಸೆ, ದುರಾಸೆಯಿಂದಾಗಿ ಈ ಕಾಯ್ದಿಟ್ಟ ಜಾಗದ ಕಬಳಿಕೆಯಾಗಿ ಪರಿಸ್ಥಿತಿ ಹದಗೆಟ್ಟಿದೆ.

ಹುಲ್ಲುಗಾವಲಿಗೆ ಮೀಸಲಾದ ಜಾಗವು ಮನೆ, ಗದ್ದೆ, ತೋಟ, ದೇವಸ್ಥಾನ, ಸ್ಮಶಾನ, ರೆಸಾರ್ಟ್, ಗಣಿಗಾರಿಕೆ ಎಂದೆಲ್ಲಾ ದೊಡ್ಡ ಪ್ರಮಾಣದಲ್ಲಿ ಒತ್ತುವರಿಯಾಗಿದೆ. ಹಾಗಾಗಿಯೇ ಹಸು, ಕರುಗಳಿಗೆ ಮೇಯಲು ಜಾಗವಿಲ್ಲ. ಈಗೇನಿದ್ದರೂ ಗೋಮಾಳಗಳು ಕಂದಾಯ ಇಲಾಖೆಯ ದಾಖಲೆಗಳಲ್ಲಷ್ಟೇ ಕಾಣಸಿಗುವುದು! ಪ್ರತಿಯೊಂದು ಗ್ರಾಮದಲ್ಲೂ ಪ್ರತೀ ನೂರು ಜಾನುವಾರುಗಳಿಗೆ 12 ಹೆಕ್ಟೇರ್ ಜಾಗವನ್ನು ಮೇವಿಗಾಗಿಯೇ ಮೀಸಲಿರಿಸಬೇಕು ಎನ್ನುತ್ತದೆ ನಿಯಮ. ಈ ಕಾನೂನೂ ಕಡತದ ಒಳಗಷ್ಟೇ ಉಳಿದಿದೆ.



ಮೇವಿನ ಕೊರತೆ, ಗಗನಕ್ಕೇರುತ್ತಿರುವ ಪಶು ಆಹಾರದ (ಹಿಂಡಿ) ಬೆಲೆಯಿಂದಾಗಿ ಜಾನುವಾರು ಸಾಕಣೆ ಈಗ ತೀರಾ ವೆಚ್ಚದ ಬಾಬತ್ತು. ಜರ್ಸಿ, ಎಚ್.ಎಫ್. ಮಿಶ್ರತಳಿಗಳಂತೆ ದೇಸಿ ಹಸುಗಳನ್ನು ಕಟ್ಟಿಹಾಕಿ ಸಾಕಲಾಗದು. ಗಾಳಿ, ಮಳೆ, ಬಿಸಿಲಿಗೆ ಮೈಯೊಡ್ಡಿ ಹುಲ್ಲು, ಕರಡ, ಕಸಕಡ್ಡಿಗಳನ್ನು ತಿಂದು ಕೊಟ್ಟಿಗೆಗೆ ಮರಳುವುದು ಇವುಗಳ ಜೀವನಕ್ರಮ. ಹುಲ್ಲುಗಾವಲುಗಳ ಕಣ್ಮರೆಯೊಂದಿಗೆ ಈ ಪದ್ಧತಿಯಲ್ಲಿ ವ್ಯತ್ಯಯವಾಗಿದೆ. ಮೇವಿನ ಅಭಾವದ ಜೊತೆಗೆ ಚಾಕರಿ ಮಾಡುವವರ ಕೊರತೆ, ಬದಲಾದ ಮನಃಸ್ಥಿತಿಯ ಕಾರಣ ದೇಸಿ ಜಾನುವಾರುಗಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದೆ.

ನಾಟಿ ತಳಿಗಳ ಮಹತ್ವ, ಸಂರಕ್ಷಣೆಯ ಬಗ್ಗೆ ಎಷ್ಟೇ ಮಾತನಾಡಿದರೂ ಅರಿವು ಮೂಡಿಸಿದರೂ ಮೂಲಭೂತ ಅಗತ್ಯವಾದ ಹುಲ್ಲು ಒದಗಿಸಲಾಗದಿದ್ದರೆ ಉಳಿವಾದರೂ ಹೇಗೆ ಸಾಧ್ಯ? ಒತ್ತುವರಿಯಾದ ಗೋಮಾಳಗಳನ್ನು ಸಾಧ್ಯವಿದ್ದಲ್ಲೆಲ್ಲಾ ತೆರವುಗೊಳಿಸಿ ಕಟ್ಟುನಿಟ್ಟಾಗಿ ಮೇವಿಗಾಗಿ ಮೀಸಲಿಟ್ಟರೆ ಮಾತ್ರ ಕಷ್ಟಸಹಿಷ್ಣುಗಳಾದ ನಮ್ಮ ದೇಸಿ ಆಕಳುಗಳು ಉಳಿದಾವು. ಈ ಬಗ್ಗೆ ಹೆಚ್ಚು ಚರ್ಚೆಯಾಗದಿರುವುದು ನಿಜಕ್ಕೂ ದುರದೃಷ್ಟಕರ.

ಜನರಿಗಾಗಿ ಅನ್ನಭಾಗ್ಯ ಯೋಜನೆಯಂತೆ ಪಶು ಆಹಾರವನ್ನು ರಿಯಾಯಿತಿ ದರದಲ್ಲಿ ಪಡಿತರ ವ್ಯವಸ್ಥೆಯ ಮೂಲಕ ನೀಡುವುದು ಪಶುಪಾಲನೆಗೆ ಉತ್ತೇಜನಕಾರಿ. ಗೋಸಂಪತ್ತಿನ ರಕ್ಷಣೆಗಾಗಿ ಈ ದಿಸೆಯಲ್ಲಿ ದೃಢ ಹೆಜ್ಜೆಗಳನ್ನಿಡುವುದು ಸದ್ಯದ ಅನಿವಾರ್ಯವೂ ಹೌದು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಬಿಸಿಯೂಟ ಸಿಬ್ಬಂದಿ: ಗೌರವಧನ ಏಕೆ?

ಶಾಲೆಗಳಲ್ಲಿ ಬಿಸಿಯೂಟ ತಯಾರಿಸುವ ನೌಕರರ ಪ್ರತಿಭಟನೆ ಒಂದಲ್ಲ ಒಂದು ರಾಜ್ಯದಲ್ಲಿ ನಡೆಯುತ್ತಲೇ ಇರುತ್ತದೆ. ಮಧ್ಯಾಹ್ನದ ಬಿಸಿಯೂಟ ತಯಾರಕರನ್ನು ‘ಕಾರ್ಯಕರ್ತೆಯರು’ ಎಂದು ಕರೆಯಲಾಗುತ್ತಿದೆಯೇ ಹೊರತು ‘ನೌಕರರು’ ಎಂದಲ್ಲ. ಹೀಗಾಗಿ ಅವರಿಗೆ ಕನಿಷ್ಠ ವೇತನದ ಬದಲು ಗೌರವಧನವನ್ನು ಮಾತ್ರ ನೀಡಲಾಗುತ್ತಿದೆ. ‘ಪ್ರತಿದಿನ 7–8 ಗಂಟೆ ಕೆಲಸ ಮಾಡಿದರೂ ನಮ್ಮ ಕೆಲಸವನ್ನು ಅರೆಕಾಲಿಕ ಎಂದು ಪರಿಗಣಿಸಲಾಗುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ ಬಿಸಿಯೂಟದ ಕಾರ್ಯಕರ್ತೆಯರು.

ಬಿಸಿಯೂಟ ನೌಕರರು ಅತಿ ಕಡಿಮೆ ವೇತನದಲ್ಲಿ ಜೀವನವನ್ನು ನಡೆಸುತ್ತಿದ್ದಾರೆ. ಕೊರೊನಾ ಹಾವಳಿಯಲ್ಲಿ ಸಾವನ್ನಪ್ಪಿದ ಸಿಬ್ಬಂದಿಯ ಕುಟುಂಬಗಳಿಗೆ ಯಾವುದೇ ತರಹದ ಪರಿಹಾರ ಸಿಕ್ಕಿಲ್ಲ. ಆದರೆ ಬೇರೆ ವರ್ಗದ ನೌಕರರು ಕೆಲಸ ಮಾಡದೇ ಸಂಬಳವನ್ನು ಪಡೆದಿದ್ದಾರೆ. ಅಡುಗೆ ಸಿಬ್ಬಂದಿ ಶಾಲೆಗೆ ಹೋಗಿ ಶಾಲೆಯನ್ನು ಶುಚಿಗೊಳಿಸಿ ಮೈದಾನದಲ್ಲಿರುವ ಕಸಕಡ್ಡಿಗಳನ್ನು ಶುಚಿಗೊಳಿಸಿ ಸೇವೆ ಸಲ್ಲಿಸಿದ್ದಾರೆ. ಅಷ್ಟಾದರೂ ಕೊಡುತ್ತಿರುವ ಕಡಿಮೆ ಸಂಬಳವನ್ನೂ ಸರಿಯಾದ ಸಮಯಕ್ಕೆ ಕೊಡದೆ ಮೂರ್ನಾಲ್ಕು ತಿಂಗಳಿಗೆ ಒಮ್ಮೆ ನೀಡಲಾಗುತ್ತಿದೆ.

ಇದಕ್ಕೆಲ್ಲ ಪ್ರತಿಭಟನೆ ಪರಿಹಾರವಲ್ಲ. ಶಿಕ್ಷಣ ಇಲಾಖೆಯ ಒಂದು ಅಂಗವಾಗಿರುವ ಬಿಸಿಯೂಟ ನೌಕರರ ಕಷ್ಟಗಳಿಗೆ ಸರ್ಕಾರ ಇನ್ನಾದರೂ ಸ್ಪಂದಿಸಲಿ. ಅವರಿಗೆ ಸೂಕ್ತ ವೇತನ ನೀಡಲು ಕ್ರಮ ಕೈಗೊಳ್ಳಲಿ.

ಭೂಮಿಕಾ ದಾಸರಡ್ಡಿ ಬಿದರಿ, ಮುಧೋಳ

ಸೈಕಲ್ ರ್‍ಯಾಲಿ: ಸೂಕ್ತ ಜನಜಾಗೃತಿ ಮೂಡಿಸಿ

ಸೈಕಲ್ ಬಳಕೆಗೆ ಉತ್ತೇಜನ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ರೋಟರಿ ಸಂಸ್ಥೆಯು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಸೈಕಲ್ ರ್‍ಯಾಲಿಯ ಆಶಯ (ಪ್ರ.ವಾ., ನ. 11) ಮೆಚ್ಚುವಂಥದ್ದು. ಆದರೆ, ಸೈಕಲ್‌ನಲ್ಲಿ ಸಂಚರಿಸಿ ಮನೆ ತಲುಪಲು ನಮ್ಮ ನಗರದ ರಸ್ತೆಗಳು ಅಷ್ಟು ಸುರಕ್ಷಿತವೇ? ಮಿಗಿಲಾಗಿ, ದೊಡ್ಡದೊಡ್ಡ ನಗರಗಳಲ್ಲಿ ಪ್ರತ್ಯೇಕ ಪಥವಿರದ ಸೈಕಲ್ ಸಂಚಾರ ಅಪಾಯಕಾರಿ ಎಂಬ ಜಾಗೃತಿ ಕೂಡ ಮುಖ್ಯವಲ್ಲವೇ?

ಇಡೀ ನಗರವು ವಾಹನಗಳು ಉಗುಳುವ ಹೊಗೆಯಿಂದ ತುಂಬಿಕೊಂಡು ಅನೇಕ ರೋಗಗಳ ಹುಟ್ಟಿಗೆ ಕಾರಣವಾಗಿದ್ದು, ನಗರಗಳ ವಾತಾವರಣ ವಾಸಕ್ಕೆ ಯೋಗ್ಯವಲ್ಲದಷ್ಟು ಕಲುಷಿತವಾಗಿದೆ. ಆದ್ದರಿಂದ, ಹೊಗೆ ಉಗುಳುವ ವಾಹನಗಳಿಗೆ ಪರ್ಯಾಯವಾಗಿ ಹೆಚ್ಚು ಹೆಚ್ಚು ಜನರು ಸೈಕಲ್ ಬಳಕೆ ಮಾಡುವುದಕ್ಕೆ ಉತ್ತೇಜನ ನೀಡಬೇಕಾದರೆ ಮೊದಲು ಮೂಲ ಸೌಕರ್ಯಗಳ ಅಭಿವೃದ್ಧಿ-ಯಾಗಬೇಕು. ಇದಕ್ಕೆ ಜನಜಾಗೃತಿಗಿಂತ ಆಡಳಿತ ವರ್ಗದ ಜವಾಬ್ದಾರಿ ಹೆಚ್ಚಾಗಬೇಕಷ್ಟೆ. ಕನಿಷ್ಠ ಐದಾರು ಕಿಲೊಮೀಟರ್ ಸಮೀಪವಿರುವ ಕೆಲಸದ ಸ್ಥಳ ತಲುಪಲು ಸೈಕಲ್ ಬಳಕೆ ಮಾಡುವ ಚಿಂತನೆ ಜನರಲ್ಲಿದೆ. ಆದರೆ, ನಗರದ ರಸ್ತೆಗಳ ಈಗಿನ ದುಃಸ್ಥಿತಿಯ ಅರಿವು ಆಡಳಿತವರ್ಗದ ಹೃದಯ ತಟ್ಟದಿದ್ದರೆ ಹೇಗೆ? ಪ್ರತ್ಯೇಕ ಸೈಕಲ್ ಪಥ ನಿರ್ಮಾಣ ಮಾಡುವ ಬಗ್ಗೆ ಕೆಲವು ಜನಪ್ರತಿನಿಧಿಗಳ ಹೇಳಿಕೆಗಳು ಪ್ರಚಾರಕ್ಕಾಗಿಯೇ ವಿನಾ ಇದುವರೆಗೂ ಕಾರ್ಯಗತವಾಗಿಲ್ಲ. ವಿಐಪಿಗಳಿಗೆ ಸೇರಿದ ವಾಹನ ಸಂಚಾರಕ್ಕೆ ಮೂಲ ಸೌಕರ್ಯ ಒದಗಿಸಲು ಇರುವಷ್ಟೇ ಕಾಳಜಿಯು ಬಡವರು, ಪರಿಸರಾಸಕ್ತರು, ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವವರು ಸೈಕಲ್ ಬಳಸುವಾಗ ಸುರಕ್ಷತೆ ಕಲ್ಪಿಸುವುದಕ್ಕೂ ಇರಬೇಕು. ಸರ್ಕಾರದ ಆದ್ಯತೆ ಪಟ್ಟಿಯಲ್ಲಿ ಈ ಅಂಶ ಸೇರಬೇಕು.

ಡಾ. ಜಿ.ಬೈರೇಗೌಡ, ಬೆಂಗಳೂರು

ಆ ದಾಸರು, ಈ ‘ದಾಸ’ರು...

ಹಣವೇ ನಿನ್ನ ಗುಣವನೆಂತು ಬಣ್ಣಿಸಲಿ
ಎಂದು ಬೆರಗಾಗಿ ನುಡಿದರು
ವೈರಾಗ್ಯಮತಿಗಳಾದ ದಾಸರುಗಳು...
ಹಣವೇ ನೀನೆಲ್ಲಿದ್ದರೂ ನಾ ನಿನ್ನ
ಬರಸೆಳೆವೆನೆನ್ನುತಿಹರು ಕಲಿಯುಗದ
ಐಷಾರಾಮಿದಾಸರಾದ ಹ್ಯಾಕರುಗಳು!

ಜೆ.ಬಿ.ಮಂಜುನಾಥ, ಪಾಂಡವಪುರ

ಲಿಖಿತ ಪರೀಕ್ಷೆಯ ಸಾಧನೆಗೆ ಇಲ್ಲದ ಮಾನ್ಯತೆ!

ಮೈಸೂರಿನ ಪ್ರತಿಷ್ಠಿತ ಆಡಳಿತ ತರಬೇತಿ ಸಂಸ್ಥೆಯಲ್ಲಿ ಇತ್ತೀಚೆಗೆ ಕೆಲವು ಗುತ್ತಿಗೆ ಆಧಾರದ ಹುದ್ದೆಗಳ ಭರ್ತಿಗಾಗಿ ಲಿಖಿತ ಪರೀಕ್ಷೆ, ಗುಂಪು ಚರ್ಚೆ ಹಾಗೂ ಸಂದರ್ಶನ ನಡೆದಿತ್ತು. ಅವುಗಳ ಫಲಿತಾಂಶ ಕೆಲ ದಿನಗಳ ಹಿಂದೆ ಪ್ರಕಟವಾಗಿದೆ. ವಿಚಿತ್ರವೆಂದರೆ, ಸಂಸ್ಥೆಯಲ್ಲಿ ಈ ಹಿಂದೆ ಉದ್ಯೋಗದಲ್ಲಿದ್ದ ಕೆಲವು ಉದ್ಯೋಗಿಗಳನ್ನು ಅದೇ ಹುದ್ದೆಯಲ್ಲಿ ಮುಂದುವರಿಸಲು ಅಧಿಕಾರಿಗಳು ಕಸರತ್ತು ನಡೆಸಿದಂತಿದೆ. ಏಕೆಂದರೆ, ಲಿಖಿತ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ಗುಂಪು ಚರ್ಚೆ ಹಾಗೂ ಸಂದರ್ಶನದಲ್ಲಿ ಅತಿ ಕಡಿಮೆ ಅಂಕ ನೀಡಲಾಗಿದೆ. ಲಿಖಿತ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ ಅಭ್ಯರ್ಥಿಗಳಿಗೆ ಸಂದರ್ಶನದಲ್ಲಿ ಹೆಚ್ಚು ಅಂಕ ನೀಡಿ, ಅವರನ್ನು ಹಿಂದಿನ ಹುದ್ದೆಯಲ್ಲೇ ಮುಂದುವರಿಸುವಂತೆ ಮಾಡಲಾಗಿದೆ. ಉದಾಹರಣೆಗೆ, ಲಿಖಿತ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಯ ಬದಲು, ಅವರಿಗಿಂತ 22 ಅಂಕ ಕಡಿಮೆ ಪಡೆದ ಅಭ್ಯರ್ಥಿಗೆ ಉದ್ಯೋಗ ನೀಡುವ ಮಹಾನ್ ಕೆಲಸವನ್ನು ಅಧಿಕಾರಿಗಳು ಮಾಡಿದ್ದಾರೆ. ಹಿರಿಯ ಅಧಿಕಾರಿಗಳು ಈ ಸಂಬಂಧ ಕೂಡಲೇ ಕ್ರಮ ಕೈಗೊಂಡು, ಲೋಪಗಳನ್ನು ಸರಿಪಡಿಸಬೇಕು.

ಸುರಭಿ ಭಟ್, ಮೈಸೂರು

ಅಡಿಕೆ ನಿಷೇಧ: ಗುಲ್ಲೇಳುವುದೇಕೆ?

ಅಡಿಕೆಯಿಂದ ಕ್ಯಾನ್ಸರ್‌ನಂಥ ರೋಗಗಳು ಬರುತ್ತವೆ, ಹೀಗಾಗಿ ಅಡಿಕೆಯನ್ನು ನಿಷೇಧಿಸಬೇಕು ಎಂದು ಒತ್ತಾಯಿಸಿ ಜಾರ್ಖಂಡ್‌ನ ಬಿಜೆಪಿ ಸಂಸದರೊಬ್ಬರು ಪ್ರಧಾನಿಗೆ ಪತ್ರ ಬರೆದಿರುವುದಾಗಿ ವರದಿಯಾಗಿದೆ. ಅನಾದಿ ಕಾಲದಿಂದಲೂ ಹಳ್ಳಿಯ ಜನ ಪರಂಪರಾನುಗತವಾಗಿ ಅಡಿಕೆ ತಿನ್ನುತ್ತಲೇ ಬಂದಿದ್ದಾರೆ. ಅಡಿಕೆ ಬರಿಯ ತಿನ್ನುವ ವಸ್ತುವೊಂದೇ ಅಲ್ಲ, ಅದು ನಮ್ಮ ಸಂಸ್ಕೃತಿಯ ಪ್ರತೀಕ. ಮನೆಗೆ ನೆಂಟರಿಷ್ಟರು ಬಂದಾಗ ಊಟವಾದ ಬಳಿಕ ತಾಂಬೂಲವನ್ನು ಒಂದು ತಟ್ಟೆಗೆ ಹಾಕಿಕೊಡುವುದು ಹಿಂದಿನಿಂದಲೂ ಬಂದಿರುವ ಪದ್ಧತಿ.

ಅಡಿಕೆ ತಿಂದವರಿಗೇನಾದರೂ ಕ್ಯಾನ್ಸರ್ ಬರುವುದಾಗಿದ್ದಿದ್ದರೆ ಇಂದು ಯಾರೂ ಉಳಿದಿರುತ್ತಿರಲಿಲ್ಲ. ನೇರವಾಗಿ ಕ್ಯಾನ್ಸರ್ ತರಬಹುದಾದಂಥ ತಂಬಾಕು, ಸಿಗರೇಟುಗಳ ನಿಷೇಧದ ಬಗ್ಗೆ ಒಮ್ಮೆಯೂ ಸೊಲ್ಲೆತ್ತದೆ ಅಡಿಕೆ ನಿಷೇಧದ ಬಗ್ಗೆ ಆಗಾಗ್ಗೆ ಗುಲ್ಲೇಳುವುದರ ಹಿಂದಿನ ರಹಸ್ಯವಾದರೂ ಏನು ಎನ್ನುವುದು ಬಹಿರಂಗವಾಗಬೇಕಿದೆ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬಿಟ್‌ಕಾಯಿನ್ ಮಾಯಾಬಜಾರ್

• ಜಯಸಿಂಹ ಆರ್, ಅಮೃತ ಕಿರಣ್ ಬಿ.ಎಂ.

ಬಿಟ್‌ಕಾಯಿನ್ ಎಂದರೇನು?

ಬಿಟ್‌ಕಾಯಿನ್ ಎಂಬುದು ವರ್ಚ್ಯುವಲ್ ಸ್ವರೂಪದ, ಅಂದರೆ ಡಿಜಿಟಲ್ ರೂಪದಲ್ಲಿರುವ ನಗದು. ಇದು ವಿಕೇಂದ್ರೀಕೃತ ವ್ಯವಸ್ಥೆಯಾಗಿದ್ದು, ಯಾವುದೇ ಮಧ್ಯವರ್ತಿ ಬ್ಯಾಂಕ್‌ನ ನೆರವಿಲ್ಲದೇ ಬಿಟ್‌ಕಾಯಿನ್‌ಗಳ ಖರೀದಿ, ಮಾರಾಟ ಅಥವಾ ವಿನಿಮಯ ಮಾಡಿಕೊಳ್ಳಬಹುದು. ಇದು ಕ್ರಿಪ್ಟೋಗ್ರಫಿ ಎಂಬ ತಂತ್ರಜ್ಞಾನದ ಮೂಲಕ ಕಾರ್ಯ ನಿರ್ವಹಿಸುವ ಸುರಕ್ಷಿತ ವ್ಯವಸ್ಥೆ ಎಂದು ಹೇಳಲಾಗುತ್ತಿದೆ.

ಸಾವಿರಾರು ಕ್ರಿಪ್ಟೋಕರೆನ್ಸಿಗಳು ಮಾರುಕಟ್ಟೆಯಲ್ಲಿದ್ದರೂ, ಹಲವು ಕರೆನ್ಸಿಗಳು ಬಿಟ್‌ಕಾಯಿನ್‌ನ ಪಡಿಯಚ್ಚಿನಂತಿದ್ದರೂ, ಬಿಟ್‌ಕಾಯಿನ್ ಗಳಿಸಿರುವ ಜನಪ್ರಿಯತೆಯ ಮಟ್ಟವನ್ನು ತಲುಪಲು ಯಾವುದರಿಂದಲೂ ಸಾಧ್ಯವಾಗಿಲ್ಲ. ಇದಕ್ಕೆ ಬಿಟ್‌ಕಾಯಿನ್‌ನ ಅನನ್ಯ ತಂತ್ರಜ್ಞಾನ ಹಾಗೂ ಸುರಕ್ಷತಾ ವಿಧಾನಗಳು ಕಾರಣ.




ಪ್ರತೀ ಬಿಟ್‌ಕಾಯಿನ್ ವಹಿವಾಟು ಸಾರ್ವಜನಿಕ ಡೊಮೈನ್‌ನಲ್ಲಿ ಲಭ್ಯವಿರುವಂತೆ ಈ ತಂತ್ರಜ್ಞಾನ ರೂಪಿಸಲಾಗಿದೆ. ಏನು ವಾಹಿವಾಟು ನಡೆಯುತ್ತಿದೆ ಎಂಬ ಪ್ರತಿ ಅಂಶವೂ ದಾಖಲಾಗುತ್ತಾ ಹೋಗುತ್ತದೆ. ಪ್ರತಿಯೊಬ್ಬರಿಗೂ ಈ ಮಾಹಿತಿ ಸಿಗುವ ವ್ಯವಸ್ಥೆ ರೂಪಿಸಲಾಗಿದ್ದು, ಬಿಟ್‌ಕಾಯಿನ್‌ಗಳನ್ನು ನಕಲು ಮಾಡಲು ಸಾಧ್ಯವಿಲ್ಲ.

ಇದು ಚಿನ್ನದಷ್ಟೇ ಮೌಲ್ಯಯುತವಾದದ್ದು ಎಂಬುದು ತಜ್ಞರ ಅಭಿಮತ. 2009ರಲ್ಲಿ ಬಿಟ್‌ಕಾಯಿನ್ ಆರಂಭವಾದ ಬಳಿಕ ಇದರ ಮೌಲ್ಯ ಹೆಚ್ಚುತ್ತಾ ಹೋಯಿತು. ₹6,900ಕ್ಕೆ ಲಭ್ಯವಿದ್ದ ಒಂದು ಬಿಟ್‌ಕಾಯಿನ್ ಬೆಲೆ 2021ರ ಅಕ್ಟೋಬರ್ 26ರಂದು ಸುಮಾರು ₹46 ಲಕ್ಷಕ್ಕೆ ತಲುಪಿರುವುದು, ಬಿಟ್‌ಕಾಯಿನ್‌ನ ಜನಪ್ರಿಯತೆ ಹಾಗೂ ಮಾರುಕಟ್ಟೆಯ ಗಾತ್ರವನ್ನು ಸೂಚಿಸುತ್ತದೆ.

ಏನಿದು ಡಿಜಿಟಲ್ ವ್ಯಾಲೆಟ್?

ಪ್ರತಿಯೊಂದು ಬಿಟ್‌ಕಾಯಿನ್ ಒಂದು ಕಂಪ್ಯೂಟರ್ ಕಡತ (ಫೈಲ್) ಇದ್ದಂತೆ. ಬಿಟ್‌ಕಾಯಿನ್‌ಗಳನ್ನು ಕಂಪ್ಯೂಟರ್ ಅಥವಾ ಸ್ಮಾರ್ಟ್‌ಫೋನ್ ಆ್ಯಪ್‌ನಲ್ಲಿರುವ 'ಡಿಜಿಟಲ್ ವ್ಯಾಲೆಟ್'ನಲ್ಲಿ ಸಂಗ್ರಹಿಸಲಾಗಿರುತ್ತದೆ. ಜನರು ತಮ್ಮಲ್ಲಿರುವ ಬಿಟ್‌ಕಾಯಿನ್ ಅನ್ನು ಮತ್ತೊಬ್ಬರ ಡಿಜಿಟಲ್ ವ್ಯಾಲೆಟ್‌ಗೆ ರವಾನಿಸಬಹುದು. ಅವರು ಮತ್ತೊಬ್ಬರಿಗೆ ಅದನ್ನು ವರ್ಗಾಯಿಸಬಹುದು. ಈ ಎಲ್ಲ ಪ್ರಕ್ರಿಯೆಗಳೂ 'ಬ್ಲಾಕ್‌ಚೈನ್' ಎಂಬ ಡಿಜಿಟಲ್ ರೂಪದ ದಾಖಲಾತಿಯಲ್ಲಿ ಸಂಗ್ರಹವಾಗುತ್ತವೆ. ಬಿಟ್ ಕಾಯಿನ್ ಅನ್ನು ಯಾರು ಯಾರಿಗೆ ಮಾರಾಟ ಮಾಡಿದರು ಅಥವಾ ವರ್ಗಾಯಿಸಿದರು ಎಂಬ ಮಾಹಿತಿ ಬ್ಲಾಕ್‌ಚೈನ್‌ನಲ್ಲಿ ಸಿಗುತ್ತದೆ. ಯಾರು ಬೇಕಾದರೂ ಇದನ್ನು ಪರಿಶೀಲಿಸಬಹುದು.



ಬ್ಲಾಕ್‌ಚೈನ್ ಎಂದರೇನು?

ಬ್ಲಾಕ್‌ಚೈನ್ ಎಂಬುದು ಬಿಟ್‌ಕಾಯಿನ್ ದತ್ತಾಂಶಗಳನ್ನು ಒಳಗೊಂಡ ಮೂಟೆ. ಪ್ರತಿಯೊಂದು ಬಿಟ್ ಕಾಯಿನ್ ಮಾರಾಟ/ಖರೀದಿ/ವರ್ಗಾವಣೆಯ ದಿನಾಂಕ, ಸಮಯ, ಮೌಲ್ಯ, ಖರೀದಿದಾರ ಮತ್ತು ಮಾರಾಟಗಾರ ಮತ್ತು ಪ್ರತೀ ವಹಿವಾಟಿಗೆ ನೀಡಲಾಗುವ ಕೋಡ್ ಮೊದಲಾದ ಅಂಶಗಳು ಘಟಕಗಳ ರೂಪದಲ್ಲಿ (ಬ್ಲಾಕ್) ದಾಖಲಾಗಿರುತ್ತವೆ. ಇಲ್ಲಿ ದಾಖಲಾಗುವ ಪ್ರತಿಯೊಂದು ಘಟಕಗಳನ್ನು ಕಾಲಾನುಕ್ರಮದಲ್ಲಿ ಒಟ್ಟಿಗೆ ಜೋಡಿಸಿದಾಗ, ಅದು ಡಿಜಿಟಲ್ ಸರಪಳಿ ಅಥವಾ ಬ್ಲಾಕ್‌ಚೈನ್ ಆಗುತ್ತದೆ. ಬ್ಲಾಕ್‌ಚೈನ್ ಎಂಬುದು ಕ್ರಿಪ್ಟೋಕರೆನ್ಸಿ ವಹಿವಾಟಿನ ಸಾರ್ವಜನಿಕ ಲೆಡ್ಜರ್ ಆಗಿ ಕಾರ್ಯನಿರ್ವಹಿಸುತ್ತದೆ.

ಹೂಡಿಕೆಯ ಮಾರ್ಗ

ಬಿಟ್‌ಕಾಯಿನ್ ಖರೀದಿ ಮಾಡಬೇಕಾದರೆ, ಆನ್‌ಲೈನ್‌ನಲ್ಲಿ ಖಾತೆ ತೆರೆದು, ಕ್ರಿಪ್ಟೊಕರೆನ್ಸಿ ಎಕ್ಸ್‌ಚೇಂಜ್ ಮೂಲಕ ಖರೀದಿ ಮಾಡಬಹುದು. ಗುರುತಿನ ದಾಖಲೆಗಳನ್ನು ಒದಗಿಸಬೇಕು. ಬಿಟ್‌ಕಾಯಿನ್ ಖರೀದಿಗೆ ಲಕ್ಷಾಂತರ ರೂಪಾಯಿ ಬೇಕಿಲ್ಲ. ನೂರು ರೂಪಾಯಿ ಹೂಡಿಕೆ ಮಾಡಿ ಬಿಟ್‌ಕಾಯಿನ್‌ನ ಒಂದು ಭಾಗವನ್ನು ಖರೀದಿ ಮಾಡಬಹುದು.

ಷೇರು ಮತ್ತು ಬಾಂಡ್‌ಗಳಂತೆಯೇ, ಬಿಟ್‌ಕಾಯಿನ್ ಪರ್ಯಾಯ ಹೂಡಿಕೆ ಮಾರ್ಗವಾಗಿ ಬಳಕೆಯಾಗುತ್ತಿದೆ. ಸರಕು ಖರೀದಿ ಮತ್ತು ಸೇವೆಗಳನ್ನು ಪಡೆದಾಗ, ಬಿಟ್‌ಕಾಯಿನ್ ರೂಪದಲ್ಲಿ ಹಣ ಪಾವತಿಸಬಹುದು. ಕ್ರಿಪ್ಟೋಕರೆನ್ಸಿಯನ್ನು ಸ್ವೀಕರಿಸುವ ಮಾರಾಟಗಾರರ ಸಂಖ್ಯೆ ಸೀಮಿತವಾಗಿದ್ದರೂ, ಅವರ ಪ್ರಮಾಣ ನಿಧಾನವಾಗಿ ಹೆಚ್ಚಾಗುತ್ತಿದೆ. ಮೈಕ್ರೋಸಾಫ್ಟ್, ಪೇಪಾಲ್ ಮೊದಲಾದ ಕಂಪನಿಗಳು ಬಿಟ್‌ಕಾಯಿನ್ ರೂಪದಲ್ಲಿ ಪಾವತಿ ಸ್ವೀಕರಿಸುತ್ತಿವೆ. ಕೆಲವು ಸಣ್ಣ ಸ್ಥಳೀಯ ಚಿಲ್ಲರೆ ವ್ಯಾಪಾರಿಗಳು ಅಥವಾ ಕೆಲವು ವೆಬ್‌ಸೈಟ್‌ಗಳು ಸಹ ಬಿಟ್‌ಕಾಯಿನ್ ತೆಗೆದುಕೊಳ್ಳಲು ಶುರು ಮಾಡಿದ್ದು, ಇದರ ಮಾರುಕಟ್ಟೆ ವಿಸ್ತರಣೆಯಾಗುತ್ತಿದೆ.

ಆಧಾರ: ಬಿಬಿಸಿ, ಫೋರ್ಬ್ಸ್

ಭಾರತದಲ್ಲಿ ಕ್ರಿಪ್ಟೋ ಹಣಕ್ಕೆ ತೆರಿಗೆ?

ಬ್ಯಾಂಕ್‌ಗಳು ಅಥವಾ ಹಣಕಾಸು ಸಂಸ್ಥೆಗಳು ಕ್ರಿಪ್ಟೋಕರೆನ್ಸಿ ವಹಿವಾಟಿಗೆ ಅವಕಾಶ ನೀಡಬಾರದು ಎಂಬುದಾಗಿ 2018ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ನಿಷೇಧ ಹೇರಿತ್ತು. ಆದರೆ 2020ರಲ್ಲಿ ಇದಕ್ಕೆ ತಡೆ ನೀಡಿದ್ದ ಸುಪ್ರೀಂ ಕೋರ್ಟ್, ಆನ್‌ಲೈನ್ ವಹಿವಾಟಿಗೆ ಅವಕಾಶ ನೀಡಿತ್ತು.

ಕ್ರಿಪ್ಟೋಕರೆನ್ಸಿಗೆ ದೇಶದಲ್ಲಿ ಕಾನೂನಿನ ಮಾನ್ಯತೆ ಇಲ್ಲದಿದ್ದರೂ, ಕಂಪನಿಗಳು ಕ್ರಿಪ್ಟೋಕರೆನ್ಸಿ ಮೂಲಕ ಗಳಿಸಿದ ಹಣ ಅಥವಾ ನಷ್ಟದ ಮಾಹಿತಿಯನ್ನು ಬಹಿರಂಗಪಡಿಸುವುದು ಕಡ್ಡಾಯ ಎಂದು ಸರ್ಕಾರ ಸೂಚಿಸಿದೆ. ಕಂಪನಿಗಳು ತಮ್ಮಲ್ಲಿರುವ ಕ್ರಿಪ್ಟೋಕರೆನ್ಸಿಯ ಮೌಲ್ಯವನ್ನು ಬ್ಯಾಲೆನ್ಸ್‌ಶೀಟ್‌ನಲ್ಲಿ ನಮೂದಿಸಬೇಕಿದೆ.

ಕ್ರಿಪ್ಟೋಕರೆನ್ಸಿ ಮತ್ತು ಅಧಿಕೃತ ಡಿಜಿಟಲ್ ಕರೆನ್ಸಿ ನಿಯಂತ್ರಣ ಮಸೂದೆ–2021 ಅನ್ನು ಸಂಸತ್ತಿನಲ್ಲಿ ಸರ್ಕಾರ ಮಂಡಿಸಿದ್ದು, ಚಳಿಗಾಲದ ಅಧಿವೇಶನದಲ್ಲಿ ಅದು ಚರ್ಚೆಗೆ ಬರಲಿದೆ. ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ಜನರು ತಾವು ಹೊಂದಿರುವ ಕ್ರಿಪ್ಟೋಕರೆನ್ಸಿ ಮಾಹಿತಿಯನ್ನು ನೀಡಬೇಕು ಎಂಬ ಅಂಶವೂ ಮಸೂದೆಯಲ್ಲಿ ಇದೆ ಎನ್ನಲಾಗಿದೆ. ಈಗ, ಆದಾಯ ತೆರಿಗೆ ಕಾಯ್ದೆಯಲ್ಲಿ ಕ್ರಿಪ್ಟೋಕರೆನ್ಸಿಗೆ ತೆರಿಗೆ ಇಲ್ಲ. ಮುಂದಿನ ದಿನಗಳಲ್ಲಿ ಇದಕ್ಕೆ ತೆರಿಗೆ ಹಾಕುವ ಸಾಧ್ಯತೆಯಿದೆ ಎಂದು ತಜ್ಞರು ಹೇಳಿದ್ದಾರೆ.

ಶ್ರೀಕಿ ಹ್ಯಾಕ್ ಮಾಡಿದ್ದು ಹೇಗೆ?

• ಸಂತೋಷ್ ಜಿಗಳಿಕೊಪ್ಪ



ಡಿಜಿಟಲ್ ವ್ಯವಸ್ಥೆ ಮೂಲಕ ನಡೆಯುವ ಬಿಟ್‌ಕಾಯಿನ್ ವ್ಯವಹಾರದ ಮೇಲೆ ಸಾಫ್ಟ್‌ವೇರ್ ಮೂಲಕ ಹಿಡಿತ ಸಾಧಿಸಿದ್ದ ಹ್ಯಾಕರ್ ಶ್ರೀಕೃಷ್ಣ, ಹಣ ವಿನಿಮಯ ಏಜೆನ್ಸಿಗಳ ಸರ್ವರ್ ಹಾಗೂ ಜಾಲತಾಣಗಳನ್ನು ಹ್ಯಾಕ್ ಮಾಡಿರುವುದು ತನಿಖೆಯಿಂದ ಬಯಲಾಗಿದೆ.

ಬಾಲ್ಯದಿಂದಲೇ ತಂತ್ರಜ್ಞಾನದಲ್ಲಿ ಚುರುಕಿದ್ದ ಶ್ರೀಕೃಷ್ಣ, ಪಿಯುಸಿಯಿಂದಲೇ ಬಿಟ್‌ಕಾಯಿನ್ ದೋಚಲಾರಂಭಿಸಿದ್ದ. ಇದಕ್ಕಾಗಿ ಆತ, ಸಾಫ್ಟ್‌ವೇರ್‌ವೊಂದನ್ನು ಖರೀದಿಸಿದ್ದ. ನಿಗದಿತ ಹಣವನ್ನು ಪಾವತಿಸಿ ಪರವಾನಗಿಯನ್ನೂ ಪಡೆದಿದ್ದ. ಅದೇ ಸಾಫ್ಟ್‌ವೇರ್ ಅನ್ನು ತನ್ನ ಲ್ಯಾಪ್‌ಟಾಪ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡಿದ್ದ.

ಪ್ರತಿ ಬಾರಿ ಹ್ಯಾಕ್ ಮಾಡಿದಾಗಲೂ ಆರೋಪಿ ಇದೇ ಸಾಫ್ಟ್‌ವೇರ್ ಬಳಸಿದ್ದ. ಕಾಲೇಜು ದಿನಗಳಿಂದಲೂ ಇದೇ ಸಾಫ್ಟ್‌ವೇರ್ ಆತನ ಬಳಿ ಇತ್ತು. ಅದರ ನಡುವೆಯೇ ಆರೋಪಿಯ ಲ್ಯಾಪ್‌ಟಾಪ್ ಹಾಳಾಗಿತ್ತು. ಅವಾಗಲೇ ಆರೋಪಿ, ಬೇರೊಂದು ಸಾಫ್ಟ್‌ವೇರ್ ಖರೀದಿಸಿ ಕೃತ್ಯಕ್ಕೆ ಬಳಸಲಾರಂಭಿಸಿದ್ದ. ಅದಕ್ಕಾಗಿ, ಎರಡನೇ ಆರೋಪಿ ರಾಬಿನ್ ಖಂಡೇಲ್‌ವಾಲಾ ಹಾಗೂ ಇತರರ ಲ್ಯಾಪ್‌ಟಾಪ್ ಬಳಸಲಾರಂಭಿಸಿದ್ದ.

'ಗಣಿತ ಸಮಸ್ಯೆಗಳನ್ನು ಚುರುಕಿನಿಂದ ಬಿಡಿಸುತ್ತಿದ್ದ ಶ್ರೀಕೃಷ್ಣ, ಡಿಜಿಟಲ್ ಅಂಕಿಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಪರಿಣತನಾಗಿದ್ದ. ಇದೇ ಕಾರಣಕ್ಕೆ ಆತ, ಪ್ರತಿಯೊಂದು ಸರ್ವರ್ ಹಾಗೂ ಜಾಲತಾಣಗಳನ್ನು ತ್ವರಿತವಾಗಿ ಹ್ಯಾಕ್ ಮಾಡುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಾಫ್ಟ್‌ವೇರ್ ಮೂಲಕ ತನ್ನ ಅಸ್ತ್ರಗಳನ್ನು (ಬಗ್ ಹಾಗೂ ಇತರೆ) ಸರ್ವರ್ ಹಾಗೂ ಜಾಲತಾಣಕ್ಕೆ ಕಳುಹಿಸುತ್ತಿದ್ದ ಆರೋಪಿ, ಇಡೀ ಡಿಜಿಟಲ್ ವ್ಯವಸ್ಥೆಯನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುತ್ತಿದ್ದ. ನಂತರವೇ, ಹ್ಯಾಕಿಂಗ್ ಮಾಡಿ ಬಿಟ್‌ಕಾಯಿನ್ ದೋಚುತ್ತಿದ್ದ' ಎಂದೂ ತಿಳಿಸಿವೆ.

ಬಿಟ್‌ಕಾಯಿನ್ ಮೈನಿಂಗ್

ಯಾವುದೇ ಕ್ರಿಪ್ಟೋಕರೆನ್ಸಿಯ ವಹಿವಾಟು ಪೂರ್ಣವಾಗಬೇಕಾದರೆ, ಅದನ್ನು ತಜ್ಞರು ಅನುಮೋದಿಸಬೇಕು. ಬಿಟ್‌ಕಾಯಿನ್ ಸಹ ಈ ಪ್ರಕ್ರಿಯೆಯಿಂದ ಹೊರತಲ್ಲ. ಹೀಗೆ ಬಿಟ್‌ಕಾಯಿನ್ ವಹಿವಾಟನ್ನು ಅನುಮೋದಿಸುವ ಕ್ರಿಯೆಯನ್ನು ಬಿಟ್‌ಕಾಯಿನ್ ಮೈನಿಂಗ್ ಎಂದು, ಈ ಕೆಲಸ ಮಾಡುವವರನ್ನು ಬಿಟ್‌ಕಾಯಿನ್ ಮೈನರ್ ಎಂದು ಕರೆಯಲಾಗುತ್ತದೆ. ಅನುಮೋದಿಸುವ ಈ ಕೆಲಸಕ್ಕೆ ಪ್ರತಿಯಾಗಿ, ಮೈನರ್‌ಗಳ ವಾಲೆಟ್‌ನಲ್ಲಿ ಹೊಸ ಬಿಟ್‌ಕಾಯಿನ್‌ಗಳು ಸೃಷ್ಟಿಯಾಗುತ್ತವೆ. ಆ ಬಿಟ್‌ಕಾಯಿನ್‌ಗಳು ಚಲಾವಣೆಗೆ ಬರುತ್ತವೆ.

ಬಿಟ್‌ಕಾಯಿನ್‌ನಲ್ಲಿ ವಹಿವಾಟು ನಡೆಸುವವರು ತಾವು ಪಡೆದ ಸೇವೆ ಅಥವಾ ಸರಕಿಗೆ ಪ್ರತಿಯಾಗಿ ಬಿಟ್‌ಕಾಯಿನ್ ರೂಪದಲ್ಲಿ ಹಣ ಪಾವತಿ ಮಾಡುತ್ತಾರೆ. ಆ ಹಣವನ್ನು ಯಾರಿಗೆ ಕೊಡಬೇಕೊ ಅವರ ಬಿಟ್‌ಕಾಯಿನ್ ವಾಲೆಟ್‌ನ ವಿಳಾಸವನ್ನು ನಮೂದಿಸಿ ಬಿಟ್‌ಕಾಯಿನ್ ವರ್ಗಾಯಿಸುತ್ತಾರೆ.

ಪ್ರತ್ಯೇಕ ವಿಳಾಸ ಮತ್ತು ಡಬಲ್ ಸ್ಪೆಂಡಿಂಗ್

ಪ್ರತೀ ಬಿಟ್‌ಕಾಯಿನ್‌ಗೆ ಮತ್ತು ಪ್ರತೀ ಬಿಟ್‌ಕಾಯಿನ್ ವಹಿವಾಟಿಗೆ ಒಂದು ವಿಳಾಸ ಇರುತ್ತದೆ. ಆ ವಿಳಾಸದಲ್ಲಿ ಇರುವ ಬಿಟ್‌ಕಾಯಿನ್‌ನ ಮೌಲ್ಯದಷ್ಟು ಹಣವನ್ನಷ್ಟೇ ವರ್ಗಾವಣೆ ಮಾಡಲು ಸಾಧ್ಯ. ಆ ಬಿಟ್‌ಕಾಯಿನ್ ಅನ್ನು ಈ ಹಿಂದೆ ಯಾರಿಗೆಲ್ಲಾ ವರ್ಗಾವಣೆ ಮಾಡಲಾಗಿದೆ ಮತ್ತು ಎಷ್ಟು ಬಾರಿ ವರ್ಗಾವಣೆ ಮಾಡಲಾಗಿದೆ ಎಂಬುದರ ವಿವರ ಆ ವಿಳಾಸದಲ್ಲಿ ಇರುತ್ತದೆ. ಮತ್ತು ಈ ಎಲ್ಲಾ ವಿವರ ಬ್ಲಾಕ್‌ಚೈನ್‌ನಲ್ಲಿ ದಾಖಲಾಗಿರುತ್ತದೆ. ಆ ವಿಳಾಸದಲ್ಲಿ ಇರುವ ಬಿಟ್‌ಕಾಯಿನ್‌ನ ಮೌಲ್ಯವೂ ಅದರಲ್ಲಿ ದಾಖಲಾಗಿರುತ್ತದೆ. ಬ್ಯಾಕ್‌ಚೈನ್‌ನಲ್ಲಿ ಇರುವ ವಿಳಾಸವು 64 ಅಕ್ಷರ ಮತ್ತು ಅಂಕೆಗಳ ಸಂಯೋಜನೆ. ಉದಾಹರಣೆಗೆ: *00000000 00000000057fcc708cf0130d95e27c581920 3e9f967ac56e4df598ee*



ಬಿಟ್‌ಕಾಯಿನ್ ಈ ರೀತಿಯ ಕೋಡ್ ರೂಪದ ಹಣ. ಒಬ್ಬ ವ್ಯಕ್ತಿಯು, ಒಂದೇ ಕೋಡ್ ವಿಳಾಸವನ್ನು ಇಬ್ಬರು ವ್ಯಕ್ತಿಗಳಿಗೆ ನೀಡಲು ಸಾಧ್ಯವಿದೆ. ಆದರೆ ಅದರಲ್ಲಿ ಒಬ್ಬರಿಗೆ ಮಾತ್ರವೇ ಆ ಹಣ ವರ್ಗಾವಣೆಯಾಗುತ್ತದೆ. ಹೀಗೆ ಒಂದೇ ಕೋಡ್ ವಿಳಾಸವನ್ನು ಇಬ್ಬರಿಗೆ ನೀಡುವುದು ವಂಚನೆ. ಉದಾಹರಣೆಗೆ, 'ಎ' ವ್ಯಕ್ತಿಯು ಬಿಟ್‌ಕಾಯಿನ್ ರೂಪದಲ್ಲಿ ಹಣವನ್ನು 'ಬಿ' ಎಂಬ ವ್ಯಕ್ತಿಗೆ ವರ್ಗಾಯಿಸುತ್ತಾನೆ. ಇದು ಕೋಡ್ ರೂಪದಲ್ಲಿ ಇರುವ ಹಣವಾದ ಕಾರಣ ಅದೇ ಕೋಡ್ ಅನ್ನು 'ಎ' ವ್ಯಕ್ತಿಯು, 'ಸಿ' ಎಂಬ ಬೇರೊಬ್ಬ ವ್ಯಕ್ತಿಗೂ ವರ್ಗಾಯಿಸಬಹುದು. ಈ ರೀತಿ ಒಂದೇ ಬಿಟ್‌ಕಾಯಿನ್ ಅನ್ನು ಇಬ್ಬರಿಗೆ ಅಥವಾ ಅದಕ್ಕಿಂತಲೂ ಹೆಚ್ಚು ಜನರಿಗೆ ವರ್ಗಾವಣೆ ಮಾಡುವುದನ್ನು 'ಡಬಲ್ ಸ್ಪೆಂಡಿಂಗ್' ಎನ್ನುತ್ತಾರೆ. 'ಡಬಲ್ ಸ್ಪೆಂಡಿಂಗ್' ಮೂಲಕ ವಂಚನೆ ಎಸಗುವುದನ್ನು ತಡೆಯಲು ಇರುವ ವ್ಯವಸ್ಥೆಯೇ ಮೈನಿಂಗ್.

ವಹಿವಾಟು ಆರಂಭ, ಪರಿಶೀಲನೆ ಮತ್ತು ಪೂರ್ಣ

ಒಬ್ಬ ವ್ಯಕ್ತಿಯು ತನ್ನಲ್ಲಿದ್ದ ಬಿಟ್‌ಕಾಯಿನ್ ಕೋಡ್ ಅನ್ನು ಇನ್ನೊಬ್ಬರಿಗೆ ನೀಡಿ, ನಿಗದಿತ ಮೊತ್ತವನ್ನು ವರ್ಗಾಯಿಸಬಹುದು. ಈ ಕೋಡ್‌ನಲ್ಲಿ ನಿಗದಿತ ಮೊತ್ತ ಇದೆಯೇ ಎಂಬುದನ್ನು ಮೈನರ್‌ಗಳು ಪರಿಶೀಲಿಸುತ್ತಾರೆ. ಆ ಮೊತ್ತ ಇದ್ದರಷ್ಟೇ ಅನುಮೋದಿಸುತ್ತಾರೆ. ಆಗ ಆ ಬಿಟ್‌ಕಾಯಿನ್, ಇನ್ನೊಬ್ಬ ವ್ಯಕ್ತಿಯ ವಾಲೆಟ್‌ಗೆ ಸೇರುತ್ತದೆ. ಅಲ್ಲಿಗೆ ವಹಿವಾಟು ಪೂರ್ಣವಾಗುತ್ತದೆ.

ಹೀಗೆ ಪ್ರತೀ ವಹಿವಾಟನ್ನು ಅನುಮೋದಿಸಲು 15–20 ನಿಮಿಷ ಬೇಕಾಗುತ್ತದೆ. ಬಿಟ್‌ಕಾಯಿನ್ ಚಲಾವಣೆಗೆ ಬಂದಾಗಿನಿಂದ ಆಗಿರುವ ಎಲ್ಲಾ ವಹಿವಾಟುಗಳನ್ನು ಪರಿಶೀಲಿಸಿ, ಪ್ರತೀ ಹೊಸ ವಹಿವಾಟನ್ನು ಅನುಮೋದಿಸಬೇಕಾಗುತ್ತದೆ. ಇದಕ್ಕಾಗಿ ಪ್ರಬಲ ಮತ್ತು ದುಬಾರಿ ಕಂಪ್ಯೂಟರ್‌ಗಳು ಬೇಕಾಗುತ್ತವೆ. ಈ ಕಾರ್ಯಕ್ಕೆ ಹೆಚ್ಚು ವಿದ್ಯುತ್ ಬೇಕಾಗುತ್ತದೆ. ಈಗ ಇರುವ ಕೋಟ್ಯಂತರ ಮೈನರ್‌ಗಳ ಜತೆ ಪೈಪೋಟಿ ನಡೆಸಿ, ವಹಿವಾಟನ್ನು ಅನುಮೋದಿಸುವ ಕೆಲಸ ಮಾಡಬೇಕಾಗುತ್ತದೆ. ಅಷ್ಟು ಚಾಕಚಕ್ಯತೆ ಇದ್ದರಷ್ಟೇ ಮೈನರ್ ಆಗಿ ಕೆಲಸ ಮಾಡಲು ಸಾಧ್ಯ.

ಆಧಾರ: ಬಿಟ್‌ಕಾಯಿನ್.ಒಆರ್‌ಜಿ



ಶಿವಕುಮಾರನಿಗೆ ಪಟ್ಟಾಭಿಷೇಕ

ಕಾರ್ತಿಕೇಯನು ಕೃತ್ತಿಕೆಯರಿಂದ ಬೀಳ್ಕೊಂಡು ಹೊರಡುವಾಗ ವಿಶ್ವಕರ್ಮ ನಿಂದ ನಿರ್ಮಿಸಿದ ಸುಂದರ ರಥ ಪ್ರತ್ಯಕ್ಷವಾಯಿತು. ಮಗನನ್ನು ಕಳು ಹಿಸಿಕೊಡುವಾಗ ದುಃಖ ತಾಳಲಾರದೆ ಕೃತ್ತಿಕೆಯರು ಪ್ರಜ್ಞಾಹೀನರಾದರು. ಆಗ ಬಾಲಕಾರ್ತಿಕೇಯನು ತನ್ನ ಸಲಹಿದ ತಾಯಂದಿರ ಆರೈಕೆ ಮಾಡಿ ಎಚ್ಚರಗೊಳಿಸಿದ. ನಂತರ ಅವರನ್ನು ಅಲ್ಲೇ ಬಿಡದೆ ತನ್ನೊಂದಿಗೆ ಕೈಲಾಸಕ್ಕೆ ಕರೆ ದೊಯ್ದ. ಕೈಲಾಸಕ್ಕೆ ಕಾರ್ತಿಕೇಯ ಬಂದ ವಿಷಯವನ್ನು ವಿಷ್ಣು, ಬ್ರಹ್ಮ, ದೇವತೆ ಗಳು, ಋಷಿಗಳು, ಸಿದ್ಧರು, ಚಾರಣರು ಮತ್ತಿತರು ಶಿವನಿಗೆ ತಿಳಿಸಿದರು. ದೇವತೆಗಳೊಂದಿಗೆ ತನ್ನ ಪುತ್ರನನ್ನು ನೋಡಲು ಮಹಾಶಿವ ಧಾವಿಸಿ ಬಂದು ಸಂತೋಷದಿಂದ ಆಲಂಗಿಸಿದ. ಗಂಗಾಪುತ್ರನ ಆಗಮನದಿಂದ ಹರ್ಷಿತರಾದ ದೇವತೆಗಳು ಶಂಖ ಊದಿದರೆ, ಶಿವಗಣಗಳು ಭೇರಿ ಬಾರಿಸಿದರು. ಕೈಲಾಸದೆ ಲ್ಲೆಲ್ಲೂ ಮಂಗಳಘೋಷ ಮತ್ತು ವಾದ್ಯಗಳು ಮೊಳಗತೊಡಗಿದವು. ವೀರಭದ್ರ ಮತ್ತಿತರರು ತಾಳಗಳನ್ನು ಹಾಕುತ್ತಾ, ಶಿವಕುಮಾರನ ಗುಣಗಾನ ಮಾಡಿದರು.

ಪಾರ್ವತಿದೇವಿ ಮಗನ ಆಗಮನಕ್ಕಾಗಿ ರಾಜಮಾರ್ಗಗಳನ್ನೆಲ್ಲಾ ಅಮೋಘವಾಗಿ ಶೃಂಗಾರ ಮಾಡಿದ್ದಳು. ಲಕ್ಷ್ಮಿ-ಸರಸ್ವತಿ ಮತ್ತಿತರ ಪತಿ-ಪುತ್ರರುಳ್ಳ 30 ಸುಮಂಗಲಿಯರೊಂದಿಗೆ ಬಂದು ಆರತಿ ಬೆಳಗಿ ಸುಬ್ರಹ್ಮಣ್ಯನನ್ನು ಬರ ಮಾಡಿಕೊಂಡಳು. ಶಕ್ತಿಧರನಾದ ಸ್ಕಂದನು ಪಾರ್ವತೀಪರಮೇಶ್ವರನನ್ನು ನೋಡಿ ರಥದಿಂದ ಇಳಿದು ನಮಸ್ಕರಿಸಿದ. ಬಾಲಸುಬ್ರಹ್ಮಣ್ಯ ಕೈಲಾಸದ್ವಾರ ಪ್ರವೇಶಿಸುತ್ತಿದ್ದಂತೆ ಶಿವಗಣಗಳು ಜಯಘೋಷ ಮಾಡಿದರೆ, ಋಷಿಗಳು ವೇದಘೋಷವನ್ನು ಮಾಡಿದರು, ಸಂಗೀತಗಾರರು ಗಾನ ಮಾಡಿದರು. ಮಹೇಶ್ವರನು ಪಾರ್ವತಿಯೊಡನೆ ತನ್ನ ಕುಮಾರನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡ. ಆಗ ಶಿವಕುಮಾರನು ಶಿವನ ಕೊರಳಲ್ಲಿದ್ದ ವಾಸುಕಿಯೊಂದಿಗೆ ಆಟವಾಡತೊಡಗಿದ. ಇದನ್ನು ಗಿರಿಜೆಗೆ ತೋರಿಸಿ ಆನಂದಿಸಿದ.

ನಂತರ ಕುಮಾರನನ್ನು ರತ್ನಸಿಂಹಾಸನದ ಮೇಲೆ ಕೂರಿಸಿ, ವೇದಮಂತ್ರ ಘೋಷಗಳ ನಡುವೆ ಮಗನ ಶಿರಕ್ಕೆ ಸರ್ವ ತೀರ್ಥಗಳನ್ನು ತುಂಬಿದ್ದ ರತ್ನಕಳಸ ದಿಂದ ಅಭಿಷೇಕ ಮಾಡಿದ. ವಿಷ್ಣುವು ಕುಮಾರನ ಶಿರಕ್ಕೆ ಕಿರೀಟ ತೊಡಿಸಿ, ರತ್ನಖಚಿತ ಭುಜಕೀರ್ತಿ, ವೈಜಯಂತಿ ಎಂಬ ಮಾಲಿಕೆ ಮತ್ತು ಚಕ್ರವನ್ನೂ ಕುಮಾರನಿಗೆ ಕಾಣಿಕೆಯಾಗಿ ಕೊಟ್ಟ. ಶಿವನು ಶೂಲ, ಪಿನಾಕವೆಂಬ ಧನುಸ್ಸು, ಪಾಶುಪತವೆಂಬ ಬಾಣವನ್ನೂ ಕುಮಾರನಿಗೆ ಕೊಟ್ಟ. ಬ್ರಹ್ಮನು ಯಜ್ಞೋಪವೀತವನ್ನೂ ವೇದಗಳನ್ನೂ ಗಾಯತ್ರಿಯನ್ನೂ ಕಮಂಡಲುವನ್ನೂ ಬ್ರಹ್ಮಾಸ್ತ್ರವನ್ನೂ ಶತ್ರುನಾಶಕವಾದ ವಿದ್ಯೆಯನ್ನೂ ಉಪದೇಶಿಸಿದ.

ಇಂದ್ರನು ಐರಾವತ, ವಜ್ರಾಯುಧವನ್ನೂ ಕೊಟ್ಟರೆ, ವರುಣನು ಶ್ವೇತಚ್ಛತ್ರ ವನ್ನೂ ರತ್ನಮಾಲಿಕೆಯನ್ನೂ, ಸೂರ್ಯನು ಮನೋವೇಗವುಳ್ಳ ತೇಜಸ್ವಿಯಾದ ರಥವನ್ನೂ, ಯಮನು ಯಮದಂಡವನ್ನೂ, ಅಗ್ನಿಯು ಮಹಾಶಕ್ತಿಯನ್ನು, ನಿರುರುತಿಯು ತನ್ನ ಶಸ್ತ್ರವನ್ನೂ, ವಾಯುವು ವಾಯುವ್ಯಾಸ್ತ್ರವನ್ನೂ, ಕುಬೇರನು ಗದೆಯನ್ನೂ, ಕ್ಷೀರಸಮುದ್ರವು ಅಮೂಲ್ಯರತ್ನಗಳನ್ನೂ,ಹಿಮಾಲಯವು ದಿವ್ಯವಾದ ಭೂಷಣಗಳನ್ನೂ, ಬಟ್ಟೆಗಳನ್ನೂ ಕೊಟ್ಟಿತು. ಗರುಡನು ಚಿತ್ರ ಬರ್ಹಣನೆಂಬ ತನ್ನ ಮಗನನ್ನು ಅರ್ಪಿಸಿದನು. ಅರುಣನು ತಾಮ್ರಚೂಡನೆಂಬ ಕುಕ್ಕುಟವನ್ನು ಕೊಟ್ಟನು. ಪಾರ್ವತಿಯು ತನ್ನ ಮಗನಿಗೆ ಐಶ್ವರ್ಯವನ್ನು ಕೊಟ್ಟು, ಚಿರಂಜೀವಿಯಾಗಿ ಬಾಳೆಂದು ಹರಸಿದಳು. ಲಕ್ಷ್ಮಿಯು ದಿವ್ಯವಾದ ಸಂಪತ್ತು ಮತ್ತು ಮನೋಹರವಾದ ಹಾರವನ್ನೂ, ಸರಸ್ವತಿಯು ಸಿದ್ಧವಿದ್ಯೆ ಯನ್ನೂ ಕೊಟ್ಟು ಹರಸಿದರು. ಸಾಕುತಾಯಂದಿರಾದ ಕೃತ್ತಿಕೆಯರೂ ತಮ್ಮ ಇಷ್ಟದ ವಸ್ತುಗಳನ್ನು ಅರ್ಪಿಸಿದರು.

ಈ ಸಮಯದಲ್ಲಿ ರುದ್ರನು ಸಂತೋಷದಿಂದ ಬ್ರಹ್ಮಾದಿದೇವತೆಗಳಿಗೆ ನಿಮಗಿಷ್ಟವಾದ ವರಗಳನ್ನು ಕೇಳಿ ಎಂದ. ಆಗ ಬ್ರಹ್ಮ-ವಿಷ್ಣು ಎಲ್ಲಾ ದೇವತೆಗಳು ಕುಮಾರನಿಂದ ತಾರಕಾಸುರನ ವಧೆಯಾಗಬೇಕಾಗಿರುವುದರಿಂದ ಅವನನ್ನು ಕಳುಹಿಸಿ ಕೊಡು ಎಂದರು. ಶಿವನು ಹಾಗೆಯೇ ಆಗಲೆಂದು ಹೇಳಿ, ತಾರಕ ನನ್ನು ಸಂಹರಿಸಲು ತನ್ನ ಮಗನನ್ನು ದೇವತೆಗಳೊಡನೆ ಕಳುಹಿಸಿಕೊಟ್ಟ. ತ್ವಷ್ಟಾ ಎಂಬ ದೇವಶಿಲ್ಪಿಯು ಶಿವನ ಅಪ್ಪಣೆಯಂತೆ ಆ ಪರ್ವತದ ಸಮೀಪದಲ್ಲಿ ಒಂದು ಮನೋಹರವಾದ ನಗರವನ್ನು ನಿರ್ಮಿಸಿದ. ಅಲ್ಲಿ ಗುಹನ ವಾಸಕ್ಕೆ ಭವ್ಯವಾದ ಮನೆ ಕಟ್ಟಿಕೊಟ್ಟ. ಮನೆಯೊಳಗೆ ಸಿಂಹಾಸನದ ಮೇಲೆ ಶಿವಪುತ್ರ ಗುಹನನ್ನು ಕೂರಿಸಿದ ವಿಷ್ಣು ಬ್ರಹ್ಮಾಂಡದ ಆಧಿಪತ್ಯವನ್ನು ಕೊಟ್ಟ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ತೀವ್ರವಾಗಿ ಗಾಯಗೊಂಡಿರುವ ವ್ಯಕ್ತಿಯೊಬ್ಬರ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಗಾಯಗೊಂಡ ವ್ಯಕ್ತಿಯು ಉತ್ತರ ಪ್ರದೇಶದ ಮಿರ್ಜಾಪುರ ವಿಂದ್ಯಾಚಲ ದೇವಸ್ಥಾನದ ಅರ್ಚಕ ಅಮಿತ್ ಪಾಂಡೆ ಎಂದು ಹೇಳಲಾಗಿದೆ. ಮುಸ್ಲಿಮರ ಗುಂಪೊಂದು ಅವರ ಮೇಲೆ ದಾಳಿ ನಡೆಸಿ ಕೊಲ್ಲಲು ಯತ್ನಿಸಿತ್ತು ಎಂದು ಬಿಂಬಿಸಲಾಗಿದೆ. ಹಿಂದೂಗಳು ಸುಮ್ಮನೆ ಇರುವ ವರೆಗೂ ಇಂಥ ಘಟನೆಗಳು ನಡೆಯುತ್ತಲೇ ಇರುತ್ತವೆ ಎಂದು ಕೂಡಾ ವೈರಲ್ ಪೋಸ್ಟ್‌ನಲ್ಲಿ ಹೇಳಲಾಗಿದೆ.



ಈ ಘಟನೆ 2020ರ ಜೂನ್‌ನಲ್ಲಿ ನಡೆದಿದೆ. ಅಮಿತ್ ಪಾಂಡೆ ತಡರಾತ್ರಿ ಪೂಜೆ ಮಾಡಲು ದೇವಸ್ಥಾನಕ್ಕೆ ಬಂದಿದ್ದ ವೇಳೆ ಅರ್ಚಕರ ಗುಂಪೊಂದು ಅವರ ಮೇಲೆ ದಾಳಿ ಮಾಡಿತ್ತು ಎಂದು ಆಲ್ಟ್ ನ್ಯೂಸ್ ಹೇಳಿದೆ. ಈ ಮಾಹಿತಿಯನ್ನು ಅಮಿತ್ ಅವರ ಸಹೋದರ ಸುಮಿತ್ ಪಾಂಡೆ ನೀಡಿದ್ದಾರೆ. ಇದೇ ಚಿತ್ರ 2020ರ ಅಕ್ಟೋಬರ್‌ನಲ್ಲಿ ಇದೇ ರೀತಿಯ ಅಡಿ ಬರಹದೊಂದಿಗೆ ವೈರಲ್ ಆಗಿತ್ತು. ಆಗ ಪೊಲೀಸರು ಇಂಥ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದರು.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ನವೆಂಬರ್ 12, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತಿಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ಅಷ್ಟಮಿ ಗಂ. 9-47 (ಹ. 10-17) ಶುಕ್ರವಾರ ನಿತ್ಯನಕ್ಷತ್ರ ಧನಿಷ್ಠ ಗಂ. 33-12 (ರಾ. 7-40) ವೃದ್ಧಿ ನಾಮ ಯೋಗ ಗಂ. 9-31 ಬವ ಕರಣ ಗಂ. 9-47 ವಿಷ ಗಂ. 50-53 ಅಮೃತ ಗಂ 8-18 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-19 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 5, 9

ಮೇಷ: ಮನಸ್ಸಿಗೆ ಸಂಬಂಧಪಟ್ಟರೂ ದೇಹಾರೋಗ್ಯದ ಬಗ್ಗೆ ಆಲಸ್ಯ ಬೇಡ. ವಾಹನ ವ್ಯಾಪಾರದಲ್ಲಿ ಪ್ರಗತಿ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅನಿರೀಕ್ಷಿತ ಲಾಭ. ವನ್ಯ ಸಂಪತ್ತಿಗೆ ಅಧಿಕವಾದ ಪರಿಶ್ರಮ ಅಗತ್ಯ.

ವೃಷಭ: ಹಣ ಹೊಂದಿಸಲು ಬೇರೆಯವರ ಸಹಾಯವನ್ನು ಯಾಚಿಸಲಿದ್ದೀರಿ. ಔಷಧ ಸೇವನೆಯಲ್ಲಿ ಮುಂಜಾಗ್ರತೆ ಅಗತ್ಯ. ಮನಸ್ಸಿಗೆ ಸಂಬಂಧಿಸಿದ ವಿಷಯವನ್ನು ಬೇರೆಯವರಲ್ಲಿ ನಿವೇದಿಸಿಕೊಳ್ಳಿ.

ಮಿಥುನ: ಅದೃಷ್ಟದ ದಿನಕ್ಕಾಗಿ ಕಾಯುತ್ತಿರುವ ನಿಮಗೆ ಭಗವಂತನ ದಯೆ ಇದೆ. ನಿರೀಕ್ಷಿತ ಮಟ್ಟಕ್ಕೆ ನಿಮಗೆ ಗೆಲುವು ಕಟ್ಟಿಟ್ಟ ಬುತ್ತಿ. ಹಣಕಾಸಿನ ವ್ಯವಹಾರದಲ್ಲಿ ತೃಪ್ತಿದಾಯಕ ಬದುಕು. ಬಂಗಾರ ಖರೀದಿ ಮಾಡಲಿದ್ದೀರಿ.

ಕರ್ಕಾಟಕ: ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಆಸಕ್ತಿ ತೋರಲಿದ್ದೀರಿ. ಹಣಕಾಸಿನ ಬಗ್ಗೆ ಚಿಂತಿಸುವುದು ಬೇಡ. ಸ್ತ್ರೀಯರಿಗೆ ಮನಸ್ಸಿನ ಮೇಲೆ ನಿಯಂತ್ರಣವಿರಲಿ. ಗೊಂದಲಮಯ ಬದುಕಿನಿಂದ ಮುಕ್ತಿ.

ಸಿಂಹ: ದೂರದ ಬಂಧುಗಳ ಆಗಮನದಿಂದ ತೀರ್ಥಯಾತ್ರೆ ಬಗ್ಗೆ ನಿಷ್ಕರ್ಷೆ. ರತ್ನ ವ್ಯಾಪಾರಿಗಳಿಗೆ ಅನುಕೂಲ. ಗುಡಿ ಕೈಗಾರಿಕೆ ನಡೆಸುವವರಿಗೆ ಪ್ರಗತಿ. ಮನಸ್ಸಿಗೆ ಸಂತೋಷದಾಯಕ ದಿನ.

ಕನ್ಯಾ: ಸತ್ಕಾರ್ಯದಲ್ಲಿ ಪಾಲ್ಗೊಳ್ಳುವಿಕೆ. ಹಳೆಯ ವೈಷಮ್ಯ ಗರಿಗೆದರುವ ಸಾಧ್ಯತೆ. ವಿದ್ಯಾರ್ಥಿಗಳು ಸಮಾಧಾನ ಚಿತ್ತದಿಂದ ವ್ಯವಹರಿಸುವುದು ಉತ್ತಮ. ವಿಪರೀತವಾದ ಖರ್ಚು ರಕ್ಷಣಾಧಿಕಾರಿಗಳಿಗೆ ಎಚ್ಚರಿಕೆಯ ಕಾಲ.

ತುಲಾ: ಮನೆಯಲ್ಲಿನ ರಂಪಾಟಗಳು ಜಾಸ್ತಿಯಾಗುವ ಸಾಧ್ಯತೆ. ತಾಳ್ಮೆಯಿಂದಾಗಿ ಅನಿರೀಕ್ಷಿತ ಬೆಳವಣಿಗೆಯಿಂದ ಮಾನಸಿಕ ನೆಮ್ಮದಿ. ಸರ್ಕಾರಿ ನೌಕರರಿಗೆ ಪ್ರಶಂಸೆಯ ದಿನ. ಚಿಲ್ಲರೆ ವ್ಯಾಪಾರಿಗಳಿಗೆ ಲಾಭದ ದಿನ.

ವೃಶ್ಚಿಕ: ಮನಸ್ಸಿಗೆ ಅನುಕೂಲವಾದ ಅನೇಕ ವಿಷಯಗಳಲ್ಲಿ ಸಾಫಲ್ಯ ಪಡೆಯಲಿದ್ದೀರಿ. ವ್ಯತಿರಿಕ್ತವಾದ ವ್ಯವಹಾರದಲ್ಲಿ ತೊಡಗುವುದು ಬೇಡ. ಸಹೋದರರಿಂದ ಕಾರ್ಯಕ್ಕೆ ಅನುವು.

ಧನು: ವಿಶೇಷವಾಗಿ ಮಹಿಳೆಯರು ಕಾರ್ಯಕ್ಷೇತ್ರದಲ್ಲಿ ಅಗ್ನಿಯಿಂದ ಎಚ್ಚರ ಅಗತ್ಯ. ಅನಿರೀಕ್ಷಿತವಾದ ತಲೆನೋವಿಗೆ ದೃತಿಗೆಡಬೇಕಾಗಿಲ್ಲ. ವೈದ್ಯರಿಗೆ ಕಾಲುನೋವಿನ ಸಾಧ್ಯತೆ. ಮಹಿಳಾ ಉದ್ಯಮಿಗಳಿಗೆ ಸಂತೃಪ್ತಿ.

ಮಕರ: ಮಾನಸಿಕ ಸ್ಥೈರ್ಯ ಸದೃಢವಾಗಿ ಲಾಭದಾಯಕವಾದ ಬದುಕು. ಕೌಟುಂಬಿಕ ಬಿಕ್ಕಟ್ಟಿನ ಕುರಿತು ಚರ್ಚೆ, ಸಂಗಾತಿಯಿಂದ ಸಮಾಧಾನದ ಜೊತೆಗೆ ನೆರವು ದೊರೆಯಲಿದೆ.

ಕುಂಭ: ಅಧಿಕಾರಿಗಳ ಸಹಕಾರದಿಂದ ಕಾರ್ಯದಲ್ಲಿ ಪ್ರಗತಿ. ಮನಸ್ಸಿಗೆ ಸಂಬಂಧಪಟ್ಟ ವ್ಯವಹಾರ ನಡೆಸುವುದು ಉಚಿತವಲ್ಲ. ಹಿರಿಯರ ಆಶೀರ್ವಾದ ದೊರೆಯಲಿದೆ. ಕೃಷಿ ಕ್ಷೇತ್ರದಲ್ಲಿ ಸಾಧಾರಣ ಪ್ರಗತಿ.

ಮೀನ: ಹಿರಿಯ ಅಧಿಕಾರಿಗಳ ಭೇಟಿಯಿಂದ ಮುಂದೂಡಲ್ಪಡುತ್ತಿರುವ ಕಾರ್ಯಗಳು ಶೀಘ್ರದಲ್ಲಿ ನೆರವೇರಲಿವೆ. ಕುಶಲಕರ್ಮಿಗಳಿಗೆ ಅನುಕೂಲ. ಬಂಧುಗಳಿಂದ ಆರ್ಥಿಕ ಸಹಾಯದಿಂದ ದೃಢತೆ.

ನಿಮ್ಮ ಜನ್ಮದಿನ 12-ನವೆಂಬರ್ ಈ ದಿನ ಅತ್ಯಂತ ಶುಭ ದಿನವಾಗಿದೆ. ನಿಮ್ಮ ಮಹತ್ತರ ಕಾರ್ಯಯೋಜನೆಗಳು ನಿರಾಯಾಸವಾಗಿ ಸಾಗಿ ನೆಮ್ಮದಿಯತ್ತ ನಿಮ್ಮ ಪಯಣ. ದೂರ ಪ್ರಯಾಣ ಸಾಧ್ಯತೆ. ಆಗಾಗ್ಗೆ ನಿಮ್ಮ ಕಾರ್ಯಕ್ಷೇತ್ರವನ್ನು ಬದಲಾಯಿಸುವ ಸಾಧ್ಯತೆಯೂ ಕಂಡುಬರುತ್ತಿದೆ. ಸಂತೋಷದಾಯಕ ಬದುಕನ್ನು ನಿರೀಕ್ಷಿಸಿ.



ಹಿರಿತನದ ನೋಟದ ಶಾಂತಿ

ಬೆರಗಾಗಿಪುವುವೆಲ್ಲ ಪಿರಿತನದ ನೋಟಗಳು |
ಬೆರಗೆ, ಮೈಮರವೆ, ಸೊಲ್ಲಣಗುವುದೆ ಸೊಗಸು ||
ಬೆರಗು ಚಿತ್ತವ ನುಂಗಲೊಗೆವ ಶಾಂತಿಯ ಕಾಂತಿ |
ಪರಮನರ್ಚನೆಗೆವರ – ಮಂಕುತಿಮ್ಮ || 496 ||

ಪದ-ಅರ್ಥ: ಬೆರಗಾಗಿಪುವುವೆಲ್ಲ = ಬೆರಗಾಗಿಪುವ + ಅವೆಲ್ಲ, ಪಿರಿತನದ = ಹಿರಿತನದ, ಸೊಲ್ಲಣಗುವುದೆ = ಸೊಲ್ಲು(ಮಾತು) + ಅಣಗುವುದೆ (ಮರೆತು ಹೋಗುವುದೆ), ನುಂಗಲೊಗೆವ = ನುಂಗಲು + ಒಗೆವ(ಬೀರುವ, ಹೊರಬರುವ), ಪರಮನರ್ಚನೆಗೆ = ಪರಮನ(ಪರಮಾತ್ಮನ) + ಅರ್ಚನೆಗೆ.

ವಾಚ್ಯಾರ್ಥ: ಪ್ರಪಂಚದಲ್ಲಿ ಕಾಣುವ ಹಿರಿದಾದ ದೃಶ್ಯಗಳು ನಮ್ಮನ್ನು ಬೆರಗಾಗುವಂತೆ, ಮೈಮರೆಸುವಂತೆ, ಮಾತನ್ನು ಮರೆಸುವಂತೆ ಮಾಡುವುದೇ ಸುಂದರ. ಆ ಬೆರಗು ನಮ್ಮ ಮನಸ್ಸನ್ನು ಆವರಿಸಿದಾಗ ಬರುವ ಶಾಂತಿಯ ಕಾಂತಿಯೇ ಭಗವಂತನ ಅರ್ಚನೆಗೆ ದೊರೆತ ವರ.

ವಿವರಣೆ: ನಾನು ಕಾಲೇಜಿಗೆ ಕಾರಿನಲ್ಲಿ ಹೋಗುತ್ತಿದ್ದೆ. ನನ್ನ ಮುಂದೆಯೇ ಒಂದು ದೈತ್ಯ ಲಾರಿ. ಅದರ ಮುಂದೆ ಸ್ವಲ್ಪ ದೂರದಲ್ಲಿ, ಬಲಗಡೆಗೆ, ದಂಪತಿಗಳು ಸ್ಕೂಟರಿನಲ್ಲಿ ಹೋಗುತ್ತಿರುವುದು ಕಾಣುತ್ತಿತ್ತು. ಹಿಂದೆ ಕುಳಿತ ಹೆಂಡತಿಯ ಮಡಿಲಿನಲ್ಲಿ ಒಂದು ಪುಟ್ಟ ಮಗು. ಗಂಡ ಮುಂದಿದ್ದ ರಸ್ತೆಯ ಉಬ್ಬನ್ನು ಗಮನಿಸಲಿಲ್ಲವೋ ಅಥವಾ ವೇಗದಲ್ಲಿ ಅದನ್ನು ದಾಟಿಸಿದನೋ ತಿಳಿಯದು. ಹಿಂದೆ ಕುಳಿತಿದ್ದ ಹೆಂಡತಿ, ಮಕ್ಕಳು ಮೇಲಕ್ಕೆ ಹಾರಿದರು. ಅವನಿಗೂ ಆಯ ತಪ್ಪಿತು. ಗಂಡ, ಹೆಂಡತಿ ಇಬ್ಬರೂ ರಸ್ತೆಯ ಬಲಬದಿಗೆ ಇದ್ದ ವಿಭಜಕದ ಮೇಲೆ ಬಿದ್ದರು. ಮಗು ಹಾರಿ ರಸ್ತೆಯ ಮಧ್ಯೆಯೇ ಬಿತ್ತು. ಹಿಂದೆಯೇ ಇದ್ದ ಲಾರಿ ಅದರ ಮೇಲೆ ಸಾಗಿ ಹೋಯಿತು. ಇದಾದದ್ದು ಕ್ಷಣಾರ್ಧದಲ್ಲಿ. ನನ್ನ ಎದೆ ಹೌಹಾರಿತು. ತಕ್ಷಣ ಕಾರನ್ನು ರಸ್ತೆಯ ಮಧ್ಯೆಯೇ ನಿಲ್ಲಿಸಿದೆ. ಹಿಂದೆ ಬರುವ ವಾಹನಗಳು ನಿಲ್ಲಲೆಂಬ ವಿಚಾರ ನನ್ನದು. ಪರಮಾಶ್ಚರ್ಯ! ಮಗುವಿನ ಎರಡೂ ಬದಿಗೂ ಗಾಲಿಗಳು ಹಾದು ಹೋಗಿವೆ. ಪವಾಡಸದೃಶವಾಗಿ ಮಗುವಿಗೇನೂ ಆಗಿಲ್ಲ! ಆದರೆ ಆ ಕಡೆಗೆ ಬಿದ್ದ ತಾಯಿ, ತನ್ನ ತಲೆಯಿಂದ ರಕ್ತ ಸೋರುತ್ತಿರುವುದನ್ನು ಗಮನಿಸದೆ, ಅಯ್ಯೋ ಎಂದು ಧಾವಿಸಿ ಮಗುವಿನೆಡೆಗೆ ನುಗ್ಗಿ ಬಂದು ಅದನ್ನೆತ್ತಿಕೊಂಡು, ಎದೆಗೊತ್ತಿಕೊಂಡು 'ಕಂದಾ, ಕಂದಾ' ಎಂದು ಅಳುತ್ತ ರಸ್ತೆಯ ಮಧ್ಯದಲ್ಲೇ ಮೊಳಕಾಲೂರಿ ಕುಳಿತದ್ದನ್ನು ನಾನೆಂದಿಗೂ ಮರೆಯಲಾರೆ. ತಾಯಿಯ ಅನನ್ಯವಾದ, ಅದ್ವಿತೀಯವಾದ, ಮಾತೃಪ್ರೇಮದ ಉತ್ಕಟತೆಯ ದರ್ಶನ ಅದಾಗಿತ್ತು. ನನಗೆ ಕ್ಷಣಕಾಲ ಏನು ಮಾಡಲೂ ತೋಚಲಿಲ್ಲ, ಮಾತು ಬರಲಿಲ್ಲ, ಮೈ ಮರೆತಿತ್ತು.

ಇದು ನನಗಾದ ಧನ್ಯತೆಯ ಕ್ಷಣ. ಹೀಗೆ ಅನೇಕರಿಗೆ, ಪ್ರಪಂಚದಲ್ಲಿ ಪರಮಾದ್ಭುತವನ್ನು ಕಂಡಾಗ, ಅತ್ಯಂತ ದೊಡ್ಡವರ ದರ್ಶನವಾದಾಗ, ಹಿರಿದಾದ ಕ್ಷಣಗಳಿಗೆ ಸಾಕ್ಷಿಯಾದಾಗ ಬೆರಗು ಹುಟ್ಟುತ್ತದೆ. ಆ ವರ್ಣನಾತೀತ ಸಂದರ್ಭದಿಂದ ಮೈಮರೆತು, ಮಾತು ಮೂಕವಾಗುತ್ತದೆ. ಅದೊಂದು ಸುಂದರ, ಸೊಗಸಿನ ಕ್ಷಣ. ಹೀಗೆ ಬೆರಗಿನಿಂದ ಮನಸ್ಸು ನಿಶ್ಚಲವಾಗಿ ನಿಂತಾಗ ಶಾಂತಿ ಮೈದೋರುತ್ತದೆ. ಈ ಶಾಂತಿಯ ಕಾಂತಿ ವ್ಯಕ್ತಿಯನ್ನು ಆವರಿಸಿಕೊಳ್ಳುತ್ತದೆ.

ಕಗ್ಗ ಹೇಳುತ್ತದೆ, ಈ ಶಾಂತಿ, ಅದರಿಂದ ಬಂದ ಕಾಂತಿ ಇವುಗಳೇ ಪರಮಾತ್ಮನ ಅರ್ಚನೆಗೆ ದೊರೆತ ವರಗಳು. ಭಗವಂತನನ್ನು ಅತ್ಯಂತ ಶ್ರದ್ಧೆಯಿಂದ, ಆರ್ತತೆಯಿಂದ ಪೂಜಿಸಿದಾಗ ಬರುವ ಶಾಂತಿಗೆ ಸಮಾನಾದದ್ದು ಈ ಬಗೆಯ ಹಿರಿತನದ ನೋಟ ನೀಡುವ ಶಾಂತಿ.

ಪದಬಂಧ 4775


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶಿವನ ಬಳಿಯಿರಿಸಿದ ಮಣ್ಣಿನ ಬಾನಿ (3)
3.ಅತ್ಯಂತ ತಂಪು ಹವೆಯುಳ್ಳ ಭೂ ಭಾಗ (5)
5.ಬೆಸವಲ್ಲದ ಸಂಖ್ಯೆ (2)
6.ಶಾಂತಿ ಸಂಕೇತವೆಂದು ಭಾವಿಸಲಾದ ಪಕ್ಷಿ (4)
7.ಬೆಂಕಿಯನ್ನು ಆರಿಸುವ ಸಿಬ್ಬಂದಿ (7)
10.ರುಚಿಕಟ್ಟಾದ ಅಡುಗೆಯಿದು (4)
11.ನಾಯಕ ಸೇರಿರುವ ಸ್ವರ್ಗ (2)
13.ನೀರಿನ ಅಲೆ (5)
14.ಮಾಂಸವನ್ನು ಮಾರಿ ಜೀವಿಸುವವನು (3)

ಮೇಲಿಂದ ಕೆಳಕ್ಕೆ

1.ಮೈಮೇಲೆ ಅಲಂಕಾರಿಕವಾಗಿ ಬರೆಸಿಕೊಳ್ಳುವ ಚಿತ್ರ (2)
2.ನವರತ್ನಗಳಲ್ಲಿ ಕೆಂಪು ಬಣ್ಣವುಳ್ಳದ್ದು (3)
4.ನರಕಾಧಿಪನ ಹತ್ತಿರವಿರುವ ಜೋಡಿ (3)
5.ಮಡಿವಾಳ ಏಕೋ ತಿರುಗಿದ್ದಾನಲ್ಲಾ? (3)
6.ಪಾಕದ ನಂತರ ಕುಡಿದಿರುವ ಶರಬತ್ತು (3)
8.ಶಾಸನಗಳನ್ನು ರಚಿಸುವವನು (3)
9.ತಿನ್ನುವ ತುತ್ತು ತಿರುವುಮುರುವಾಯಿತಲ್ಲಾ? (3)
10.ಭೀಷ್ಮನ ಮತ್ತೊಂದು ಹೆಸರು (3)
11.ರಂಗಸ್ಥಳದ ಮೇಲೆ ಅಭಿನಯಿಸುವ ದೃಶ್ಯಪ್ರಬಂಧ (3)
12.ಇನ್ನೂ ಹಣ್ಣಾಗದಿರುವ ಫಲ (2)



4774ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಗರ 6.ತಾರಾತಿಗಡಿ 7.ರಭಸ 10.ಚಿತ್ತಪಲ್ಲಟ 15.ಕಾಮನೆ 16.ಗುಪ್ತಗಾಮಿನಿ 17.ರದನ
ಮೇಲಿಂದ ಕೆಳಕ್ಕೆ: 1.ಆಭರಣ 2.ರಕ್ಕಸ 3.ಪಾತಾಳ 4.ಅಂತಿಮ 5.ಜಡಿಮಳೆ 8.ಉತ್ತರ 9.ಚಲ್ಲಣ 11.ಅವಗುಣ 12.ಮನೆತನ 13.ಸಂಗಾತಿ 14.ಇನಿಯ 15.ಕಾತರ

ಸುಡೊಕು 5161

			4		3		6	
	9							5
			5		8	7		
		9		3				7
	3				6		5	
8		6		4		2		3
		5		2			3	4
3						5	9	
	8	2		5			7	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5160 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ವಿಧಾನ ಪರಿಷತ್ ಚುನಾವಣೆ: ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರ

33 ವರ್ಷದಿಂದ ಒಂದೇ ಕುಟುಂಬಕ್ಕೆ ಟಿಕೆಟ್!

ಪ್ರಜಾ ಮತ
ಜನತಂತ್ರದ ಹಬ್ಬ 2021

• ಕೆ.ಓಂಕಾರ ಮೂರ್ತಿ

ಮೈಸೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ಚುನಾವಣೆಯಲ್ಲಿ 33 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಒಂದೇ ಕುಟುಂಬಕ್ಕೆ ಟಿಕೆಟ್ ನೀಡಲಾಗುತ್ತಿದೆ.

1988ರಿಂದ ಒಂದು ಉಪಚುನಾವಣೆ ಸೇರಿ ಈ ಕ್ಷೇತ್ರಕ್ಕೆ ಆರು ಬಾರಿ ಚುನಾವಣೆಗಳು ನಡೆದಿವೆ. ತಿ.ನರಸೀಪುರದ ಎನ್.ರಾಚಯ್ಯ ಕುಟುಂಬ ಅಷ್ಟೂ ಚುನಾವಣೆಗಳಲ್ಲಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಕೊಂಡು, ಐದು ಬಾರಿ ಗೆಲುವು ದಾಖಲಿಸಿದೆ. ದಲಿತರಲ್ಲಿ 'ಎಡಗೈ' ಸಮುದಾಯಕ್ಕೆ ಸೇರಿದ ಈ ಕುಟುಂಬದ ಅಭ್ಯರ್ಥಿಗೆ 2009ರಲ್ಲಿ ಮಾತ್ರ ಸೋಲು ಎದುರಾಗಿತ್ತು.

ಟಿ.ಎನ್.ನರಸಿಂಹಮೂರ್ತಿ, ಸಿ.ರಮೇಶ್, ಎನ್.ಮಂಜುನಾಥ್, ಆರ್.ಧರ್ಮಸೇನ ಈ ಚುನಾವಣೆಗಳಲ್ಲಿ ಜಯ ಗಳಿಸಿದ್ದಾರೆ. ವಿಧಾನ ಪರಿಷತ್ ಹಾಲಿ ಸದಸ್ಯರೂ ಆಗಿರುವ ಧರ್ಮಸೇನ ಎರಡು ಬಾರಿ ಆಯ್ಕೆಯಾಗಿದ್ದಾರೆ. ಮೂರನೇ ಬಾರಿ ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾರೆ.

ಮೊದಲ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಸಂಸದರಾಗಿದ್ದ ಎನ್.ರಾಚಯ್ಯ ಅವರ ಮೂರನೇ ಹಾಗೂ ಕೊನೆಯ ತಮ್ಮ ಟಿ.ಎನ್.ನರಸಿಂಹಮೂರ್ತಿ. ರಾಚಯ್ಯ ಅವರ ಎರಡನೇ ತಮ್ಮ ಚಿಕ್ಕಸಿದ್ದಯ್ಯ ಅವರ ಪುತ್ರ ಸಿ.ರಮೇಶ್. ನರಸಿಂಹಮೂರ್ತಿ ಪುತ್ರ ಎನ್.ಮಂಜುನಾಥ್. ಧರ್ಮಸೇನ ಅವರು ಎನ್.ರಾಚಯ್ಯ ಅವರ ಪುತ್ರ.

'ನಮ್ಮ ಕುಟುಂಬದ ಮೇಲೆ ಕಾಂಗ್ರೆಸ್ ಪಕ್ಷ, ನಾಯಕರು, ಜನರು ಇಟ್ಟಿರುವ ಪ್ರೀತಿ, ವಿಶ್ವಾಸಕ್ಕೆ ಈ ಫಲಿತಾಂಶವೇ ಸಾಕ್ಷಿ. ಎಡಗೈ ಸಮುದಾಯಕ್ಕೂ ಅವಕಾಶ ಸಿಗಬೇಕೆಂದು ಗೆಲ್ಲಿಸಿದ್ದಾರೆ. ನಾನು ಎರಡು ಬಾರಿ ಗೆಲ್ಲಲು ಸಿದ್ದರಾಮಯ್ಯ ಅವರ ವರ್ಚಸ್ಸು ಕೂಡ ಕಾರಣ' ಎಂದು ಧರ್ಮಸೇನ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಒಮ್ಮೆ 'ಕೈ'ತಪ್ಪಿತ್ತು: 2009ರಲ್ಲಿ ಮಾತ್ರ ಕ್ಷೇತ್ರವನ್ನು ಬಿಜೆಪಿ ತನ್ನ ತೆಕ್ಕೆಗೆ ಹಾಕಿಕೊಂಡಿತ್ತು. ಬಿಜೆಪಿಯಿಂದ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಹಾಗೂ ಜೆಡಿಎಸ್‌ನಿಂದ ಸಂದೇಶ್ ನಾಗರಾಜ್ ಗೆದ್ದಿದ್ದರು. ಸತತ ಎರಡನೇ ಬಾರಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಕೊಂಡಿದ್ದ ಎನ್.ಮಂಜುನಾಥ್ ಪರಾಭವಗೊಂಡರು. ಆದರೆ, ಕೆಜೆಪಿ ಸೇರಲು ಪ್ರೊ.ಮಲ್ಲಿಕಾರ್ಜುನಪ್ಪ ರಾಜೀನಾಮೆ ನೀಡಿದ್ದರಿಂದ 2013ರಲ್ಲಿ ಉಪಚುನಾವಣೆ ಎದುರಾಯಿತು. ಆಗ ಧರ್ಮಸೇನ ಮೊದಲ ಬಾರಿ ವಿಧಾನ ಪರಿಷತ್ ಪ್ರವೇಶಿಸಿದರು.

ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದಲ್ಲಿ ಗೆದ್ದವರು

ವರ್ಷ	ಹೆಸರು	ಪಕ್ಷ
1988	ಟಿ.ಎನ್.ನರಸಿಂಹಮೂರ್ತಿ	ಕಾಂಗ್ರೆಸ್
	ವಿ.ಎಚ್.ಗೌಡ	ಜನತಾ ಪಕ್ಷ
1997	ಸಿ.ರಮೇಶ್	ಕಾಂಗ್ರೆಸ್
	ವೈ.ಮಹೇಶ್	ಜನತಾದಳ
2003	ಎನ್.ಮಂಜುನಾಥ್	ಕಾಂಗ್ರೆಸ್
	ಚಿದಾನಂದ	ಜೆಡಿಎಸ್
2009	ಸಂದೇಶ್ ನಾಗರಾಜ	ಜೆಡಿಎಸ್
	ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ	ಬಿಜೆಪಿ
2013	ಆರ್.ಧರ್ಮಸೇನ	ಕಾಂಗ್ರೆಸ್ (ಉಪಚುನಾವಣೆ)
2016	ಆರ್.ಧರ್ಮಸೇನ	ಕಾಂಗ್ರೆಸ್
	ಸಂದೇಶ್ ನಾಗರಾಜ	ಜೆಡಿಎಸ್

ಮುಖ್ಯಾಂಶಗಳು

- ತಿ.ನರಸೀಪುರದ ಎನ್.ರಾಚಯ್ಯ ಕುಟುಂಬ
- 'ಎಡಗೈ' ಸಮುದಾಯಕ್ಕೆ ಅವಕಾಶ
- ಆರ್.ಧರ್ಮಸೇನ ಎರಡು ಬಾರಿ ಆಯ್ಕೆ



2009ರಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಚಿಕ್ಕಪ್ಪನ ಪುತ್ರ ಮಂಜುನಾಥ್ ಆಗ ಸೋತಿದ್ದರು. ಉಪಚುನಾವಣೆಯಲ್ಲಿ ಗೆದ್ದು ಮತ್ತೆ ಕ್ಷೇತ್ರ ತೆಕ್ಕೆಗೆ ಪಡೆದೆವು

ಆರ್.ಧರ್ಮಸೇನ, ವಿಧಾನ ಪರಿಷತ್ ಸದಸ್ಯ, ಕಾಂಗ್ರೆಸ್

ವಿಧಾನ ಪರಿಷತ್ತಿಗೆ ಸ್ಪರ್ಧಿಸುವುದಿಲ್ಲ: ವಿಜಯಸಿಂಗ್



ವಿಜಯಸಿಂಗ್

ಬೀದರ್: ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ತಾವು ಮತ್ತೆ ಸ್ಪರ್ಧಿಸುವುದಿಲ್ಲ ಎಂದು ಈ ಕ್ಷೇತ್ರದ ಹಾಲಿ ಸದಸ್ಯ ಕಾಂಗ್ರೆಸ್‌ನ ವಿಜಯಸಿಂಗ್ ಹೇಳಿದರು.

ಕಳೆದ ಚುನಾವಣೆಯಲ್ಲಿ ಬಿಜೆಪಿಯ ಸಂಜಯ ಖೇಣಿ ಅವರನ್ನು ಪರಾಭವಗೊಳಿಸಿ, ಮೊದಲ ಬಾರಿಗೆ ಪರಿಷತ್‌ಗೆ ಆಯ್ಕೆಯಾಗಿದ್ದರು.

'ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸದಿರಲು ನಿರ್ಧರಿಸಿದ್ದೇನೆ. ಬೀದರ್ ಜಿಲ್ಲೆಯ ರಾಜಕೀಯದಲ್ಲಿಯೇ ಮುಂದುವರೆಯುತ್ತಿದ್ದು, ಇಲ್ಲಿಯ ಒಂದು ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸುವ ಬಯಕೆ ಹೊಂದಿದ್ದೇನೆ. ಯಾವ ಕ್ಷೇತ್ರ ಎನ್ನುವುದನ್ನು ನಂತರ ತಿಳಿಸುವೆ' ಎಂದು ವಿಜಯಸಿಂಗ್ ಪ್ರತಿಕ್ರಿಯಿಸಿದರು.

'ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ವಿಧಾನಸಭಾ ಸದಸ್ಯರಿಗೆ ಹೆಚ್ಚಿನ ಅವಕಾಶಗಳು ಇವೆ. ಇದರಿಂದ ಒಂದು ವಿಧಾನಸಭಾ ಕ್ಷೇತ್ರಕ್ಕೆ ಸೀಮಿತವಾಗಿ ಇದ್ದುಕೊಂಡು ಹೆಚ್ಚಿನ ಕೆಲಸಗಳನ್ನು ಮಾಡಲು ಸಾಧ್ಯವಿದೆ' ಎಂದರು.

ಸುದ್ದಿ 2 ನಿಮಿಷ

ಡಿಕೆಶಿಗೆ ಕಾದು 'ಪ್ರಮಾಣ' ತಪ್ಪಿಸಿಕೊಂಡ ಮಾನೆ!

ಬೆಂಗಳೂರು: ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಗೆದ್ದಿರುವ ಶ್ರೀನಿವಾಸ ಮಾನೆ ಅವರು ತಮ್ಮ ಪಕ್ಷದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗಾಗಿ ಕಾದು, ಶಾಸಕರಾಗಿ ಪ್ರಮಾಣ ಸ್ವೀಕರಿಸುವುದನ್ನು ತಪ್ಪಿಸಿಕೊಂಡು ನಿರಾಸೆಗೆ ಒಳಗಾದರು.

ಗುರುವಾರ ಬೆಳಿಗ್ಗೆ 11 ಕ್ಕೆ ಪ್ರಮಾಣ ಸ್ವೀಕರಿಸಲು ಮಾನೆ ಬಂದು ಕುಳಿತಿದ್ದರು. ಆದರೆ, ಅವರ ಪಕ್ಷದ ಅಧ್ಯಕ್ಷರು ಮಾತ್ರ ಸರಿಯಾದ ಸಮಯಕ್ಕೆ ವಿಧಾನಸೌಧಕ್ಕೆ ಬರಲೇ ಇಲ್ಲ. ಇದರಿಂದ ವಿಚಲಿತರಾದ ಮಾನೆ ಕಾರ್ಯಕ್ರಮ ಆರಂಭ ಆಗುತ್ತಿದ್ದಂತೆ ಹೊರಹೋದರು. ಬಹಳ ಹೊತ್ತು ಬರಲಿಲ್ಲ. ಇದರಿಂದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನೂ ಕಾಯುವಂತೆ ಮಾಡಿ, ಅವರ ಬೇಸರಕ್ಕೂ ಕಾರಣರಾದರು. ಸಿಂದಗಿಯಿಂದ ಗೆದ್ದಿರುವ ರಮೇಶ ಭೂಸನೂರು ಅವರಿಗೆ ಕಾಗೇರಿ ಪ್ರಮಾಣ ಬೋಧಿಸಿದರು.

ಆ ಬಳಿಕ ಮಾನೆ ಅವರು ಬರಬಹುದು ಎಂದು ಕಾಗೇರಿ ಕಾದರು. 'ಎಲ್ಲಾದರೂ ಇದ್ದರೆ ನೋಡಿ ಮಾನೆಯವರನ್ನು ಕರೆತನ್ನಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು. ಕಾರಿಡಾರ್ ಮತ್ತಿತರ ಕಡೆಗಳಲ್ಲಿ ಅಧಿಕಾರಿಗಳು ಹುಡುಕಿದಾಗ, ಅವರು ಎಲ್ಲೂ ಸಿಗಲಿಲ್ಲ. ನಿಯಮ ಬದ್ಧವಾಗಿ ಮಾನೆ ಅವರ ಹೆಸರನ್ನು ಕೂಗಿದಾಗಲು ಅವರು ಬರದ ಕಾರಣ, ಕಾಗೇರಿ ತಮ್ಮ ಬೇರೆ ನಿಗದಿತ ಕಾರ್ಯಕ್ರಮಕ್ಕೆ ತೆರಳಿದರು.

ಆ ಬಳಿಕ ಅಲ್ಲಿಗೆ ಬಂದ ಶ್ರೀನಿವಾಸ ಮಾನೆ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ಕಾರ್ಯಕ್ರಮದ ಸಮಯ 11.30 ಕ್ಕೆ ನಿಗದಿಯಾಗಿತ್ತು. ಅವಸರ ಮಾಡಿದ ಸಭಾಧ್ಯಕ್ಷರು ತಮಗೆ ಪ್ರಮಾಣ ಬೋಧಿಸಲಿಲ್ಲ' ಎಂದು ದೂರಿದರು. ಮೂಲಗಳ ಪ್ರಕಾರ, ಮಾನೆ ಅವರು ಡಿ.ಕೆ.ಶಿವಕುಮಾರ್ ಅವರಿಗಾಗಿ ಕಾಯುತ್ತಿದ್ದರು. ಅವರು ಸಕಾಲಕ್ಕೆ ಬರದ ಕಾರಣ ಹೊರಹೋದರು.

ಈ ವಿಷಯವಾಗಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, 'ಟ್ರಾಫಿಕ್‌ನಿಂದಾಗಿ ಬರುವುದು ತಡವಾಯಿತು. ಸಭಾಧ್ಯಕ್ಷರು ಅವಸರ ಮಾಡಬಾರದಾಗಿತ್ತು. ಗೌರವ ಕೊಟ್ಟು ಸಭಾಧ್ಯಕ್ಷರ ಕಚೇರಿಗೆ ಹೋಗಿ ಬೇರೊಂದು ಸಮಯ ಕೇಳುತ್ತೇವೆ' ಎಂದರು.



ಸಹಕಾರ ಸಪ್ತಾಹ ಮುಂದೂಡಿಕೆ

ಬೆಂಗಳೂರು: ಇದೇ 14ರಿಂದ ನಡೆಯಬೇಕಿದ್ದ ಸಹಕಾರ ಸಪ್ತಾಹವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

'ಸ್ಥಳೀಯ ಸಂಸ್ಥೆಗಳಿಂದ 25 ವಿಧಾನ ಪರಿಷತ್ ಸ್ಥಾನಗಳಿಗೆ ಡಿ. 10ರಂದು ಚುನಾವಣೆ ನಿಗದಿಯಾಗಿದ್ದು, ನೀತಿ ಸಂಹಿತೆ ಜಾರಿಯಾಗಿದೆ. ಹೀಗಾಗಿ, ಸಹಕಾರ ಸಪ್ತಾಹವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ನಂತರ ತಿಳಿಸಲಾಗುವುದು' ಎಂದು ಅವರು ಹೇಳಿದ್ದಾರೆ.

ಪ್ರತಿ ವರ್ಷ ನ. 14ರಿಂದ ಸಹಕಾರ ಸಪ್ತಾಹ ಹಮ್ಮಿಕೊಳ್ಳಲಾಗುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಏಳು ದಿನ ಸಪ್ತಾಹ ಹಮ್ಮಿಕೊಳ್ಳುವ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹನೀಯರಿಗೆ 'ಸಹಕಾರ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಈ ವರ್ಷ ಕೂಡ ಬೆಂಗಳೂರು ಮತ್ತು ವಿವಿಧ ಜಿಲ್ಲೆಗಳಲ್ಲಿ ಸಹಕಾರ ಸಪ್ತಾಹ ಹಮ್ಮಿಕೊಳ್ಳಲು ನಿರ್ಧರಿಸಲಾಗಿತ್ತು.

ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆ

ಶ್ರೀಕಿ: ₹6,000 ಕೋಟಿ ದೋಚಿರುವ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಹಗರಣದಲ್ಲಿ ಭಾಗಿಯಾಗಿರುವ ತಂಡವೇ ಜನ್‌ಧನ್ ಖಾತೆಗಳಿಂದ ತಲಾ ₹ 2ರಂತೆ ₹ 6,000 ಕೋಟಿಯಷ್ಟು ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಮಾಹಿತಿ ಇದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಇಷ್ಟೊಂದು ದೊಡ್ಡ ಮೊತ್ತದ ಹಣದ ಅಕ್ರಮ ವರ್ಗಾವಣೆ ಹಿಂದೆ ಯಾರಿದ್ದಾರೆ ಎಂಬ ಮಾಹಿತಿ ಜನರಿಗೆ ತಿಳಿಯಬೇಕಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಹುಶಃ ಈ ಎಲ್ಲ ಮಾಹಿತಿ ಚೆನ್ನಾಗಿ ತಿಳಿಸಿದೆ. ಅವರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರಬಹುದು' ಎಂದರು.

ಬಿಟ್‌ಕಾಯಿನ್ ಹಗರಣದ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುತ್ತಿದೆ. ಆ ಕಲ್ಲು ಯಾರಿಗೆ ಬೀಳುತ್ತದೆ? ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರ ಸಮೀಪವರ್ತಿಗಳ ಕೆಲವು ಹೆಸರುಗಳು ಈಗಾಗಲೇ ಬಹಿರಂಗವಾಗಿವೆ. ಆದರೆ, ಕಾಂಗ್ರೆಸ್ ನಾಯಕರು ಬಿಜೆಪಿಯವರ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಹೇಳಿದರು.

ಸರ್ಕಾರ ಏನು ಮಾಡುತ್ತಿದೆ?: ರಾಜ್ಯದಲ್ಲಿ ನಿರಂತರವಾಗಿ ಮಳೆಯಾಗುತ್ತಿದೆ. ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಂತ್ರಿಗಳು, ಅಧಿಕಾರಿಗಳು ಏನು ಮಾಡುತ್ತಿದ್ದಾರೋ ತಿಳಿಯದು. ರಾಜ್ಯದಲ್ಲಿ ಸರ್ಕಾರ ಇದೆಯೋ? ಇಲ್ಲವೋ? ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಟೀಕಿಸಿದರು.

'ಹಗರಣದಲ್ಲಿ ಸಿ.ಎಂ. ಹೆಸರು ತರುತ್ತಿರುವ ವಿರೋಧ ಪಕ್ಷ'



ವಿಜಯೇಂದ್ರ



ರಾಘವೇಂದ್ರ

ದಾವಣಗೆರೆ: ಬಿಟ್ ಕಾಯಿನ್ ವಿಚಾರದಲ್ಲಿ ಮುಖ್ಯಮಂತ್ರಿ ಹೆಸರನ್ನು ವಿರೋಧ ಪಕ್ಷದ ನಾಯಕರು ವಿನಾಕಾರಣ ಎಳೆದು ತರುತ್ತಿದ್ದಾರೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಾವುದೇ ತನಿಖೆಗೂ ಸಿದ್ಧವಿರುವುದಾಗಿ ಸ್ವತಃ ಮುಖ್ಯಮಂತ್ರಿಯೇ ದೆಹಲಿಯಲ್ಲಿ ಹೇಳಿಕೆ ನೀಡಿದ್ದು, ಈ ಪ್ರಕರಣದಲ್ಲಿ ಎಷ್ಟೇ ದೊಡ್ಡ ವ್ಯಕ್ತಿಗಳಾಗಿದ್ದರೂ ಅದನ್ನು ಮುಚ್ಚಿಡುವ ಪ್ರಯತ್ನ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಹೀಗಿದ್ದರೂ ಕಾಂಗ್ರೆಸ್ಸಿಗರು ವಿನಾಕಾರಣ ಸಿ.ಎಂ. ಹೆಸರು ಪ್ರಸ್ತಾಪಿಸುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ಸಿನ ನಲಪಾಡ್ ಪುತ್ರ, ಅದೇ ಪಕ್ಷದ ಬೇರೆ ಮುಖಂಡರ ಹೆಸರುಗಳು ಕೇಳಿಬರುತ್ತಿವೆ. ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿಕೊಂಡು ನೋಡಿಕೊಳ್ಳುವ ಪರಿಸ್ಥಿತಿ ಕಾಂಗ್ರೆಸ್ ನಾಯಕರದ್ದಾಗಿದೆ ಎಂದು ಹೇಳಿದರು.

'ನಳಿನ್ ಕುಮಾರ್ ಕಟೀಲ್ ಅವರನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ. ಕಟೀಲು ಯಶಸ್ವಿಯಾಗಿ ತಮ್ಮ ಅವಧಿ ಪೂರ್ಣಗೊಳಿಸುತ್ತಾರೆ' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಬಿಟ್ ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿದಂತೆ 2–3 ವರ್ಷಗಳಿಂದ ತನಿಖೆ ನಡೆಯಿತ್ತಿದೆ. ಈಗ ಒಂದು ಹಂತಕ್ಕೆ ತನಿಖೆ ತಲುಪಿದೆ. ಇಂಥ ಸಂದರ್ಭದಲ್ಲಿ ನಾವು ಹೇಳಿಕೆ ನೀಡುವುದು ಸರಿಯಲ್ಲ. ಗಾಳಿಯಲ್ಲಿ ಗುಂಡು ಹೊಡೆಯುವ ಕೆಲಸ ಮಾಡುವ ಮೂಲಕ ವಿರೋಧ ಪಕ್ಷಗಳು ಜನರಲ್ಲಿ, ಮತದಾರರಲ್ಲಿ ತಪ್ಪು ಕಲ್ಪನೆ ತುಂಬುವ ಕೆಲಸ ಮಾಡುತ್ತಿವೆ. ಮೇಲ್ಮನೆ ಚುನಾವಣೆ ಸಂದರ್ಭದಲ್ಲಿ ಇದೆಲ್ಲ ಸರಿಯಲ್ಲ' ಎಂದು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಪ್ರತಿಕ್ರಿಯಿಸಿದರು.

ಶ್ರೀಕೃಷ್ಣಗೆ ಜಾಮೀನು ಸಿಕ್ಕಿದ್ದು ಹೇಗೆ?

ಒಂದನೇ ಪುಟದಿಂದ

ಜೈಲಿನಿಂದ ಹೊರಬಂದ ಆರೋಪಿ ಮಾಧ್ಯಮದವರ ಜತೆ ಮಾತನಾಡಿದ್ದಾನೆ. ನಂತರ ಆಟೊ ಹತ್ತಿ ಹೋಗುತ್ತಾನೆ. ಇದೆಲ್ಲ ನೋಡಿದರೆ ಪ್ರಕರಣದ ಹಿಂದೆ ಯಾರೋ ಇರುವುದು ಸ್ಪಷ್ಟ ಎಂದರು.

ಹಗರಣದಲ್ಲಿ ಪೊಲೀಸ್ ಅಧಿಕಾರಿಗಳು, ರಾಜಕಾರಣಿಗಳು ಶಾಮೀಲಾಗಿದ್ದಾರೆ ಎನ್ನುವ ಮಾತೂ ಇದೆ. ಪದೇ ಪದೇ ಹೀಗಾದರೆ ಜನರು ಯಾರನ್ನು ನಂಬಬೇಕು? ಒಬ್ಬರಿಂದ ಜನರು ಎಲ್ಲ ರಾಜಕಾರಿಣಿಗಳ ಕಡೆಗೂ ಕೈ ತೋರಿಸುವಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಆರೋಪ ನಿರ್ಲಕ್ಷಿಸಿ: ಮೋದಿ'



ನವದೆಹಲಿಯಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಮಾಯಣ ಕುರಿತ ಪುಸ್ತಕವೊಂದನ್ನು ನೀಡಿದರು.

ಒಂದನೇ ಪುಟದಿಂದ

ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಪ್ರಗತಿ ಬಗ್ಗೆ ಚರ್ಚಿಸಿದ ಪ್ರಧಾನಿಯವರು, ಗ್ರಾಮೀಣ ಭಾಗದ ಅಭಿವೃದ್ಧಿಗಾಗಿ 'ಅಮೃತ' ಯೋಜನೆಯನ್ನು ಮತ್ತಷ್ಟು ಸುಧಾರಣೆಯೊಂದಿಗೆ ಜಾರಿಗೊಳಿಸಲು ಸೂಚಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಸಂಯೋಜನೆಗೊಳಿಸಿ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು ಎಂದು ಮುಖ್ಯಮಂತ್ರಿ ಒತ್ತಿಹೇಳಿದರು.

ಗ್ರಾಮೀಣ ಬಡವರಿಗೆ ಸೂರು ಒದಗಿಸುವ ವಸತಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಪ್ರಧಾನಮಂತ್ರಿ ಆವಾಸ್ ಯೋಜನೆಯನ್ನು ಸಂಯೋಜಿಸುವ ಮೂಲಕ ಗ್ರಾಮೀಣರಿಗೆ ಅನುಕೂಲ ಕಲ್ಪಿಸಬೇಕು. ಕೌಶಲ್ಯ ಅಭಿವೃದ್ಧಿ, ಸ್ವ-ಸಹಾಯ ಸಂಘಗಳ ಸಬಲೀಕರಣಕ್ಕೆ ಆದ್ಯತೆ ನೀಡುವ ಕುರಿತೂ ಚರ್ಚಿಸಲಾಯಿತು ಎಂದು ಅವರು ತಿಳಿಸಿದರು.

ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಗ್ರಾಮೀಣ ಹೆಣ್ಣು ಮಕ್ಕಳಿಗೆ ಬ್ಯಾಂಕ್‌ಗಳಿಂದ ಸುಲಭವಾಗಿ ಸಾಲ ಸೌಲಭ್ಯ ದೊರೆಯುವಂತಾಗಲು ಕ್ರಮ ಕೈಗೊಳ್ಳುವುದಾಗಿ ಪ್ರಧಾನಿ ಭರವಸೆ ನೀಡಿದ್ದಾರೆ ಎಂದು ಅವರು ಹೇಳಿದರು.

ಡಿಸೆಂಬರ್‌ನಲ್ಲಿ ನಡೆಯಲಿರುವ ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲು ಪ್ರಧಾನಿಯವರಿಗೆ ಆಹ್ವಾನ ನೀಡಲಾಗಿದೆ. ಬೆಂಗಳೂರು ಉಪ ನಗರ ರೈಲು ಯೋಜನೆಯ ಅಡಿಗಲ್ಲು, ಅಂಬೇಡ್ಕರ್ ಸ್ಕೂಲ್ ಆಫ್ ಇಕನಾಮಿಕ್ಸ್ ಹಾಗೂ ಉನ್ನತೀಕರಿಸಿದ ಐಟಿಐಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರಧಾನಿ ಭಾಗವಹಿಸಲಿದ್ದಾರೆ ಎಂದು ಬೊಮ್ಮಾಯಿ ತಿಳಿಸಿದರು.

ತನಿಖೆ ನಡೆದರೆ ಕಾಂಗ್ರೆಸ್ ಬಣ್ಣ ಬಯಲು: ಪ್ರತಾಪ ಸಿಂಹ

ಪ್ರಜಾವಾಣಿ ವಾರ್ತೆ



ಮೈಸೂರು: 'ಬಿಟ್ ಕಾಯಿನ್ ಹಗರಣದಲ್ಲಿ ಕಾಂಗ್ರೆಸ್‌ನ ಇಬ್ಬರು ಪ್ರಮುಖ ನಾಯಕರ ಮಕ್ಕಳ ಹೆಸರು ಉಲ್ಲೇಖವಾಗಿದೆ. ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದರೆ ಅಪ್ಪಂದಿರು ಹಾಗೂ ಆ ಪಕ್ಷದ ಇತರ ನಾಯಕರ ಹೆಸರು ಬಹಿರಂಗಪಡಿಸಿದರೆ ಬಣ್ಣ ಬಯಲಾಗುತ್ತದೆ' ಎಂದು ಸಂಸದ ಪ್ರತಾಪ ಸಿಂಹ ಪ್ರತಿಪಾದಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, '13 ಬಾರಿ ಬಜೆಟ್ ಮಂಡಿಸಿರುವ ಆರ್ಥಿಕ ತಜ್ಞ ಸಿದ್ದರಾಮಯ್ಯ ಅವರೇ, ಬಿಟ್ ಕಾಯಿನ್ ಎಂದರೇನು? ಅದರ ವ್ಯವಹಾರ ಹೇಗೆ ನಡೆಯುತ್ತದೆ? ವಹಿವಾಟು ಕ್ರಮ ಹೇಗೆ? ಏಜೆನ್ಸಿ ಎಲ್ಲಿದೆ ಎಂಬುದನ್ನು ತಿಳಿಸಿಕೊಡಿ' ಎಂದು ಆಗ್ರಹಿಸಿದರು.

'ಕಾಂಗ್ರೆಸ್ ಮುಖಂಡರು ಬಿಜೆಪಿ ವಿರುದ್ಧ ಆರೋಪಿಸುತ್ತಾ ಮಾಧ್ಯಮಗಳ ಮೂಲಕ ನಿರೀಕ್ಷಣಾ ಜಾಮೀನು ಪಡೆಯುತ್ತಿದ್ದಾರೆ. 2023ಕ್ಕೂ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗುತ್ತಾರೆ ಎಂಬುದು ಕಾಂಗ್ರೆಸ್‌ಗೆ ಗೊತ್ತಾಗಿದೆ. ಆ ಭಯದಿಂದ ಊಹಾಪೋಹ ಹುಟ್ಟುಹಾಕುತ್ತಿದ್ದಾರೆ' ಎಂದು ನುಡಿದರು.

'ನೈತಿಕತೆ ಪಾಠ ಮಾಡಬೇಡಿ'

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಒನಕೆ ಓಬವ್ವನ ಜಯಂತಿ ಆಚರಿಸಲು ತೀರ್ಮಾನ ಕೈಗೊಂಡು ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಆದರೆ, ಮೈಸೂರು ಮಹಾರಾಜರಿಗೆ ಅನ್ಯಾಯ ಮಾಡಿದ, ಓಬವ್ವ ಹಾಗೂ ಮದಕರಿ ನಾಯಕನನ್ನು ಕೊಂದ ಹೈದರಾಲಿ ಹಾಗೂ ಆತನ ಮಗ ಟಿಪ್ಪು ಸುಲ್ತಾನ್ ಜಯಂತಿ ಮಾಡಿದವರು ಸಿದ್ದರಾಮಯ್ಯ. ದಯವಿಟ್ಟು ನಮ್ಮ ಮುಖ್ಯಮಂತ್ರಿಗೆ ನೈತಿಕತೆಯ ಪಾಠ ಹೇಳಬೇಡಿ. ಸಿದ್ದರಾಮಯ್ಯ ಅವರಿಗೆ ಈಗ ಅಧಿಕಾರ ಮುಖ್ಯವಾಗಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲಿಸಿದವರನ್ನೇ ರಾಜಕೀಯ ಅನಿವಾರ್ಯತೆಯಿಂದ ಹೊಗಳುತ್ತಿದ್ದಾರೆ' ಎಂದು ಪ್ರತಾಪ ಸಿಂಹ ಹೇಳಿದರು.

ಪಕ್ಷದ ಘನತೆ ಹಾಳು ಮಾಡುವ ಹುನ್ನಾರ – ಡಿಕೆಶಿ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಬೆಂಗಳೂರು: 'ಹಳೇ ಪ್ರಕರಣ ಇಟ್ಟುಕೊಂಡು ಕಾಂಗ್ರೆಸ್ ನಾಯಕರ ಘನತೆ ಹಾಳು ಮಾಡುವ ಹುನ್ನಾರ ನಡೆಯುತ್ತಿದೆ. ಈ ರೀತಿ ಕಾಂಗ್ರೆಸ್ ನಾಯಕರ ಘನತೆಗೆ ಧಕ್ಕೆ ತರಲು ಸಾಧ್ಯವಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಬಿಟ್‌ಕಾಯಿನ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರ ಮಕ್ಕಳು ಭಾಗಿಯಾಗಿದ್ದರೆ ತಕ್ಷಣ ಬಂಧಿಸಲಿ. ಅವರು ಯಾವ ರೀತಿ ಬಿಟ್ ಕಾಯಿನ್ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದೂ ಹೇಳಲಿ' ಎಂದರು.

'ಆರೋಪಿಯ ಸ್ನೇಹಿತನಾಗಿದ್ದ ಮಾತ್ರಕ್ಕೆ ಪ್ರಕರಣದಲ್ಲಿ ಸಿಲುಕಿಸಲು ಸಾಧ್ಯವಿಲ್ಲ. ಇದು ರಾಜ್ಯದ ಘನತೆಯ ವಿಚಾರ. ಹೀಗಾಗಿ, ಸತ್ಯಾಂಶ ಹೊರಬರಬೇಕಿದೆ' ಎಂದರು.

'ಪ್ರಧಾನಿಗೆ ಜನಸಾಮಾನ್ಯ ಬರೆದ ಪತ್ರವನ್ನು ಓದಿದ್ದೇನೆ. ಅದರಲ್ಲಿ ಬಿಜೆಪಿ ನಾಯಕರ ಹೆಸರುಗಳಿವೆ. ಅದು ನಿಜವೇ, ಪ್ರಕರಣದಲ್ಲಿ ಭಾಗಿಯಾಗಿದ್ದಾರೆಯೇ ಎಂದು ಬಹಿರಂಗಪಡಿಸಲಿ. ಆರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳುತ್ತಾರೆ. ಈ ವಿಚಾರವನ್ನು ಜನರ ಮುಂದಿಡುವುದು ಸರ್ಕಾರದ ಜವಾಬ್ದಾರಿ' ಎಂದರು.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ಆರೋಪ: ಪ್ರಭಾರ ಪ್ರಾಂಶುಪಾಲ ವಿರುದ್ಧ ಪ್ರಕರಣ

ಯಾದಗಿರಿ: ತಾಲ್ಲೂಕಿನ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯೊಂದರ ವಿದ್ಯಾರ್ಥಿನಿಗೆ ಆಂತರಿಕ ಅಂಕಗಳನ್ನು ಹೆಚ್ಚು ನೀಡುವುದಾಗಿ ಆಮಿಷವೊಡ್ಡಿ ಆಕೆಯ ಕೈಹಿಡಿದು ಎಳೆದಾಡಿ, ಲೈಂಗಿಕ ದೌರ್ಜನ್ಯವೆಸಗಲು ಪ್ರಯತ್ನಿಸಿದ ಆರೋಪದ ಮೇಲೆ ಶಾಲೆಯ ಪ್ರಭಾರ ಪ್ರಾಂಶುಪಾಲ ಹಯ್ಯಾಳಪ್ಪ ಮರೆಪ್ಪ ಜಾಗೀರದಾರ ವಿರುದ್ಧ ಗುರುವಾರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಲ್ಲಣ್ಣ ದೇಸಾಯಿ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಯಾದಗಿರಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಶೀಘ್ರವೇ ಆರೋಪಿಯನ್ನು ಬಂಧಿಸುತ್ತೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಿ.ಬಿ.ವೇದಮೂರ್ತಿ ತಿಳಿಸಿದ್ದಾರೆ.

'ವಾರ್ಡನ್ ಬಸವಣ್ಣಪ್ಪ ಮತ್ತು ಪ್ರಭಾರ ಪ್ರಾಂಶುಪಾಲ ಹಯ್ಯಾಳಪ್ಪ ಅಮಾನತಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕರಿಗೆ ವರದಿ ಸಲ್ಲಿಸಲಾಗಿದೆ' ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಎಸ್.ಎಸ್.ಚನ್ನಬಸವ ತಿಳಿಸಿದ್ದಾರೆ.

'ಬಿಟ್‌ಕಾಯಿನ್: ಕಾಂಗ್ರೆಸ್ ನಾಯಕರಿಂದ ಗೊಂದಲ ಸೃಷ್ಟಿ'

ಪ್ರಜಾವಾಣಿ ವಾರ್ತೆ



ಆರಗ ಜ್ಞಾನೇಂದ್ರ

ಬೆಂಗಳೂರು: 'ಬಿಟ್‌ಕಾಯಿನ್ ವಿಷಯದಲ್ಲಿ ಕಾಂಗ್ರೆಸ್ ನಾಯಕರು ಅನಗತ್ಯವಾಗಿ ಗೊಂದಲ ಉಂಟು ಮಾಡುತ್ತಿದ್ದಾರೆ. ಅವರ ಬಳಿ ಸೂಕ್ತ ದಾಖಲೆಗಳಿದ್ದರೆ ತನಿಖಾಧಿಕಾರಿಗಳಿಗೆ ನೀಡಲಿ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮ ಚೀಲದಲ್ಲಿ ಹಾವಿದೆ. ಹೊರ ತೆಗೆಯುತ್ತೇವೆ ಎಂದು ಕಾಂಗ್ರೆಸ್ ನಾಯಕರು ಆಧಾರಹಿತವಾಗಿ ಮಾತನಾಡದೆ ಅದನ್ನು ಧೈರ್ಯದಿಂದ ಹೊರಗೆ ಬಿಡಲಿ. ಆಗ ಅದು ಯಾರನ್ನು ಕಚ್ಚುತ್ತದೆ ನೋಡೋಣ' ಎಂದರು.

'ಬಿಟ್ ಕಾಯಿನ್ ಹಗರಣದಲ್ಲಿ ಕಾಂಗ್ರೆಸ್‌ನವರಿದ್ದಾರೆ, ಬಿಜೆಪಿಯವರಿದ್ದಾರೆ ಎಂದು ಆರೋಪ-ಪ್ರತ್ಯಾರೋಪ ಮಾಡುವ ಬದಲು ಸರ್ಕಾರ ನೇರ ಕ್ರಮ ಕೈಗೊಳ್ಳಬೇಕು

ಸತೀಶ ಜಾರಕಿಹೊಳಿ, ಕೆಪಿಸಿಸಿ ಕಾರ್ಯಾಧ್ಯಕ್ಷ

'ದಾಖಲೆ ಇದ್ದರೆ ಪ್ರತಿಪಕ್ಷಗಳು ಕೊಡಲಿ'



ಅಶ್ವತ್ಥನಾರಾಯಣ

ಮಾಗಡಿ (ರಾಮನಗರ): ಬಿಟ್ ಕಾಯಿನ್ ವಿಚಾರದಲ್ಲಿ ರಾಜ್ಯ ಸರ್ಕಾರ ಎಲ್ಲ ರೀತಿಯ ತನಿಖೆಗೆ ಸಿದ್ಧವಿದೆ. ವಿರೋಧ ಪಕ್ಷಗಳು ಅಗತ್ಯ ದಾಖಲೆ ಇದ್ದರೆ ಒದಗಿಸಲಿ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಮಾಗಡಿಯಲ್ಲಿ ಗುರುವಾರ ಪತ್ರಕರ್ತರ ಜೊತೆ ಅವರು ಮಾತನಾಡಿದರು. ಮುಖ್ಯಮಂತ್ರಿ ಬೊಮ್ಮಾಯಿ ರಾಜ್ಯದ ಪ್ರತಿನಿಧಿಯಾಗಿ ಪ್ರಧಾನಿ ಅವರನ್ನು ಭೇಟಿ ಮಾಡಿದ್ದಾರೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಸುದ್ದಿ ಬರೀ ಊಹಾಪೋಹ ಎಂದರು.

ಕೇರಳದ ಗಡಿಯಲ್ಲಿರುವ ಪೆಟ್ರೋಲ್ ಬಂಕ್‌ಗಳಿಗೆ ವ್ಯಾಪಾರವೂ ಇಲ್ಲ, ಸಿಬ್ಬಂದಿಗೆ ಸರಿಯಾದ ವೇತನವೂ ಇಲ್ಲ

ವ್ಯಾಟ್ ಇಳಿಕೆಯಿಂದ ಗಡಿಯಲ್ಲಿ 'ಇಂಧನ ವಲಸೆ'

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇಂದ್ರ ಸರ್ಕಾರ ಎಕ್ಸೈಸ್ ಸುಂಕವನ್ನು ಇಳಿಸಿರುವ ಜತೆಗೆ ರಾಜ್ಯ ಸರ್ಕಾರವೂ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ವ್ಯಾಟ್‌ಅನ್ನು ಈಚೆಗೆ ಕಡಿತ ಮಾಡಿದ್ದರಿಂದ ಗಡಿಭಾಗದಲ್ಲಿ 'ಇಂಧನ ವಲಸೆ' ಹೆಚ್ಚಾಗಿದೆ. ವಿಶೇಷವಾಗಿ, ಕೇರಳದ ಗಡಿಯಲ್ಲಿರುವ ಪೆಟ್ರೋಲ್ ಬಂಕ್‌ಗಳಿಗೆ ವ್ಯಾಪಾರವೇ ಇಲ್ಲದೆ, ಸಿಬ್ಬಂದಿಗೆ ವೇತನ ನೀಡಲೂ ಕಷ್ಟಪಡಬೇಕಾಗಿದೆ. ಆದರೆ, ಕರ್ನಾಟಕದಲ್ಲಿರುವ ಬಂಕ್‌ಗಳ ವ್ಯಾಪಾರ ಹೆಚ್ಚಿದೆ.

ಬೇರೆಬೇರೆ ರಾಜ್ಯಗಳಲ್ಲಿ ವ್ಯಾಟ್ ಪ್ರಮಾಣದಲ್ಲಿ ವ್ಯತ್ಯಾಸ ಇರುವುದರಿಂದ ತೈಲ ಬೆಲೆಯಲ್ಲೂ ಒಂದೆರಡು ರೂಪಾಯಿಗಳ ಅಂತರ ಹಿಂದಿನಿಂದಲೂ ಇರುತ್ತಿತ್ತು. ಆದರೆ, ಈಗ ಬೆಲೆ ವ್ಯತ್ಯಾಸವು ಸುಮಾರು ₹5.50ರಷ್ಟು ಆಗಿರುವುದರಿಂದ, ಬೆಲೆ ಕಡಿಮೆ ಇರುವ ರಾಜ್ಯಗಳ ಬಂಕ್‌ಗಳತ್ತ ವಾಹನಗಳ ಮಾಲೀಕರು ಧಾವಿಸುತ್ತಿದ್ದಾರೆ.

ಕರ್ನಾಟಕ– ಕೇರಳ ಗಡಿಭಾಗವಾದ ತಲಪಾಡಿಯಲ್ಲಿ 500 ಮೀಟರ್ ಅಂತರದಲ್ಲಿ ಎರಡು ಪೆಟ್ರೋಲ್ ಬಂಕ್‌ಗಳಿವೆ. ಒಂದು ಬಂಕ್ ಕೇರಳ ಭಾಗದ ಕುಂಜತ್ತೂರಿನಲ್ಲಿದ್ದರೆ, ಇನ್ನೊಂದು ಕರ್ನಾಟಕದಲ್ಲಿದೆ. ರಾಜ್ಯದಲ್ಲಿ ವ್ಯಾಟ್ ಇಳಿಕೆಯ ನಂತರ ಕೇರಳ ಭಾಗದ ಪೆಟ್ರೋಲ್ ಬಂಕ್ ಬಿಕೊ ಎನ್ನುತ್ತಿದ್ದರೆ, ಕರ್ನಾಟಕ ಭಾಗದ ಬಂಕ್‌ನಲ್ಲಿ ವಾಹನಗಳ ಸಾಲು ಕಾಣಿಸುತ್ತಿದೆ.

'ದಿನ 6,000 ಲೀಟರ್ ಪೆಟ್ರೋಲ್ ಮಾರುತ್ತಿದ್ದೆವು. ಈಗ 2,000 ಲೀಟರ್‌ಗೆ ಕುಸಿದಿದೆ. ಸಿಬ್ಬಂದಿಗೆ ವೇತನ ನೀಡಲೂ ಕಷ್ಟವಾಗಿದೆ. ಸಿಬ್ಬಂದಿ ಸಂಖ್ಯೆಯನ್ನು ಆರರಿಂದ ನಾಲ್ಕಕ್ಕೆ ಇಳಿಸಿದ್ದೇವೆ' ಎಂದು ಕುಂಜತ್ತೂರಿನ ಪೆಟ್ರೋಲ್ ಬಂಕ್‌ನ ವ್ಯವಸ್ಥಾಪಕ ತಾಜುದ್ದೀನ್ ಆತಂಕ ವ್ಯಕ್ತಪಡಿಸಿದ್ದಾರೆ.

'ಕೇರಳ ಸರ್ಕಾರ ಸುಂಕವನ್ನು ಇಳಿಕೆ ಮಾಡದಿದ್ದರೆ ವ್ಯವಹಾರ ಮುಂದುವರಿಸಲು ಸಾಧ್ಯವಾಗದು' ಅನ್ನುತ್ತಾರೆ ಪಂಪ್ ಸಿಬ್ಬಂದಿ ಹರೀಶ್.

'35 ವರ್ಷಗಳಲ್ಲಿ ಇದೇ ಮೊದಲ ಬಾರಿ ಕೇರಳ– ಕರ್ನಾಟಕ ಮಧ್ಯೆ ದರದಲ್ಲಿ ಇಷ್ಟೊಂದು ವ್ಯತ್ಯಾಸ ಕಾಣಿಸಿದೆ. ಈ ಹಿಂದೆ ದಿನಕ್ಕೆ 200 ವಾಹನಗಳು ಬರುತ್ತಿದ್ದವು. ಬೆಲೆ ಇಳಿದ ನಂತರ 600ಕ್ಕೂ ಅಧಿಕ ವಾಹನಗಳು ಬರುತ್ತಿದೆ. ಗ್ರಾಹಕರ ಸಂಖ್ಯೆ ಹೆಚ್ಚಿದ್ದರಿಂದ ಸಿಬ್ಬಂದಿ ಕೊರತೆ ಉಂಟಾಗಿದೆ' ಎಂದು ಕರ್ನಾಟಕ ಭಾಗದ ಬಂಕ್‌ನ ವ್ಯವಸ್ಥಾಪಕ ಮಹೇಶ್ ಹೇಳಿದ್ದಾರೆ.



ತಲಪಾಡಿಯಲ್ಲಿ ಪೆಟ್ರೋಲ್ ಬಂಕ್ ವಾಹನಗಳಿಂದ ತುಂಬಿದೆ

ಕೇರಳ ಸರ್ಕಾರವೂ ತೈಲ ಬೆಲೆ ಇಳಿಕೆಗೆ ಸಂಬಂಧಿಸಿದಂತೆ ಸಭೆ ಆಯೋಜಿಸಿದೆ. ಭಾರಿ ಪ್ರಮಾಣದಲ್ಲಿ ಇಳಿಸಬಹುದೆಂಬ ನಿರೀಕ್ಷೆ ಇಲ್ಲ. ಆದ್ದರಿಂದ ಇಂಧನಕ್ಕಾಗಿ ಕರ್ನಾಟಕಕ್ಕೆ ಬರುವವರ ಸಂಖ್ಯೆ ಕಡಿಮೆಯಾಗದು.

ಕೃಷ್ಣ ಶೆಟ್ಟಿ, ಬಂಕ್ ಸಿಬ್ಬಂದಿ

ಹಿಂದೆ ಬೆಲೆಯಲ್ಲಿ ಇಷ್ಟು ವ್ಯತ್ಯಾಸ ಇರಲಿಲ್ಲ. ತಲಪಾಡಿ ಕೇರಳ ಭಾಗದಲ್ಲಿ 20 ಆಟೊದವರು ಅಲ್ಲೇ ಪೆಟ್ರೋಲ್ ಹಾಕಿಸುತ್ತಿದ್ದೆವು. ಈಗ ಸರತಿ ಸಾಲಿನಲ್ಲಿ ಕರ್ನಾಟಕದ ಬಂಕ್‌ನಿಂದ ಪೆಟ್ರೋಲ್ ಹಾಕಿಸುತ್ತೇವೆ

ಶಶಿ, ರಿಕ್ಷಾ ಚಾಲಕ

ಮಹಾರಾಷ್ಟ್ರ– ಬೆಳಗಾವಿ; ಬೆಳಗಾವಿ–ಗೋವಾ!

ಸುಂಕ ಇಳಿಕೆಯ ನಂತರ ಮಹಾರಾಷ್ಟ್ರ – ಬೆಳಗಾವಿ-ಗೋವಾ ಮಧ್ಯೆ ತೈಲ ವಲಸೆ ಜೋರಾಗಿದೆ. ಬೆಳಗಾವಿಯಲ್ಲಿ ಪೆಟ್ರೋಲ್ ದರ ಲೀಟರ್‌ಗೆ ₹100.32 ಹಾಗೂ ಡೀಸೆಲ್ ಬೆಲೆ ₹84.80 ಇದೆ. ಗೋವಾ ಗಡಿ ಭಾಗದಲ್ಲಿ ಇದು ಕ್ರಮವಾಗಿ ₹95.48 ಹಾಗೂ ₹87.12 ಇದೆ.

ಮಹಾರಾಷ್ಟ್ರದಲ್ಲಿ ತೈಲ ದರ ಬೆಳಗಾವಿಗಿಂತಲೂ ಜಾಸ್ತಿ ಇದೆ. (ಕ್ರಮವಾಗಿ ₹110.33 ಹಾಗೂ ₹93.09) ಆದ್ದರಿಂದ ಮಹಾರಾಷ್ಟ್ರದ ಗಡಿಭಾಗದ ಕೆಲವು ಹಳ್ಳಿಗಳವರು ಬೆಳಗಾವಿ ಜಿಲ್ಲೆಯ ಬಂಕ್‌ಗಳಿಗೆ ಬರುತ್ತಿದ್ದಾರೆ. ಮಹಾರಾಷ್ಟ್ರದ ಕಡೆ ಹೋಗುವ ಲಾರಿಗಳ ಚಾಲಕರು ಇಲ್ಲಿ ಟ್ಯಾಂಕ್ ತುಂಬಿಸಿಕೊಂಡೇ ಪ್ರಯಾಣ ಮುಂದುವರಿಸುತ್ತಾರೆ.

ಕಾರವಾರ ನಗರದ ವಾಹನ ಸವಾರರು ಗೋವಾದಲ್ಲಿ ಇಂಧನ ಭರ್ತಿ ಮಾಡಿಕೊಳ್ಳುವುದು ಮುಂದುವರಿದಿದೆ. ದಕ್ಷಿಣ ಗೋವಾದಲ್ಲಿ ಬುಧವಾರ ಪೆಟ್ರೋಲ್ ದರ ₹95.91 ಹಾಗೂ ಡೀಸೆಲ್ ದರ ₹87.34 ಇತ್ತು. ಕಾರವಾರದಲ್ಲಿ ಇದು ಕ್ರಮವಾಗಿ ₹102.41 ಹಾಗೂ ₹86.56 ಇದೆ.

ಕೋಲಾರ ಜಿಲ್ಲೆ ಗಡಿ ಭಾಗದಲ್ಲಿರುವ ಕೆಜಿಎಫ್ ಮತ್ತು ಮುಳಬಾಗಿಲು ತಾಲ್ಲೂಕಿನ ಬಂಕ್‌ಗಳಿಗೆ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ವಾಹನ ಸವಾರರು ಹೆಚ್ಚಿನ ಸಂಖ್ಯೆಯಲ್ಲಿ ಬರಲಾರಂಭಿಸಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗಡಿ ಭಾಗದ ಬಂಕ್‌ಗಳಲ್ಲೂ ಆಂಧ್ರದ ವಾಹನಗಳು ಹೆಚ್ಚಾಗಿ ಕಾಣಿಸುತ್ತಿವೆ. ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆ ಭಾಗದ ಮೂರು ಪೆಟ್ರೋಲ್ ಬಂಕ್‌ಗಳಲ್ಲೂ ಅದೇ ಸ್ಥಿತಿ ಇದೆ.

ಚಾಮರಾಜನಗರ, ಕೊಡಗು ಜಿಲ್ಲೆಗಳು ಕೇರಳದ ಜತೆ ಗಡಿ ಹಂಚಿಕೊಂಡಿದ್ದರೂ, ಬಂಕ್‌ಗೆ ಬರಬೇಕಾದರೆ ಅರಣ್ಯ ಪ್ರದೇಶ ಮತ್ತು ಚೆಕ್‌ಪೋಸ್ಟ್‌ಗಳನ್ನು ದಾಟಿ, ದೂರ ಪ್ರಯಾಣಿಸಬೇಕಾಗಿದ್ದರಿಂದ ಇಂಧನಕ್ಕಾಗಿಯೇ ಇಲ್ಲಿಗೆ ಯಾರೂ ಬರುತ್ತಿಲ್ಲ.

ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಗಡಿಭಾಗದಲ್ಲಿರುವ ಪೆಟ್ರೋಲ್ ಬಂಕ್‌ಗಳಲ್ಲಿ ತೆಲಂಗಾಣದ ವಾಹನಗಳು ಹೆಚ್ಚಾಗಿ ಕಾಣಿಸುತ್ತಿವೆ. ಮುಧೋಳ, ರಿಬ್ಬನಪಲ್ಲಿ, ಲಿಂಗಂಪಲ್ಲಿ, ಆಡಕಿ ಸೇರಿದಂತೆ ವಿವಿಧೆಡೆ ಇರುವ ಪೆಟ್ರೋಲ್ ಬಂಕ್‌ಗಳಲ್ಲಿ ತೆಲಂಗಾಣದ ವಾಹನಗಳ ಸಾಲು ಕಾಣಿಸುತ್ತಿದೆ. ರಾಯಚೂರು, ಯಾದಗಿರಿ ಜಿಲ್ಲೆಯ ಗಡಿಭಾಗದ ಬಂಕ್‌ಗಳಿಗೂ ತೆಲಂಗಾಣದ ವಾಹನಗಳು ಲಗ್ಗೆ ಇಡುತ್ತಿವೆ.

ತೆಲಂಗಾಣದಲ್ಲಿ ಪೆಟ್ರೋಲ್ ದರ ₹109.32 ಮತ್ತು ಡಿಸೆಲ್ ₹95.55 ಇದ್ದರೆ, ರಾಜ್ಯದಲ್ಲಿ ₹100.85 ಮತ್ತು ಡೇಸೆಲ್ ₹ 85.25 ಇದೆ. ಮಹಾರಾಷ್ಟ್ರದೊಂದಿಗೆ ಗಡಿ ಹಂಚಿಕೊಂಡಿರುವ ಅಫಜಲಪುರ ಮತ್ತು ಆಳಂದ ತಾಲ್ಲೂಕಿನ ಬಂಕ್‌ಗಳಲ್ಲಿ ಮಹಾರಾಷ್ಟ್ರದ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸುತ್ತಿವೆ.



ಅಗ್ನಿಶಾಮಕ ದಳ ಸಿಬ್ಬಂದಿಯು ಚೆನ್ನೈನ ಜಲಾವೃತಗೊಂಡಿರುವ ರಸ್ತೆಯಲ್ಲಿ ಬೋಟ್‌ನಲ್ಲಿ ಸಂಚರಿಸಿದರು– ರಾಯಿಟರ್ಸ್ ಚಿತ್ರ



ಚೆನ್ನೈ ವಿಮಾನ ನಿಲ್ದಾಣದಲ್ಲಿಯೂ ನೀರು ನಿಂತಿತ್ತು –ಪಿಟಿಐ ಚಿತ್ರ

ಆಂಧ್ರದಲ್ಲೂ ಮಳೆ

ಅಮರಾವತಿ ವರದಿ: ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರತ ಕುಸಿತದಿಂದ ಆಂಧ್ರ ಪ್ರದೇಶದ ದಕ್ಷಿಣ ಕರಾವಳಿ ಜಿಲ್ಲೆಗಳಾದ ಪ್ರಕಾಶಂ, ನೆಲ್ಲೂರು, ರಾಯಲಸೀಮಾ ಜಿಲ್ಲೆಗಳಾದ ಚಿತ್ತೂರು, ಕಡಪಾಗಳಲ್ಲಿ ಗುರುವಾರ ಭಾರಿ ಪ್ರಮಾಣದ ಮಳೆ ಸುರಿದಿದೆ. ಜನಜೀವನ ಅಸ್ತವ್ಯಸ್ತವಾಗಿದ್ದು, ಕೇಂದ್ರ ಮತ್ತು ರಾಜ್ಯ ವಿಪತ್ತು ನಿರ್ವಹಣಾ ತಂಡಗಳನ್ನು ಪರಿಹಾರ ಕಾರ್ಯಗಳಿಗೆ ನಿಯೋಜಿಸಲಾಗಿದೆ.

ಹಾನಿಗೀಡಾದ ಪ್ರದೇಶಗಳಲ್ಲಿ ಪರಿಹಾರ ಶಿಬಿರಗಳನ್ನು ಆರಂಭಿಸಲು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಸೂಚಿಸಿದ್ದಾರೆ. ಶುಕ್ರವಾರ ಅತ್ಯಧಿಕ ಮಳೆಯಾಗುವ ಸಾಧ್ಯತೆಯಿದ್ದು, ಕಟ್ಟೆಚ್ಚರ ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ.

ನೆಲ್ಲೂರು ನಗರವು ಬುಧವಾರದಿಂದ ಜಲಾವೃತವಾಗಿದೆ. ಜಿಲ್ಲೆಯಲ್ಲಿ 3,200 ಎಕರೆ ಕೃಷಿಭೂಮಿ ನೀರಿನಲ್ಲಿ ಮುಳುಗಿದೆ ಎಂದು ಪ್ರಾಥಮಿಕ ವರದಿಗಳು ಅಂದಾಜಿಸಿವೆ. ಚಿತ್ತೂರಿನ ವರದಾಯಪಾಳ್ಯಂನಲ್ಲಿ 24 ಗಂಟೆಗಳಲ್ಲಿ 19.5 ಸೆಂಟಿಮೀಟರ್ ಮಳೆ ಸುರಿದಿದೆ.

ಪುದುಚೇರಿಯಲ್ಲಿ ತಗ್ಗಿದ ಮಳೆ: ಕಳೆದ 10 ದಿನಗಳಿಂದ ಭಾರಿ ಮಳೆಗೆ ಸಾಕ್ಷಿಯಾಗಿದ್ದ ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಗುರುವಾರ ಮಳೆ ಬಿಡುವು ಕೊಟ್ಟಿತ್ತು.

ಮಳೆ ಸಂಬಂಧಿ ಅವಘಡ: ಭಾನುವಾರದಿಂದ 14 ಸಾವು: ಹಲವು ಗುಡಿಸಲು ಕುಸಿತ, ಅಪಾರ ಹಾನಿ

ನಿರಂತರ ಮಳೆಗೆ ನಲುಗಿದ ಚೆನ್ನೈ

ಪ್ರಜಾವಾಣಿ ವಾರ್ತೆ

ಚೆನ್ನೈ: ಬುಧವಾರ ಸಂಜೆಯಿಂದ ನಿರಂತರವಾಗಿ ಸುರಿದ ಮಳೆಯು ಚೆನ್ನೈ ಮತ್ತು ಸುತ್ತಲಿನ ಜಿಲ್ಲೆಗಳು ಕಂಗೆಡುವಂತೆ ಮಾಡಿದೆ. ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾಗಿದ್ದ ವಾಯುಭಾರ ಕುಸಿತದ ಪರಿಣಾಮವು 16 ತಾಸು ಎಡೆಬಿಡದ ಮಳೆಗೆ ಕಾರಣವಾಗಿತ್ತು. ಗುರುವಾರ ಸಂಜೆಯ ಹೊತ್ತಿಗೆ ವಾಯುಭಾರ ಕುಸಿತವು ತಮಿಳುನಾಡು ಮತ್ತು ಆಂಧ್ರ ಪ್ರದೇಶ ಕರಾವಳಿಯನ್ನು ಹಾದು ಹೋಗಿದೆ.

ಕಳೆದ ಒಂದು ವಾರದಿಂದಲೂ ತಮಿಳುನಾಡಿನ ವಿವಿಧ ಭಾಗಗಳಲ್ಲಿ ಮಳೆ ಬೀಳುತ್ತಿದೆ. ಮಳೆ ಸಂಬಂಧಿ ಅವಘಡಗಳಿಂದಾಗಿ ಭಾನುವಾರದಿಂದ ಈವರೆಗೆ ರಾಜ್ಯದಲ್ಲಿ 14 ಮಂದಿ ಮೃತಪಟ್ಟಿದ್ದಾರೆ. 157 ಜಾನುವಾರಗಳು ಮೃತಪಟ್ಟಿವೆ. ಸಾವಿರಕ್ಕೂ ಹೆಚ್ಚು ಗುಡಿಸಲುಗಳು ನೆಲಸಮವಾಗಿವೆ. ಸುಮಾರು 10 ಸಾವಿರ ಜನರನ್ನು ಪರಿಹಾರ ಕೇಂದ್ರಗಳಲ್ಲಿ ಇರಿಸಲಾಗಿದೆ ಎಂದು ಕಂದಾಯ ಸಚಿವ ರಾಮಚಂದ್ರನ್ ತಿಳಿಸಿದ್ದಾರೆ.

ಗುರುವಾರ ಬೆಳಿಗ್ಗೆ ಮಳೆಯ ಬಿರುಸು ಅಲ್ಪ ಕಡಿಮೆ ಆಯಿತು. ಆದರೆ, ಸ್ವಲ್ಪ ಹೊತ್ತಿನಲ್ಲಿ ಮತ್ತೆ ಏರಿಕೆ ಆಯಿತು. ಸಂಜೆಯ ಹೊತ್ತಿಗೆ ಮಳೆ ನಿಂತಿದೆ. ವಾಯುಭಾರ ಕುಸಿತವು ತಮಿಳುನಾಡು ಕರಾವಳಿಯಿಂದ ಹಿಂದೆ ಸರಿಯುತ್ತಿದ್ದಂತೆಯೇ ರೆಡ್ ಅಲರ್ಟ್ ಅನ್ನು ಹವಾಮಾನ ಇಲಾಖೆಯು ಹಿಂದಕ್ಕೆ ಪಡೆದಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ತಾಸುಗಳಲ್ಲಿ ಚೆನ್ನೈ ಹೊರವಲಯದ ತಂಬರಂನಲ್ಲಿ 23 ಸೆಂ.ಮೀ. ಮಳೆ ಸುರಿದಿದೆ. ಚೆನ್ನೈ ನಗರದ ಹಲವು ಪ್ರದೇಶಗಳು ಗುರುವಾರವೂ ಜಲಾವೃತವಾಗಿಯೇ ಇತ್ತು.

ಒಂದೇ ವಾರದಲ್ಲಿ ಚೆನ್ನೈ ನಗರವು ಎರಡನೇ ಬಾರಿ ಭಾರಿ ಮಳೆಯಿಂದ ಸಂಕಷ್ಟಕ್ಕೆ ಒಳಗಾಯಿತು. ನ.6ರಂದು ಕೂಡ ಚೆನ್ನೈನಲ್ಲಿ 20 ಸೆಂ.ಮೀ. ಮಳೆ ಸುರಿದಿತ್ತು. ಗುರುವಾರದ ಮಳೆಯಿಂದಾಗಿ ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಂಡಿದೆ. ಚೆನ್ನೈ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು 5 ತಾಸು ಸ್ಥಗಿತಗೊಳಿಸಲಾಗಿತ್ತು. ಚೆನ್ನೈಗೆ ಬರಬೇಕಿದ್ದ 14 ವಿಮಾನವನ್ನು ಬೇರೆಡೆಗೆ ಕಳುಹಿಸಲಾಯಿತು. 22 ವಿಮಾನಗಳು ರದ್ದಾದವು. ಚೆನ್ನೈಯಿಂದ ಹೊರಡಬೇಕಿದ್ದ 28 ವಿಮಾನಗಳನ್ನೂ ರದ್ದು ಮಾಡಲಾಯಿತು.

ಎನ್‌ಡಿಆರ್‌ಎಫ್‌ನಿಂದ ರಕ್ಷಣಾ ಕಾರ್ಯ

- ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ಏಳು ತಂಡಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ
- ಚೆನ್ನೈನ 522 ಸ್ಥಳಗಳು ಜಲಾವೃತವಾಗಿವೆ, ಅವುಗಳ ಪೈಕಿ 46 ಸ್ಥಳಗಳ ನೀರನ್ನು ಮಾತ್ರ ಸಂಜೆ 6ರ ಒಳಗೆ ಖಾಲಿ ಮಾಡಲು ಸಾಧ್ಯವಾಗಿತ್ತು
- ಬುಡಮೇಲಾದ 230 ಮರಗಳನ್ನು ತೆರವು ಮಾಡಲಾಗಿದೆ

ಅಸ್ವಸ್ಥ ಕಾರ್ಮಿಕನನ್ನು ಹೊತ್ತು ಸಾಗಿಸಿದ ಮಹಿಳಾ ಪೊಲೀಸ್

ಚೆನ್ನೈ: ಭಾರಿ ಮಳೆಯ ವೇಳೆ ಮೂರ್ಛೆ ಹೋಗಿದ್ದ ಸ್ಮಶಾನದ ಕೆಲಸಗಾರನನ್ನು ಮಹಿಳಾ ಪೊಲೀಸ್ ಒಬ್ಬರು ತಮ್ಮ ಹೆಗಲಮೇಲೆ ಹೊತ್ತು ಸಾಗಿಸಿದ ವಿಡಿಯೊ ವೈರಲ್ ಆಗಿದೆ. ನೀರಿನಿಂದ ಆವೃತವಾಗಿದ್ದ ಸ್ಮಶಾನದ ಆವರಣದಿಂದ ವ್ಯಕ್ತಿಯನ್ನು ಹೊತ್ತು, ಆಟೋರಿಕ್ಷಾ ಮೂಲಕ ಆಸ್ಪತ್ರೆಗೆ ದಾಖಲಿಸಿದರು. ಈ ವೇಳೆ ಅವರಿಗೆ ಸ್ಥಳೀಯರಿಬ್ಬರು ನೆರವಾಗಿದ್ದಾರೆ. ಘಟನೆ ನಡೆದ ಸ್ಥಳದ ಬಗ್ಗೆ ಮಾಹಿತಿ ಗೊತ್ತಾಗಿಲ್ಲ.

ಆಸ್ಪತ್ರೆಗಳಲ್ಲೂ ನೀರು

ಕೆ.ಕೆ.ನಗರ, ಕ್ರೋಮ್‌ಪೇಟ್ ಮತ್ತು ತಂಬರಂನಲ್ಲಿರುವ ಹಲವು ಆಸ್ಪತ್ರೆಗಳ ಒಳಗೆ ನೀರು ನುಗ್ಗಿದೆ. ಹಾಗಾಗಿ, ಈ ಆಸ್ಪತ್ರೆಗಳಲ್ಲಿ ಇದ್ದ ರೋಗಿಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಯಿತು. ಕೆಲವು ಪ್ರದೇಶಗಳಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಕ್ಕೂ ಮಳೆಯಿಂದ ತೊಂದರೆ ಆಯಿತು. ತಗ್ಗು ಪ್ರದೇಶಗಳ ಜನರನ್ನು ದೋಣಿ ಬಳಸಿ ರಕ್ಷಿಸಲಾಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	6,320	6,283
ಹಾರಂಗಿ	2,859	2,857.67	637	1,033
ಕಬಿನಿ	2,284	2,283.86	1,830	700
ಹೇಮಾವತಿ	2,922	2,908.93	1,977	3,556
ಲಿಂಗನಮಕ್ಕಿ	1,819	1,813.80	3,078	-
ಸೂಪಾ (ಮೀ)	564	555.67	557	3,200
ಮಾಣಿ	594.36	586.78	490	-
ತುಂಗಭದ್ರಾ	1,633	1,632.45	8,988	9,645
ಮಲಪ್ರಭಾ	2,079.50	2,076.97	-	2,444
ಘಟಪ್ರಭಾ	2,175	2,168.86	-	5,320
ಭದ್ರಾ	186	185.40	3,674	3,061
ಆಲಮಟ್ಟಿ (ಮೀ)	519.60	518.75	-	1,805
ನಾರಾಯಣಪುರ (ಮೀ)	492.25	491.15	1,140	995

* ನೆಲಮಟ್ಟದಿಂದ

ಕೋವಿಡ್ ಲಸಿಕೆ • ಕೇಂದ್ರ ಆರೋಗ್ಯ ಸಚಿವರಿಂದ ಮಾಹಿತಿ

2ನೇ ಡೋಸ್ ತಪ್ಪಿಸಿದ 12 ಕೋಟಿ ಜನ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಕೋವಿಡ್ ಲಸಿಕೆಯ ಮೊದಲನೇ ಡೋಸ್ ಪಡೆದುಕೊಂಡವರಲ್ಲಿ ಸುಮಾರು 12 ಕೋಟಿ ಜನರು, ನಿಗದಿತ ಅವಧಿಯೊಳಗೆ ಎರಡನೇ ಡೋಸ್ ಪಡೆದುಕೊಂಡಿಲ್ಲ. ಅಂತಹವರನ್ನು ಹುಡುಕಿ, ಲಸಿಕೆ ಹಾಕುವ ಕೆಲಸಕ್ಕೆ ರಾಜ್ಯ ಸರ್ಕಾರಗಳು ಒತ್ತು ನೀಡಬೇಕು ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಹೇಳಿದ್ದಾರೆ.

ಕೋವಿಡ್ ಲಸಿಕೆ ಕಾರ್ಯಕ್ರಮದ ಪ್ರಗತಿಯ ಕುರಿತು ರಾಜ್ಯಗಳ ಆರೋಗ್ಯ ಸಚಿವರ ಜತೆ ನಡೆಸಿದ ಪರಿಶೀಲನಾ ಸಭೆಯಲ್ಲಿ ಅವರು ಈ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ‘12 ಕೋಟಿಯಷ್ಟು ಜನರು ಎರಡನೇ ಡೋಸ್ ಪಡೆದುಕೊಂಡಿಲ್ಲ. ಅವರು ಎರಡನೇ ಡೋಸ್ ಅನ್ನು ಪಡೆದುಕೊಳ್ಳುವಂತೆ ಉತ್ತೇಜಿಸಬೇಕು. ಆಗ ಮಾತ್ರ ಈ ಮಾರಣಾಂತಿಕ ರೋಗವನ್ನು ತಡೆಗಟ್ಟಲು ಸಾಧ್ಯ’ ಎಂದು ಅವರು ಸಭೆಯಲ್ಲಿ ಹೇಳಿದ್ದಾರೆ.

‘ಎರಡನೇ ಡೋಸ್ ತಪ್ಪಿಸಿಕೊಂಡವರನ್ನು ಹುಡುಕಿ, ಲಸಿಕೆ ಹಾಕಲು ಹಲವು ಕ್ರಮಗಳನ್ನು ತೆಗೆದುಕೊಳ್ಳಬೇಕು. ಇದಕ್ಕಾಗಿ ನಿಗದಿತ ಭೌಗೋಳಿಕ ಪ್ರದೇಶವೊಂದಕ್ಕೆ 50–100 ವಿಶೇಷ ಲಸಿಕಾ ತಂಡಗಳನ್ನು ರಚಿಸಬೇಕು. ಈ ತಂಡಗಳು ಗಡುವು ಹಾಕಿಕೊಂಡು ಎಲ್ಲರಿಗೂ ಲಸಿಕೆ ಹಾಕಬೇಕು. ಹೆಚ್ಚು ಪ್ರಗತಿ ಸಾಧಿಸುವ ತಂಡಗಳಿಗೆ ರ‍್ಯಾಂಕ್ ನೀಡುವ ವ್ಯವಸ್ಥೆ ಮಾಡಬೇಕು. ಮನೆ–ಮನೆಗೆ ಭೇಟಿ ನೀಡಿ, ಲಸಿಕೆ ಹಾಕಿಕೊಳ್ಳಲು ಜನರನ್ನು ಉತ್ತೇಜಿಸಬೇಕು’ ಎಂದು ಅವರು ಕರೆ ನೀಡಿದ್ದಾರೆ.

‘ರಾಜ್ಯ ಸರ್ಕಾರಗಳು ಒಂದು ವರ್ಗದ ಜನರಿಗೆ ಒಂದು ದಿನ ಲಸಿಕೆ ನೀಡುವ ತಂತ್ರವನ್ನು ಅನುಸರಿಸಬೇಕು. ಒಂದು ದಿನ ವ್ಯಾಪಾರಿಗಳಿಗೆ, ಮತ್ತೊಂದು ದಿನ ರಿಕ್ಷಾ ಚಾಲಕರಿಗೆ, ಇನ್ನೊಂದು ದಿನ ಚಾಲಕರಿಗೆ, ಬೇರೊಂದು ದಿನ ಕಾರ್ಮಿಕರಿಗೆ ಮತ್ತು ರೈತರಿಗೆ ಲಸಿಕೆ ನೀಡುವಂತೆ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬಹುದು’ ಎಂದು ಅವರು ಹೇಳಿದ್ದಾರೆ.

ಕೋವ್ಯಾಕ್ಸಿನ್ ಶೇ 78ರಷ್ಟು ಪರಿಣಾಮಕಾರಿ

‘ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಕೋವಿಡ್ ಲಸಿಕೆ ಕೋವ್ಯಾಕ್ಸಿನ್, ಕೋವಿಡ್ ಲಕ್ಷಣಗಳ ವಿರುದ್ಧ ಶೇ 78ರಷ್ಟು ಪರಿಣಾಮಕಾರಿಯಾಗಿದೆ. ಕೋವಿಡ್‌ನಿಂದ ಉಂಟಾಗುವ ಗಂಭೀರ ಆರೋಗ್ಯ ಸಮಸ್ಯೆಗಳ ವಿರುದ್ಧ ಶೇ 93ರಷ್ಟು ಪರಿಣಾಮಕಾರಿಯಾಗಿದೆ’ ಎಂದು ವೈದ್ಯಕೀಯ ನಿಯತಕಾಲಿಕ ಲ್ಯಾನ್ಸೆಟ್ ಸಂಶೋಧನಾ ವರದಿ ಪ್ರಕಟಿಸಿದೆ.

2020ರ ನವೆಂಬರ್‌ನಿಂದ 2021ರ ಮೇ ನಡುವೆ ಕೋವ್ಯಾಕ್ಸಿನ್‌ನ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಸಲಾಗಿತ್ತು. ಈ ಕ್ಲಿನಿಕಲ್ ಟ್ರಯಲ್‌ನಲ್ಲಿ 24,419 ಜನರು ಭಾಗಿಯಾಗಿದ್ದರು. ಈ ಟ್ರಯಲ್‌ನ ಅಂತಿಮ ವರದಿಯನ್ನು ಆಧರಿಸಿ ಲ್ಯಾನ್ಸೆಟ್‌ನಲ್ಲಿ ವರದಿ ಪ್ರಕಟಿಸಲಾಗಿದೆ.

ಕೋವ್ಯಾಕ್ಸಿನ್ ಅನ್ನು ತುರ್ತು ಸಂದರ್ಭದಲ್ಲಿ ಬಳಸಬಹುದಾದ ಲಸಿಕೆಗಳ ಪಟ್ಟಿಗೆ ವಿಶ್ವಸಂಸ್ಥೆಯು ಕಳೆದ ವಾರವಷ್ಟೇ ಸೇರಿಸಿತ್ತು.

ವಿದೇಶದಿಂದ ಆಗಮನ: ಮಕ್ಕಳಿಗೆ ಪರೀಕ್ಷೆ ಬೇಡ

ನವದೆಹಲಿ (ಪಿಟಿಐ): ವಿದೇಶದಿಂದ ಬರುವ ಐದು ವರ್ಷದೊಳಗಿನ ಮಕ್ಕಳು ಬರುವ ಮೊದಲು ಮತ್ತು ಬಂದ ಬಳಿಕ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವ ಅಗತ್ಯ ಇಲ್ಲ. ವಿದೇಶದಿಂದ ಬರುವವರು ಯಾವೆಲ್ಲ ಕ್ರಮಗಳನ್ನು ಅನುಸರಿಸಬೇಕು ಎಂಬ ಮಾರ್ಗಸೂಚಿಯನ್ನು ಗುರುವಾರ ಪರಿಷ್ಕರಿಸಲಾಗಿದೆ. ಆದರೆ, ಭಾರತ ತಲುಪಿದಾಗ ಅಥವಾ ಮನೆಯಲ್ಲಿ ಪ್ರತ್ಯೇಕವಾಸದಲ್ಲಿ ಇದ್ದಾಗ ಕೊರೊನಾ ಸೋಂಕಿನ ಲಕ್ಷಣಗಳು ಕಂಡು ಬಂದರೆ ಭಾರತದ ಮಾನದಂಡದ ಅನುಸಾರ ಪರೀಕ್ಷೆಗೆ ಒಳಗಾಗಬೇಕು ಮತ್ತು ಚಿಕಿತ್ಸೆ ಪಡೆದುಕೊಳ್ಳಬೇಕು.

ಜಾಗತಿಕ ಮಟ್ಟದಲ್ಲಿ ಕೋವಿಡ್ ಪ್ರಕರಣ ಇಳಿಕೆ ಹಾದಿಯಲ್ಲಿದೆ. ಕೆಲವು ಪ್ರದೇಶಗಳಿಗೆ ನಿರ್ದಿಷ್ಟವಾದ ರೂಪಾಂತರ ತಳಿಗಳು ಇವೆ. ವೈರಸ್‌ನ ಸ್ವರೂಪವು ಬದಲಾಗುತ್ತಲೇ ಇದೆ. ಇದು ಕಳವಳಕಾರಿ. ಹಾಗಾಗಿ, ನಿರಂತರ ನಿಗಾ ಇರಿಸುವುದು ಅಗತ್ಯವಾಗಿದೆ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.



ಜಗತ್ತಿನಾದ್ಯಂತ ಕೋವಿಡ್ ಲಸಿಕೆ ಹಾಕಿಸುವಿಕೆ ಪ್ರಮಾಣವು ಹೆಚ್ಚಳವಾಗಿದೆ.. ಹಾಗಾಗಿ, ವಿದೇಶದಿಂದ ಬರುವವರು ಅನುಸರಿಸಬೇಕಾದ ಕ್ರಮಗಳನ್ನು ಪರಿಷ್ಕರಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. ಪರಿಷ್ಕೃತ ಮಾರ್ಗಸೂಚಿಯು ಶುಕ್ರವಾರದಿಂದ ಜಾರಿಗೆ ಬರಲಿದೆ. ಈಗ ಇರುವ ಮಾರ್ಗಸೂಚಿ ಪ್ರಕಾರ, ವಿಶ್ವ ಆರೋಗ್ಯ ಸಂಸ್ಥೆಯು ಅಂಗೀಕರಿಸಿದ ಕೋವಿಡ್–19 ಲಸಿಕೆಗೆ ಪರಸ್ಪರ ಮಾನ್ಯತೆ ನೀಡುವ ಒಪ್ಪಂದ ಮಾಡಿಕೊಂಡ ದೇಶಗಳಿಂದ ಬರುವ ಪೂರ್ಣ ಲಸಿಕೆ ಪಡೆದ ವ್ಯಕ್ತಿಗಳು ವಿಮಾನ ನಿಲ್ದಾಣದಿಂದ ನೇರವಾಗಿ ಮನೆಗೆ ಹೋಗಬಹುದು. ಅವರು ಮನೆ ಪ್ರತ್ಯೇಕವಾಸ ಕೈಗೊಳ್ಳಬೇಕಾದ ಅಗತ್ಯವೂ ಇಲ್ಲ. ಆದರೆ, ಬಂದ ನಂತರದ 14 ದಿನ ಆರೋಗ್ಯದ ಮೇಲೆ ನಿಗಾ ಇರಿಸಬೇಕು. ಭಾರತಕ್ಕೆ ಬರುವುದಕ್ಕೆ ಮೊದಲು ಪೂರ್ಣ ಲಸಿಕೆ ಹಾಕಿಸಿಕೊಂಡು 15 ದಿನಗಳು ಕಳೆದಿರಬೇಕು.

ಭಾಗಶಃ ಲಸಿಕೆ ಹಾಕಿಸಿಕೊಂಡಿರುವವರು ವಿಮಾನ ನಿಲ್ದಾಣದಲ್ಲಿ ಇಳಿದ ಬಳಿಕ ಕೋವಿಡ್ ಪರೀಕ್ಷೆಗೆ ಮಾದರಿ ನೀಡಬೇಕು. ಅವರು ನೇರವಾಗಿ ಮನೆಗೆ ಹೋಗಬಹುದು. ಆದರೆ, ಏಳು ದಿನ ಮನೆಯಲ್ಲಿ ಪ್ರತ್ಯೇಕವಾಸದಲ್ಲಿ ಇರಬೇಕು. ಎಂಟನೇ ದಿನ ಮತ್ತೆ ಪರೀಕ್ಷೆಗೆ ಒಳಗಾಗಬೇಕು. ಸೋಂಕು ಇಲ್ಲ ಎಂಬುದು ಪರೀಕ್ಷೆಯಲ್ಲಿ ತಿಳಿದು ಬಂದರೂ ಮುಂದಿನ ಏಳು ದಿನ ಆರೋಗ್ಯದ ಮೇಲೆ ನಿಗಾ ಇರಿಸಬೇಕು.

ಕುಂಠಿತ ಪ್ರಗತಿ

ಕೇಂದ್ರ ಸರ್ಕಾರವು 2021ರ ಡಿಸೆಂಬರ್ ಅಂತ್ಯದ ವೇಳೆಗೆ ದೇಶದ 18 ವರ್ಷ ಮೇಲ್ಪಟ್ಟ 94.47 ಕೋಟಿ ಜನರಿಗೆ ಕೋವಿಡ್ ಲಸಿಕೆಯ ಎರಡೂ ಲಸಿಕೆಗಳನ್ನು ನೀಡುವ ಗುರಿ ಹಾಕಿಕೊಂಡಿದೆ. ಆದರೆ ಈವರೆಗೆ ಶೇ 79ರಷ್ಟು ವಯಸ್ಕರಿಗಷ್ಟೇ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ. ಶೇ 38ರಷ್ಟು ಜನರಿಗಷ್ಟೇ ಲಸಿಕೆಯ ಎರಡನೇ ಡೋಸ್ ನೀಡಲಾಗಿದೆ.

ದೇಶದಲ್ಲಿ ಪ್ರತಿದಿನ ನೀಡಲಾಗುತ್ತಿರುವ ಲಸಿಕೆಯ ಡೋಸ್‌ಗಳ ಸಂಖ್ಯೆ 50 ಲಕ್ಷಕ್ಕಿಂತ ಕಡಿಮೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದಂದು 2.5 ಕೋಟಿ ಡೋಸ್‌ಗಳನ್ನು ನೀಡಲಾಗಿತ್ತು. ಆನಂತರದ ದಿನಗಳಲ್ಲಿ ಈ ಸಂಖ್ಯೆ ಕುಸಿಯುತ್ತಾ ಬಂದಿದೆ. ನವೆಂಬರ್ ಮೊದಲ ವಾರದಲ್ಲಿ ಈ ಸಂಖ್ಯೆ ಇಳಿಕೆಯಾಗಿದೆ. ಲಸಿಕೆ ಕಾರ್ಯಕ್ರಮವು ಇದೇ ವೇಗದಲ್ಲಿ ಮುಂದುವರಿದರೆ, ಡಿಸೆಂಬರ್ ಅಂತ್ಯದ ವೇಳೆಗೆ 94.47 ಕೋಟಿ ಜನರಿಗೆ ಎರಡೂ ಡೋಸ್‌ಗಳನ್ನು ನೀಡುವುದು ಸಾಧ್ಯವಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಶೇ 80ರಷ್ಟು ಜನರಿಗೆ ಲಸಿಕೆ ನೀಡಿರುವ ಚೀನಾ, ಬ್ರಿಟನ್, ಸಿಂಗಪುರದಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿವೆ

ಮನ್ಸುಖ್ ಮಾಂಡವೀಯ, ಕೇಂದ್ರ ಆರೋಗ್ಯ ಸಚಿವ

ಎರಡನೇ ಡೋಸ್ ಪಡೆದುಕೊಳ್ಳದೇ ಇದ್ದರೆ, ಪರಿಣಾಮ ಕಡಿಮೆಯಾಗಲಿದೆ. ಎಲ್ಲರೂ 2ನೇ ಡೋಸ್ ಹಾಕಿಸಿಕೊಳ್ಳಬೇಕು

ಉಮ್ಮನ್ ಜಾನ್, ಇನ್‌ಸ್ಟಿಟ್ಯೂಟ್ ಫಾರ್ ಗ್ಲೋಬಲ್ ಹೆಲ್ತ್‌ನ ಸಂಶೋಧಕ

ಕೋವಿಡ್: ಜರ್ಮನಿಯಲ್ಲಿ ಒಂದೇ ದಿನ 50,196 ಪ್ರಕರಣ

ಬರ್ಲಿನ್ (ಎಎಫ್‌ಪಿ): ಜರ್ಮನಿಯಲ್ಲಿ ಗುರುವಾರ ದಾಖಲೆ ಸಂಖ್ಯೆಯಲ್ಲಿ ಅಂದರೆ 50,196 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ ಪಿಡುಗು ಆರಂಭವಾದ ಬಳಿಕ ಇದೇ ಮೊದಲ ಬಾರಿಗೆ ಜರ್ಮನಿಯಲ್ಲಿ ಹೊಸ ಪ್ರಕರಣಗಳ ಸಂಖ್ಯೆ 50 ಸಾವಿರದ ಗಡಿಯನ್ನು ದಾಟಿದೆ. ಇತ್ತೀಚಿನ ದಿನಗಳಲ್ಲಿ ಹೊಸ ಪ್ರಕರಣ ಮತ್ತು ಸಾವಿನ ಸಂಖ್ಯೆಯೂ ಏರಿಕೆಯಾಗುತ್ತಿದೆ.

‘ಇದೊಂದು ನಾಟಕೀಯ ಬೆಳವಣಿಗೆ. ಕೋವಿಡ್ ಪಿಡುಗು ಹೊಸರೂಪದಲ್ಲಿ ಮರಳುತ್ತಿದೆ’ ಎಂದು ನಿರ್ಗಮಿತ ಚಾನ್ಸಲರ್ ಅಂಗೆಲಾ ಮಾರ್ಕೆಲ್ ಅವರ ಹೇಳಿಕೆ ಆಧರಿಸಿ ಅವರ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

ಸ್ಥಳೀಯ ಆಡಳಿತಗಳು ಪಿಡುಗು ತಡೆಗೆ ಕ್ರಮವಹಿಸಬೇಕು ಎಂದು ಹೇಳಿದ್ದಾರೆ. ಸೋಂಕು ಪ್ರಕರಣಗಳು ಹೆಚ್ಚಿದಂತೇ ಆಸ್ಪತ್ರೆಗಳ ಮೇಲಿನ ಒತ್ತಡವು ಹೆಚ್ಚಿದೆ. ಲಸಿಕೆ ಅಭಿಯಾನ ಪರಿಣಾಮಕಾರಿ ಆಗಿಲ್ಲದೇ ಇರುವುದೇ ಈ ಸ್ಥಿತಿಗೆ ಕಾರಣ ಎಂದು ದೂಷಿಸಲಾಗುತ್ತಿದೆ.

ಸದ್ಯ, ಜರ್ಮನಿಯಲ್ಲಿ ಒಟ್ಟಾರೆ ಲಸಿಕೆ ಪಡೆದವರ ಪ್ರಮಾಣ ಶೇ 67ರಷ್ಟಿದೆ. ಕೋವಿಡ್ ಪಿಡುಗು ಆರಂಭವಾದಾಗಿನಿಂದ ಸುಮಾರು 49 ಲಕ್ಷ ಜನರು ಸೋಂಕು ಪೀಡಿತರಾಗಿದ್ದಾರೆ.

ಮಲೇಷ್ಯಾ: ಪ್ರಯಾಣಿಕರಿಗೆ ನಿರ್ಬಂಧ ತೆರವು?

ಕ್ವಾಲಾಲಂಪುರ (ರಾಯಿಟರ್ಸ್): ಅಂತರರಾಷ್ಟ್ರೀಯ ಪ್ರವಾಸಿಗರ ಮೇಲೆ ವಿಧಿಸಿರುವ ನಿರ್ಬಂಧವನ್ನು ಮಲೇಷ್ಯಾ ಸರ್ಕಾರ ಜನವರಿ 1ರ ವೇಳೆಗೆ ಬಹುತೇಕ ತೆರವುಗೊಳಿಸುವ ಸಂಭವವಿದೆ.

ಕೋವಿಡ್ ಪರಿಸ್ಥಿತಿ ಸುಧಾರಣೆಯ ಹಿಂದೆಯೇ ಪ್ರವಾಸೋದ್ಯಮ ಕ್ಷೇತ್ರಕ್ಕೆ ಚೇತರಿಕೆ ನೀಡಲು ಮಲೇಷ್ಯಾ ನಿರ್ಧರಿಸಿದೆ. ಲಸಿಕೆ ಅಭಿಯಾನ ಚುರುಕುಗೊಂಡ ಬಳಿಕ ಇತ್ತೀಚಿನ ವಾರಗಳಲ್ಲಿ ಕೋವಿಡ್ ಪ್ರಕರಣಗಳ ಪ್ರಮಾಣವು ಗಣನೀಯವಾಗಿ ತಗ್ಗಿದೆ.

ಬೀಜಿಂಗ್: ಮಾಲ್ ಬಂದ್, ವಸತಿ ಪ್ರದೇಶಕ್ಕೆ ನಿರ್ಬಂಧ

ಬೀಜಿಂಗ್ (ರಾಯಿಟರ್ಸ್): ಬೀಜಿಂಗ್ ಸುತ್ತಲ ಜಿಲ್ಲೆಗಳಲ್ಲಿ ಕೋವಿಡ್ ಉಲ್ಬಣಗೊಂಡಿರುವ ಹಿನ್ನೆಲೆಯಲ್ಲಿ, ಸೋಂಕು ಪ್ರಸರಣೆಯನ್ನು ತಡೆಯಲು ಅಧಿಕಾರಿಗಳು ರಾಜಧಾನಿಯಲ್ಲಿ ಅಂಗಡಿಗಳಿಗೆ ಬಾಗಿಲು ಹಾಕಿಸುತ್ತಿದ್ದಾರೆ. ಮಾಲ್‌ಗಳನ್ನು ಮುಚ್ಚಿಸುತ್ತಿದ್ದಾರೆ. ವಸತಿ ಪ್ರದೇಶಗಳನ್ನು ನಿರ್ಬಂಧಿಸುತ್ತಿದ್ದಾರೆ.

ಸ್ಥಳೀಯ ಲಾಕ್‌ಡೌನ್, ಸಾಮೂಹಿಕ ಪರೀಕ್ಷೆ ಮತ್ತು ಪ್ರಯಾಣ ನಿರ್ಬಂಧಗಳ ಮೂಲಕ ಚೀನಾವು ಈಗಾಗಲೇ ಕೊರೊನಾ ವೈರಸ್‌ನ ಪ್ರಸರಣವನ್ನು ನಿಗ್ರಹಿಸಿದೆ. ಆದರೆ ದೇಶೀಯ ಪ್ರಯಾಣದ ಕಾರಣದಿಂದಾಗಿ ರಾಷ್ಟ್ರವ್ಯಾಪಿ ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳ ಕಂಡು ಬಂದಿದ್ದು, ಅಧಿಕಾರಿಗಳು ಹೆಚ್ಚು ಜಾಗೃತರಾಗಿದ್ದಾರೆ.

ದೇಶದ ಸ್ವಾತಂತ್ರ್ಯ ಅವಮಾನಿಸಿದ ನಟಿ ಕಂಗನಾ: ವರುಣ್ ಗಾಂಧಿ ತರಾಟೆ

ನವದೆಹಲಿ (ಪಿಟಿಐ): ‘ಭಾರತಕ್ಕೆ 2014ರಲ್ಲಿ ಸ್ವಾತಂತ್ರ್ಯ ಸಿಕ್ಕಿದ್ದು, 1947ರಲ್ಲಿ ಸಿಕ್ಕಿದ್ದು ಭಿಕ್ಷೆ’ ಎಂದು ಹೇಳಿಕೆ ನೀಡಿರುವ ಬಾಲಿವುಡ್ ನಟಿ ಕಂಗನಾ ರನೌತ್ ವಿರುದ್ಧ ಬಿಜೆಪಿ ಸಂಸದ ವರುಣ್ ಗಾಂಧಿ ಗುರುವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ. ‘ಇದು ದೇಶ ವಿರೋಧಿ ಕೃತ್ಯ ಮತ್ತು ರನೌತ್ ಅವರನ್ನು ದೇಶವಿರೋಧಿ’ ಎನ್ನಬಹುದು ಎಂದು ಅವರು ಕಿಡಿಕಾರಿದ್ದಾರೆ.

‘ನಮ್ಮ ಸ್ವಾತಂತ್ರ್ಯ ಚಳವಳಿಯ ಅನನ್ಯ ತ್ಯಾಗವನ್ನು ಜನರು ಎಂದಿಗೂ ಮರೆಯಲು ಸಾಧ್ಯವಿಲ್ಲ. ಲಕ್ಷಾಂತರ ಜೀವಗಳು ಬಲಿಯಾದವು ಮತ್ತು ಲಕ್ಷಾಂತರ ಕುಟುಂಬಗಳು ನಾಶವಾದವು. ಇದನ್ನು ನಾಚಿಕೆಗೇಡಿನ ರೀತಿಯಲ್ಲಿ ಕೀಳಾಗಿಸುವುದನ್ನು ಕೇವಲ ಅಸಡ್ಡೆ ಅಥವಾ ನಿಷ್ಠುರ ಹೇಳಿಕೆಯಾಗಿ ಪರಿಗಣಿಸಿ ಕ್ಷಮಿಸಲು ಸಾಧ್ಯವಿಲ್ಲ’ ಎಂದರು.

‘ಇದು ದೇಶವಿರೋಧಿ ಕೃತ್ಯ ಮತ್ತು ನಾವು ಅದನ್ನು ಹಾಗೆಯೇ ಕರೆಯಬೇಕು. ಹಾಗೆನ್ನದಿದ್ದರೆ ಸ್ವಾತಂತ್ರ್ಯಕ್ಕಾಗಿ ರಕ್ತ ಸುರಿಸಿದ ಎಲ್ಲರಿಗೂ ದ್ರೋಹ ಮಾಡಿದಂತಾಗುತ್ತದೆ. ಅಂದು ಸಿಕ್ಕಿದ ಸ್ವಾತಂತ್ರ್ಯದಿಂದಾಗಿ ನಾವು ಇಂದು ರಾಷ್ಟ್ರವಾಗಿ ಎತ್ತರದಲ್ಲಿ ಮತ್ತು ಸ್ವತಂತ್ರವಾಗಿ ನಿಂತಿದ್ದೇವೆ’ ಎಂದು ಸಂಸದರು ಹೇಳಿದರು.

ಕಂಗನಾ ಅವರನ್ನು ಕಟುವಾಗಿ ಟೀಕಿಸಿದ ವರುಣ್ ಗಾಂಧಿ, ‘ಒಮ್ಮೆ ಮಹಾತ್ಮ ಗಾಂಧಿಯವರ ತ್ಯಾಗವನ್ನು ಅವಮಾನಿಸಿ, ಕೆಲವೊಮ್ಮೆ ಅವರ ಹಂತಕನನ್ನು ಗೌರವಿಸಿ, ಈಗ ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗದ ಬಗ್ಗೆ ತಿರಸ್ಕಾರದ ಮಾತು ಆಡಿದ್ದೀರಿ. ಇದನ್ನು ಹುಚ್ಚುತನ ಅಥವಾ ದೇಶದ್ರೋಹ ಎನ್ನದೇ ಮತ್ತೇನೆಂದು ಕರೆಯಬೇಕು’ ಎಂದು ಹರಿಹಾಯ್ದಿದ್ದಾರೆ.

ಚುನಾವಣೆಗೆ ಬಿಜೆಪಿ ₹252 ಕೋಟಿ ವೆಚ್ಚ

ನವದೆಹಲಿ (ಪಿಟಿಐ): ಈ ವರ್ಷದ ಆರಂಭದಲ್ಲಿ ನಡೆದ ಅಸ್ಸಾಂ, ಪುದುಚೇರಿ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಕೇರಳ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯು ಒಟ್ಟು ₹252 ಕೋಟಿ ವೆಚ್ಚ ಮಾಡಿದೆ. ಈ ಮೊತ್ತದಲ್ಲಿ ಶೇ 60ರಷ್ಟನ್ನು ಪಶ್ಚಿಮ ಬಂಗಾಳ ಒಂದರಲ್ಲೇ ವೆಚ್ಚ ಮಾಡಿದೆ.

ಚುನಾವಣಾ ಆಯೋಗಕ್ಕೆ ಬಿಜೆಪಿಯು ಸಲ್ಲಿಸಿರುವ ಚುನಾವಣಾ ವೆಚ್ಚದ ವರದಿಯಲ್ಲಿ ಈ ಮಾಹಿತಿ ಇದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯು ₹161 ಕೋಟಿ ವೆಚ್ಚ ಮಾಡಿದೆ. ತಮಿಳುನಾಡಿನಲ್ಲಿ ₹22.97 ಕೋಟಿ ವೆಚ್ಚ ಮಾಡಿದೆ. ಕೇರಳದಲ್ಲಿ ₹29.24, ಅಸ್ಸಾಂನಲ್ಲಿ ₹43.81 ಕೋಟಿ ಮತ್ತು ಪುದುಚೇರಿಯಲ್ಲಿ ₹4.79 ಕೋಟಿ ವೆಚ್ಚ ಮಾಡಿದೆ.

ಬಿಜೆಪಿಯು ಹೆಚ್ಚು ವೆಚ್ಚ ಮಾಡಿರುವ ರಾಜ್ಯಗಳಲ್ಲಿ ಸೋಲುಕಂಡಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ, ಕೇರಳದಲ್ಲಿ ಎಲ್‌ಡಿಎಫ್ ಮತ್ತು ತಮಿಳುನಾಡಿನಲ್ಲಿ ಡಿಎಂಕೆ ಅಧಿಕಾರಕ್ಕೆ ಬಂದಿವೆ. ಕೇರಳ ಮತ್ತು ತಮಿಳಿನಾಡಿನಲ್ಲಿ ಹೆಚ್ಚು ವೆಚ್ಚ ಮಾಡಿದ್ದರೂ ಬಿಜೆಪಿ ಗೆಲುವಿನ ಹತ್ತಿರ ಬರಲು ಸಾಧ್ಯವಾಗಿಲ್ಲ. ಪಶ್ಚಿಮ ಬಂಗಾಳದಲ್ಲಿ ಅಧಿಕಾರವನ್ನು ಉಳಿಸಿಕೊಂಡ ಟಿಎಂಸಿಯು, ಈ ಚುನಾವಣೆಗೆ ₹154.28 ಕೋಟಿ ವೆಚ್ಚ ಮಾಡಿದ್ದಾಗಿ ಘೋಷಿಸಿಕೊಂಡಿದೆ.

ಅಭಿವೃದ್ಧಿ– ಪರಿಸರ ನಡುವೆ ಸಮತೋಲನ ಅಗತ್ಯ: ಸುಪ್ರೀಂ

‘ಗಣಿಗಾರಿಕೆ ನಿಷೇಧದಿಂದ ಬೊಕ್ಕಸಕ್ಕೆ ನಷ್ಟ’

ಪ್ರಜಾವಾಣಿ ವಾರ್ತೆ

ನವದೆಹಲಿ: ಗಣಿಗಾರಿಕೆಯನ್ನು ಸಂಪೂರ್ಣ ನಿಷೇಧ ಮಾಡಿರುವುದು ಅಕ್ರಮ ಗಣಿಗಾರಿಕೆಗೆ ದಾರಿ ಮಾಡಿಕೊಟ್ಟಿರುವುದು ಮಾತ್ರವಲ್ಲದೇ, ಬೊಕ್ಕಸಕ್ಕೆ ಭಾರಿ ನಷ್ಟಕ್ಕೆ ಕಾರಣವಾಗಿದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿದೆ.

ಪರಿಸರ ರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಮತೋಲನದಿಂದ ಕೈಗೊಳ್ಳಬೇಕು ಎಂದು ಕೋರ್ಟ್ ಒತ್ತಿ ಹೇಳಿದೆ.

‘ಕಾನೂನುಬದ್ಧ ಗಣಿಗಾರಿಕೆಯನ್ನು ನಿಷೇಧಿಸಿದ್ದರಿಂದ ಅಕ್ರಮ ಗಣಿಗಾರಿಕೆ ಚಟುವಟಿಕೆಗಳು ಹೆಚ್ಚಳವಾಗಿ, ಮರಳು ಮಾಫಿಯಾ ನಡುವೆ ಸಂಘರ್ಷ, ಅಪರಾಧ ಚಟುವಟಿಕೆಗಳ ಹೆಚ್ಚಳ, ಜನರ ಪ್ರಾಣಹಾನಿಗೆ ಕಾರಣವಾಗಿದ್ದನ್ನು ನಿರ್ಲಕ್ಷಿಸುವಂತಿಲ್ಲ’ ಎಂದು ನ್ಯಾಯಮೂರ್ತಿ ಎಲ್. ನಾಗೇಶ್ವರ ರಾವ್ ನೇತೃತ್ವದ ತ್ರಿಸದಸ್ಯ ಪೀಠ ಹೇಳಿತು.

ರಾಜ್ಯ ತಜ್ಞರ ಮೌಲ್ಯಮಾಪನ ಸಮಿತಿ (ಎಸ್‌ಇಎಸಿ) ಮತ್ತು ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರವು (ಎಸ್‌ಇಐಎಎ) ಜಿಲ್ಲಾ ಸಮೀಕ್ಷಾ ವರದಿಗೆ (ಡಿಎಸ್‌ಆರ್) ಅನುಮೋದನೆ ನೀಡದ ಹೊರತು, ಮರಳು ಗಣಿಗಾರಿಕೆ ನಡೆಸುವಂತಿಲ್ಲ ಎಂಬ ಎನ್‌ಜಿಟಿ ಆದೇಶದ ವಿರುದ್ಧ ಬಿಹಾರ ಸರ್ಕಾರವು ನ್ಯಾಯಾಲಯದ ಮೊರೆ ಹೋಗಿತ್ತು.

ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಸಮೀಕ್ಷಾ ವರದಿಯು ಅಗತ್ಯ ಕಾರ್ಯವಿಧಾನವನ್ನು ಅನುಸರಿಸಿಲ್ಲ ಮತ್ತು ಸಂಬಂಧಿತ ಅಂಶಗಳನ್ನು ಪರಿಗಣಿಸಿಲ್ಲ ಎಂಬುದಾಗಿ ನ್ಯಾಯಮಂಡಳಿ ತಪ್ಪಾಗಿ ಅರ್ಥೈಸಿದೆ ಎಂದು ಬಿಹಾರ ಸರ್ಕಾರವನ್ನು ಪ್ರತಿನಿಧಿಸಿದ ಹಿರಿಯ ವಕೀಲ ಆತ್ಮರಾಮ್ ನಾಡಕರ್ಣಿ ವಾದಿಸಿದರು.

ಎನ್‌ಜಿಟಿ ಆದೇಶವನ್ನು ಪರಿಷ್ಕರಿಸಿದ ಕೋರ್ಟ್, ಬಿಹಾರದ ಎಲ್ಲ ಜಿಲ್ಲೆಗಳಲ್ಲಿ ಗಣಿಗಾರಿಕೆ ನಡೆಸುವ ಉದ್ದೇಶದಿಂದ ಹೊಸದಾಗಿ ಸಮೀಕ್ಷೆ ನಡೆಸಬೇಕು ಎಂದು ಆದೇಶಿಸಿತು. ಯಾವುದೇ ಹಾನಿ ಉಂಟುಮಾಡದೇ, ಪರಿಸರ ಸೂಕ್ಷ್ಮ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಗಣಿ ಚಟುವಟಿಕೆಗಳನ್ನು ನಡೆಸಲು ಬಿಹಾರ ರಾಜ್ಯ ಗಣಿಗಾರಿಕೆ ನಿಗಮಕ್ಕೆ ಕೋರ್ಟ್ ಅನುಮತಿ ನೀಡಿತು.

ಸಂಕ್ಷಿಪ್ತ ಸುದ್ದಿ

ಷಿ ಜಿಂಗ್‌ಪಿನ್ ಅಧಿಕಾರ ಭದ್ರ: ಕಮ್ಯುನಿಸ್ಟ್ ಪಕ್ಷ ನಿರ್ಧಾರ

ಬೀಜಿಂಗ್ (ಪಿಟಿಐ): ಚೀನಾದ ಕಮ್ಯುನಿಸ್ಟ್ ಪಕ್ಷದ (ಸಿಪಿಸಿ) ಪ್ರಮುಖ ಸಮಾವೇಶವು ಅಧ್ಯಕ್ಷ ಷಿ ಜಿಂಗ್‌ಪಿನ್ ಅಧಿಕಾರವನ್ನು ಭದ್ರಪಡಿಸುವ ಮಹತ್ವದ ನಿರ್ಣಯವನ್ನು ಅಂಗೀಕರಿಸಿದೆ.

ನವೆಂಬರ್ 8ರಿಂದ 11 ರವರೆಗೆ ಬೀಜಿಂಗ್‌ನಲ್ಲಿ ನಡೆದ 19ನೇ ಸಿಪಿಸಿ ಕೇಂದ್ರ ಸಮಿತಿಯ ಆರನೇ ಸರ್ವ ಸದಸ್ಯರ ಅಧಿವೇಶದಲ್ಲಿ ನಿರ್ಣಯವನ್ನು ಪರಿಶೀಲಿಸಿ ಅಂಗೀಕರಿಸಲಾಗಿದೆ.

ಭಾರತ ಮೂಲದ ವ್ಯಕ್ತಿಗೆ ಜೀವಾವಧಿ ಶಿಕ್ಷೆ

ಲಾಸ್ ಏಂಜಲಿಸ್ (ಪಿಟಿಐ): ಪತ್ನಿ ಮತ್ತು ಮೂವರು ಮಕ್ಕಳನ್ನು ಹತ್ಯೆ ಮಾಡಿದ್ದ ಭಾರತ ಮೂಲದ ಐ.ಟಿ ಉದ್ಯೋಗಿ ಶಂಕರ ನಾಗಪ್ಪ ಹುನಗುಂದ ಅವರಿಗೆ ಅಮೆರಿಕದ ಕೋರ್ಟ್ ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ.

ಪರೋಲ್ ಸೌಲಭ್ಯವಿಲ್ಲದೇ ಶಿಕ್ಷೆಯನ್ನು ಅನುಭವಿಸಬೇಕು ಎಂದೂ ಕೋರ್ಟ್ ಹೇಳಿದೆ. 2019ರಲ್ಲಿ ಕೃತ್ಯ ನಡೆದಿತ್ತು. ಕುಟುಂಬಕ್ಕೆ ಆರ್ಥಿಕವಾಗಿ ನೆರವು ಒದಗಿಸಲಾಗದೇ ಕ್ಯಾಲಿಫೋರ್ನಿಯಾದ ಅಪಾರ್ಟ್‌ಮೆಂಟ್‌ನಲ್ಲಿ ಈ ಕೃತ್ಯ ಎಸಗಿದ್ದೆ ಎಂದು ಅವರು ಒಪ್ಪಿಕೊಂಡಿದ್ದರು.

ಫಡಣವೀಸ್ ವಿರುದ್ಧ ಮಾನನಷ್ಟ ಮೊಕದ್ದಮೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ವಿರುದ್ಧ ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಅಳಿಯ ಸಮೀರ್ ಖಾನ್ ₹5 ಕೋಟಿ ಮೊತ್ತದ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ತಮ್ಮ ವಿರುದ್ಧ ಆಧಾರರಹಿತ ಆರೋಪಗಳನ್ನು ಫಡಣವೀಸ್ ಮಾಡಿರುವುದಕ್ಕಾಗಿ ಈ ಮೊಕದ್ದಮೆ ದಾಖಲಿಸಲಾಗಿದೆ ಎಂದು ಸಮೀರ್ ಹೇಳಿದ್ದಾರೆ.

ಜೊತೆಗೆ ಅವರು ಲಿಖಿತ ರೂಪದಲ್ಲಿ ಕ್ಷಮೆ ಕೇಳಬೇಕು ಎಂದು ಕೂಡಾ ಸಮೀರ್ ಆಗ್ರಹಿಸಿದ್ದಾರೆ.

ನ.10ರಂದು ನೋಟಿಸ್ ಕಳಿಸಲಾಗಿದೆ. ನೋಟಿಸ್‌ನ ಚಿತ್ರವನ್ನು ನವಾಬ್ ಪುತ್ರಿ ನಿಲೋಫರ್ ಮಲಿಕ್ ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಡ್ರಗ್ಸ್ ಹೊಂದಿದ್ದ ಪ್ರಕರಣದಲ್ಲಿ ಸಮೀರ್ ಅವರನ್ನು ಮಾದಕವಸ್ತು ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ಈ ವರ್ಷ ಜನವರಿಯಲ್ಲಿ ಬಂಧಿಸಿತ್ತು. ಸಾಕ್ಷಿಗಳ ಕೊರತೆ ಕಾರಣ ಹೇಳಿ ಕೋರ್ಟ್ ಅವರಿಗೆ ಜಾಮೀನು ನೀಡಿತ್ತು.

ಇದೇ ವರ್ಷ ನ. 1ರಂದು ಸುದ್ದಿ ವಾಹಿನಿಗಳ ಎದುರು ಮಾತನಾಡಿದ್ದ ಫಡಣವೀಸ್, ಮಲಿಕ್ ಅಳಿಯನ ಬಳಿ ಡ್ರಗ್ಸ್ ಇದ್ದದ್ದು ಸಾಬೀತಾಗಿದೆ ಎಂದಿದ್ದರು.

ಇದಕ್ಕೆ ಸಮೀರ್ ಪರ ವಕೀಲರು ಸ್ಪಷ್ಟನೆ ನೀಡಿದ್ದಾರೆ. ಸಮೀರ್ ಮನೆಯನ್ನು ಶೋಧಿಸಲಾಯಿತು. ಅವರ ಬಳಿ ಅನುಮಾನಾಸ್ಪದ ಪದಾರ್ಥಗಳು ದೊರಕಿಲ್ಲ ಎಂದು ಎನ್‌ಸಿಬಿಯ ಪಂಚನಾಮೆ ಸ್ಪಷ್ಟವಾಗಿ ಹೇಳಿದೆ. ನೀವು ಯಾವ ಮೂಲದಿಂದ ಸುಳ್ಳು ಮಾಹಿತಿ ಕಲೆಹಾಕಿದ್ದೀರಿ ಎಂದು ನೋಟಿಸ್‌ನಲ್ಲಿ ಪ್ರಶ್ನಿಸಿದ್ದಾರೆ. ಈ ನೋಟಿಸ್ ಕುರಿತು ಪ್ರತಿಕ್ರಿಯೆ ನೀಡಿರುವ ಮಹಾರಾಷ್ಟ್ರ ಬಿಜೆಪಿ ವಕ್ತಾರ ಕೇಶವ್ ಉಪಾಧ್ಯೆ, ‘ಸಮೀರ್ ವಿರುದ್ಧ ಈಗ ಜಾರಿಯಲ್ಲಿರುವ ಮೊಕದ್ದಮೆ ಸಂಬಂಧಿಸಿದಂತೆ ಫಡಣವೀಸ್ ಆರೋಪ ಮಾಡಿದ್ದಾರೆ. ಅವರು ಎಂಟು ತಿಂಗಳ ಕಾಲ ಇದೇ ಪ್ರಕರಣದ ಸಂಬಂಧ ಜೈಲಿನಲ್ಲಿದ್ದರು. ನಾವು ಈ ಮೊಕದ್ದಮೆಗೆ ಕಾನೂನು ರೀತಿಯಲ್ಲೇ ಪ್ರತಿಕ್ರಿಯೆ ನೀಡಬೇಕು ಎಂದು ನಿರ್ಧರಿಸಿದ್ದೇವೆ’ ಎಂದಿದ್ದಾರೆ.

ಮಲಿಕ್‌ಗೆ ಅಮೃತಾರಿಂದ ನೋಟಿಸ್

ದೇವೇಂದ್ರ ಫಡಣವೀಸ್ ಪತ್ನಿ ಅಮೃತಾ ಫಡಣವೀಸ್ ಅವರು ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಅವರಿಗೆ ಗುರುವಾರ ನೋಟಿಸ್ ಕಳಿಸಿದ್ದಾರೆ. ತಮ್ಮ ಫೋಟೊಗಳನ್ನು ಟ್ವೀಟ್ ಮಾಡಿ ತಮ್ಮನ್ನು ಮಾದಕವಸ್ತು ಮಾರಾಟಗಾರರು ಎಂದು ಬಿಂಬಿಸಿದ್ದಕ್ಕಾಗಿ ಮಲಿಕ್ ಮುಂದಿನ 48 ಗಂಟೆಗಳಲ್ಲಿ ಕ್ಷಮೆ ಕೇಳಬೇಕು ಮತ್ತು ತಮ್ಮ ವಿರುದ್ಧ ಮಾಡಿರುವ ಟ್ವೀಟ್‌ಗಳನ್ನು ಅಳಿಸಬೇಕು ಎಂದು ಅವರು ನೋಟಿಸ್‌ನಲ್ಲಿ ಹೇಳಿದ್ದಾರೆ.

ಒಂದು ವೇಳೆ ಅವರು ಕ್ಷಮೆ ಕೇಳದಿದ್ದರೆ ಮಾನನಷ್ಟ ಮೊಕದ್ದಮೆ ಮತ್ತು ನಷ್ಟ ತುಂಬಿಕೊಡುವಂತೆ ಮೊಕದ್ದಮೆ ಹೂಡುವುದಾಗಿ ಹೇಳಿದ್ದಾರೆ.

ಇಡಿ ದಾಳಿಯಿಂದ ಹೆದರಿಲ್ಲ: ಮಲಿಕ್

ವಕ್ಫ್ ಆಸ್ತಿಗಳ ಅಕ್ರಮ ಮಾರಾಟ ಮೊಕದ್ದಮೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಹಲವು ಕಡೆಗಳಲ್ಲಿ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ. ಈ ದಾಳಿ ಕುರಿತು ಪ್ರತಿಕ್ರಿಯೆ ನೀಡಿರುವ ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್, ‘ಇಂತಹ ದಾಳಿಗಳಿಂದ ನನ್ನನ್ನು ಹೆದರಿಸಲಾಗುವುದಿಲ್ಲ’ ಎಂದಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿದ ಅವರು, ವಕ್ಫ್‌ಗೆ ಸೇರಿದ 30,000 ಆಸ್ತಿಗಳ ಮೇಲೂ ತನಿಖೆ ನಡೆಸಲು ಇಡಿಗೆ ಸ್ವಾಗತ. ಇಡಿ ನನ್ನ ಮನೆ ಬಾಗಿಲಿಗೇ ಬಂದರೂ ನಾನು ಸಂಪೂರ್ಣ ಸಹಕಾರ ನೀಡುತ್ತೇನೆ ಎಂದಿದ್ದಾರೆ.

ಈ ಹೋರಾಟದಲ್ಲಿ ನಾನು ಒಬ್ಬನೇ ಇಲ್ಲ. ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ನನ್ನ ಸಂಪುಟ ಸಹೋದ್ಯೋಗಿಗಳ ಸಂಪೂರ್ಣ ಬೆಂಬಲ ನನಗೆ ಇದೆ ಎಂದಿದ್ದಾರೆ.

ಪೊಲೀಸ್ ವಶಕ್ಕೆ ಗೋಸಾವಿ

ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪ್ರಕರಣದ ಸಾಕ್ಷಿ ಕಿರಣ್ ಗೋಸಾವಿಯನ್ನು 2020ರ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪುಣೆ ಕಂಟೋನ್ಮೆಂಟ್ ಪೊಲೀಸರು ಗುರುವಾರ ವಶಕ್ಕೆ ತೆಗೆದುಕೊಂಡರು. ಮಲೇಷ್ಯಾದಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಮೂವರಿಂದ ₹4 ಲಕ್ಷ ಪಡೆದು ವಂಚಿಸಿದ್ದ ಪ್ರಕರಣದಲ್ಲಿ ಆತನನ್ನು ಬಂಧಿಸಲಾಗಿದೆ. ನ.17ರ ವರೆಗೂ ಗೋಸಾವಿಯನ್ನು ಪೊಲೀಸ್ ವಶಕ್ಕೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2018ರ ವಂಚನೆ ಪ್ರಕರಣವೊಂದರಲ್ಲಿ ಗೋಸವಿಯನ್ನು ಮಂಗಳವಾರವಷ್ಟೇ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿತ್ತು. ಪುಣೆಯ ಫರಸ್ಖಾನ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿತ್ತು.

ಚಿನ್ನ, ಬೆಳ್ಳಿ ದರ ಭಾರಿ ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ದರದಲ್ಲಿ ಭಾರಿ ಏರಿಕೆ ಕಂಡುಬಂದಿದೆ. ಚಿನ್ನದ ದರ 10 ಗ್ರಾಂಗೆ ₹ 883ರಷ್ಟು ಹೆಚ್ಚಾಗಿ ₹ 48,218ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,890ರಷ್ಟು ಏರಿಕೆ ಕಂಡು ₹ 65,190ಕ್ಕೆ ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಮತ್ತು ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯ ಕಾರಣಗಳಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬ್ಯಾಂಕ್ ಆಫ್ ಬರೋಡಾ ಲಾಭ ಶೇ 24ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಬ್ಯಾಂಕ್ ಆಫ್ ಬರೋಡಾ (ಬಿಒಬಿ) ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 2,088 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 1,679 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇಕಡ 24 ರಷ್ಟು ಏರಿಕೆ ಆಗಿದೆ.

ಬ್ಯಾಂಕ್‌ನ ಒಟ್ಟು ವರಮಾನವು ₹ 20,729 ಕೋಟಿಯಿಂದ ₹ 20,270 ಕೋಟಿಗೆ ಇಳಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 9.14ರಿಂದ ಶೇ 8.11ಕ್ಕೆ ಇಳಿಕೆ ಆಗಿದೆ.

ಏಪ್ರಿಲ್, ಮೇ ತಿಂಗಳಲ್ಲಿ 5ಜಿ ತರಂಗಾಂತರ ಹರಾಜು

ನವದೆಹಲಿ (ಪಿಟಿಐ): ದೇಶದಲ್ಲಿ 5ಜಿ ತರಂಗಾಂತರಗಳ ಹರಾಜು ಪ್ರಕ್ರಿಯೆಯು 2022ರ ಏಪ್ರಿಲ್, ಮೇ ತಿಂಗಳಿನಲ್ಲಿ ನಡೆಯುವ ಸಾಧ್ಯತೆ ಇದೆ ಎಂದು ಕೇಂದ್ರ ಸಂವಹನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ದೂರಸಂಪರ್ಕ ಕಂಪನಿಗಳಿಗೆ ಅನ್ವಯವಾಗುವಂತೆ ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರಕಟಿಸಿರುವ ಕೆಲವು ಕ್ರಮಗಳು ಸುಧಾರಣಾ ಪ್ರಕ್ರಿಯೆಯ ಮೊದಲ ಹಂತದವು. ಸರ್ಕಾರವು ಇನ್ನೂ ಹಲವು ಸುಧಾರಣಾ ಕ್ರಮಗಳನ್ನು ಈ ವಲಯಕ್ಕೆ ಸಂಬಂಧಿಸಿದಂತೆ ಪ್ರಕಟಿಸಲಿದೆ. ದೇಶದ ದೂರಸಂಪರ್ಕ ನಿಯಂತ್ರಣ ವ್ಯವಸ್ಥೆಯ ಸ್ವರೂಪವು ಮುಂದಿನ ಎರಡರಿಂದ ಮೂರು ವರ್ಷಗಳಲ್ಲಿ ಬದಲಾಗಬೇಕಿದೆ ಎಂದು ವೈಷ್ಣವ್ ಅವರು ಹೇಳಿದ್ದಾರೆ.

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) 5ಜಿ ತರಂಗಾಂತರಗಳ ಹರಾಜು ವಿಚಾರವಾಗಿ ಸಮಾಲೋಚನೆಯಲ್ಲಿ ತೊಡಗಿದೆ. ಇದು ತನ್ನ ವರದಿಯನ್ನು ಫೆಬ್ರುವರಿ ಅಂತ್ಯಕ್ಕೆ ಅಥವಾ ಮಾರ್ಚ್‌ನಲ್ಲಿ ಸಲ್ಲಿಸುವ ನಿರೀಕ್ಷೆ ಇದೆ. ಅದು ಸಲ್ಲಿಕೆಯಾದ ತಕ್ಷಣ ಹರಾಜು ಪ್ರಕ್ರಿಯೆ ನಡೆಯಲಿದೆ ಎಂದು ಸಚಿವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.



ಹರಾಜು ಪ್ರಕ್ರಿಯೆಯು ನಿರ್ದಿಷ್ಟವಾಗಿ ಇಂಥದ್ದೇ ಸಮಯಕ್ಕೆ ನಡೆಯಲಿದೆ ಎಂಬುದನ್ನು ಈ ಹಂತದಲ್ಲಿ ಹೇಳುವುದು ಕಷ್ಟ. ಟ್ರಾಯ್ ವರದಿ ಸಲ್ಲಿಸಲು ಎಷ್ಟು ಸಮಯ ತೆಗೆದುಕೊಳ್ಳಲಿದೆ ಎಂಬುದನ್ನು ಆಧರಿಸಿ ಹರಾಜು ಸಮಯ ತೀರ್ಮಾನ ಆಗಲಿದೆ ಎಂದಿದ್ದಾರೆ.

'ಮಾರ್ಚ್‌ನಲ್ಲಿ ಹರಾಜು ನಡೆಯಬಹುದು ಎಂದು ಈ ಮೊದಲು ಅಂದಾಜಿಸಲಾಗಿತ್ತು. ಆದರೆ, ಸಮಾಲೋಚನೆ ಪ್ರಕ್ರಿಯೆ ಸಂಕೀರ್ಣವಾಗಿದೆ. ಬಗೆಬಗೆಯ ಅಭಿಪ್ರಾಯಗಳು ಬರುತ್ತಿವೆ' ಎಂದೂ ಅವರು ತಿಳಿಸಿದ್ದಾರೆ.

ಮುಖ್ಯಾಂಶಗಳು

- 'ಮೂರು ವರ್ಷದಲ್ಲಿ ದೂರಸಂಪರ್ಕ ವ್ಯವಸ್ಥೆಯ ಸ್ವರೂಪದಲ್ಲಿ ಬದಲಾವಣೆ'
- 5ಜಿ ತರಂಗಾತರ ಹರಾಜು ಕುರಿತ ಟ್ರಾಯ್ ವರದಿ ಮಾರ್ಚ್‌ನಲ್ಲಿ ನಿರೀಕ್ಷೆ

ಷೇರುಪೇಟೆಯಲ್ಲಿ ಹೆಚ್ಚಿದ ಮಾರಾಟದ ಒತ್ತಡ

ಸೆನ್ಸೆಕ್ಸ್ 433 ಅಂಶ ಇಳಿಕೆ


ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ವಹಿವಾಟು ಸತತ ಮೂರನೇ ದಿನವೂ ನಕಾರಾತ್ಮಕವಾಗಿ ಅಂತ್ಯಕಂಡಿತು. ಬ್ಯಾಂಕಿಂಗ್, ಹಣಕಾಸು ಮತ್ತು ಮೂಲಸೌಕರ್ಯ ವಲಯದ ಷೇರುಗಳು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ಗುರುವಾರದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ (ಸೆನ್ಸೆಕ್ಸ್) 433 ಅಂಶ ಇಳಿಕೆ ಕಂಡು 59,919 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 144 ಅಂಶ ಇಳಿಕೆಯಾಗಿ 17,873ಕ್ಕೆ ತಲುಪಿತು.

ಅಮೆರಿಕದ ಹಣದುಬ್ಬರದ ಅಂಕಿ–ಅಂಶವನ್ನೂ ಒಳಗೊಂಡು ಜಾಗತಿಕ ಹಣದುಬ್ಬರದ ಒತ್ತಡವು ದೇಶಿ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಾಣುವಂತೆ ಮಾಡಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ. ಅಮೆರಿಕದ ಹಣದುಬ್ಬರವು ಶೇ 6.2ಕ್ಕೆ ತಲುಪಿದ್ದು, 30 ವರ್ಷಗಳ ಗರಿಷ್ಠ ಮಟ್ಟ ಇದು. ಹೀಗಾಗಿ ಅಮೆರಿಕದ ಕೇಂದ್ರೀಯ ಬ್ಯಾಂಕ್ ನಿರೀಕ್ಷೆಗಿಂತಲೂ ಮೊದಲೇ ಬಡ್ಡಿದರ ಹೆಚ್ಚಿಸುವ ಆತಂಕ ಎದುರಾಗಿದೆ. ಅಲ್ಲದೆ, ಅಮೆರಿಕದ ಬಾಂಡ್ ಗಳಿಕೆಯು ಸಹ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ.

ಸೆನ್ಸೆಕ್ಸ್‌ನಲ್ಲಿ ಎಸ್‌ಬಿಐ ಷೇರು ಮೌಲ್ಯವು ಶೇ 2.83ರಷ್ಟು ಗರಿಷ್ಠ ಇಳಿಕೆ ಕಂಡಿತು. ಐಸಿಐಸಿಐ ಬ್ಯಾಂಕ್ ಷೇರು ಮೌಲ್ಯ ಶೇ 1.09ರಷ್ಟು, ಹೌಸಿಂಗ್ ಫೈನಾನ್ಸ್ ಬಜಾಜ್ ಫಿನ್‌ಸರ್ವ್ ಮತ್ತು ಬಜಾಜ್ ಫೈನಾನ್ಸ್ ಹಾಗೂ ಎಚ್‌ಡಿಎಫ್‌ಸಿ ಬ್ಯಾಂಕ್, ಕೋಟಕ್ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್ ಷೇರುಗಳ ಬೆಲೆಯಲ್ಲಿಯೂ ಇಳಿಕೆ ಆಗಿದೆ.

ಷೇರುಪೇಟೆ ವಹಿವಾಟು ▼433



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,017
ಇಂದಿನ ಅಂತ್ಯ	17,873
▼	144
ದಿನದ ಕನಿಷ್ಠ	17,798

ವಿನಿಮಯ ದರ

$ ಡಾಲರ್	74.52
£ ಪೌಂಡ್	99.81
€ ಯುರೊ	85.37
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹460

ಸಣ್ಣ ಹೂಡಿಕೆದಾರರಿಗೆ ತೆರೆದುಕೊಳ್ಳಲಿದೆ ಹೊಸ ಅವಕಾಶ

ಆರ್‌ಬಿಐ ರಿಟೇಲ್ ಡೈರೆಕ್ಟ್‌ಗೆ ಪ್ರಧಾನಿ ಇಂದು ಚಾಲನೆ

ನವದೆಹಲಿ (ಪಿಟಿಐ): ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಾಂಡ್‌ಗಳಲ್ಲಿ ಸಣ್ಣ ಹೂಡಿಕೆದಾರರಿಗೆ ನೇರವಾಗಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸುವ ರಿಟೇಲ್ ಡೈರೆಕ್ಟ್ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಚಾಲನೆ ನೀಡಲಿದ್ದಾರೆ. ಅಲ್ಲದೆ, ಏಕೀಕೃತ ಒಂಬುಡ್ಸ್‌ಮನ್ ವ್ಯವಸ್ಥೆಯ ಆರಂಭಕ್ಕೆ ಕೂಡ ಅವರು ಹಸಿರು ನಿಶಾನೆ ತೋರಲಿದ್ದಾರೆ.

ಆರ್‌ಬಿಐ ರಿಟೇಲ್ ಡೈರೆಕ್ಟ್ ಯೋಜನೆಯು ಸಣ್ಣ ಹೂಡಿಕೆದಾರರಿಗೆ ಸರ್ಕಾರಿ ಬಾಂಡ್ ಮಾರುಕಟ್ಟೆಯು ಸುಲಭದಲ್ಲಿ ಲಭ್ಯವಾಗುವಂತೆ ಮಾಡುವ ಉದ್ದೇಶ ಹೊಂದಿದೆ ಎಂದು ಪ್ರಧಾನಿಯವರ ಕಚೇರಿಯು (ಪಿಎಂಒ) ಹೇಳಿದೆ. ಈ ಯೋಜನೆಯ ಮೂಲಕ ಸಣ್ಣ ಹೂಡಿಕೆದಾರರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೊರಡಿಸುವ ಟ್ರೆಷರಿ ಬಾಂಡ್, ಟ್ರೆಷರಿ ಬಿಲ್ ಹಾಗೂ ಸಾಲಪತ್ರಗಳಲ್ಲಿ ನೇರವಾಗಿ ಹೂಡಿಕೆ ಮಾಡಬಹುದು. ಸಣ್ಣ ಹೂಡಿಕೆದಾರರು ಆರ್‌ಬಿಐ ಮೂಲಕ ತಮ್ಮ ಸರ್ಕಾರಿ ಸಾಲಪತ್ರ ಖಾತೆಯನ್ನು ಆನ್‌ಲೈನ್ ಮೂಲಕ ತೆರೆದು, ಉಚಿತವಾಗಿ ಖಾತೆಯ ನಿರ್ವಹಣೆ ಮಾಡಬಹುದು.

ಏಕೀಕೃತ ಒಂಬುಡ್ಸ್‌ಮನ್ ಯೋಜನೆಯು ಗ್ರಾಹಕರ ದೂರುಗಳನ್ನು ಪರಿಹರಿಸುವ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸುವ ಉದ್ದೇಶ ಹೊಂದಿದೆ. ಗ್ರಾಹಕರು ತಮ್ಮ ದೂರುಗಳನ್ನು ಹೇಳಿಕೊಳ್ಳಲು ಹತ್ತಾರು ಕಡೆ ತಿರುಗಬೇಕಿಲ್ಲ. ದೂರುಗಳನ್ನು ಹೇಳಿಕೊಳ್ಳಲು ಹಾಗೂ ಪರಿಹಾರ ಪಡೆಯಲು ಇರುವ ಮಾರ್ಗಗಳ ಬಗ್ಗೆ ಬಹುಭಾಷಾ ಸಹಾಯವಾಣಿಯು ಮಾಹಿತಿ ನೀಡಲಿದೆ.

ಸರ್ಕಾರಕ್ಕೆ, ಹೂಡಿಕೆದಾರರಿಗೆ ಪ್ರಯೋಜನ

ಸಣ್ಣ ಹೂಡಿಕೆದಾರರಿಗೆ ಸರ್ಕಾರಿ ಬಾಂಡ್ ಮಾರುಕಟ್ಟೆಯಲ್ಲಿ ನೇರವಾಗಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸುವುದರಿಂದ ಸರ್ಕಾರಕ್ಕೆ ಸಾಲ ಪಡೆಯುವುದು ಸುಲಭವಾಗಲಿದೆ, ಹೂಡಿಕೆದಾರರ ನೆಲೆ ಇನ್ನಷ್ಟು ವಿಸ್ತಾರ ಆಗುವ ಸಾಧ್ಯತೆ ಇದೆ.

ಜಪಾನ್, ಬ್ರೆಜಿಲ್ ದೇಶಗಳಲ್ಲಿ ಸಣ್ಣ ಹೂಡಿಕೆದಾರರಿಗೆ ನೇರವಾಗಿ ಸಾಲಪತ್ರಗಳ ಮಾರುಕಟ್ಟೆಯಲ್ಲಿ ಪಾಲ್ಗೊಳ್ಳಲು ಅವಕಾಶ ಇದೆ. ಆರ್‌ಬಿಐನ ಈ ಹೊಸ ಕ್ರಮವು ಜನಸಾಮಾನ್ಯರ ಉಳಿತಾಯ ಪ್ರವೃತ್ತಿಯಲ್ಲಿ ದೊಡ್ಡ ಮಟ್ಟದ ಬದಲಾವಣೆ ತರಲಿದೆ ಎನ್ನಲಾಗಿದೆ. ನಿಶ್ಚಿತ ಠೇವಣಿಗೆ ಸರಿಸಮನಾದ ಅಥವಾ ಕೆಲವೊಮ್ಮೆ ಅದಕ್ಕಿಂತ ಹೆಚ್ಚಿನ ಲಾಭ ತಂದುಕೊಡುವ ಸರ್ಕಾರಿ ಬಾಂಡ್‌ಗಳಲ್ಲಿ ಸಣ್ಣ ಹೂಡಿಕೆದಾರರು ಹೆಚ್ಚಿನ ಹೂಡಿಕೆ ಮಾಡಬಹುದು ಎಂದು ನಿರೀಕ್ಷಿಸಲಾಗಿದೆ.

'ಆರ್‌ಬಿಐನ ಕ್ರಮವು ಉಳಿತಾಯದ ಮೇಲೆ ಪೂರಕ ಪರಿಣಾಮ ಬೀರಲಿದೆ' ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಸೌಮ್ಯಕಾಂತಿ ಘೋಷ್ ಅವರು ಈ ಹಿಂದೆ ಹೇಳಿದ್ದರು.

ಎಲ್ಲಿ ಹೂಡಿಕೆ ಮಾಡಬಹುದು?

ಆರ್‌ಬಿಐ ರಿಟೇಲ್ ಡೈರೆಕ್ಟ್ ಯೋಜನೆಯು ಚಾಲ್ತಿಗೆ ಬಂದ ನಂತರದಲ್ಲಿ ಸಣ್ಣ ಹೂಡಿಕೆದಾರರು ಆನ್‌ಲೈನ್ ಮೂಲಕ ಸರ್ಕಾರಿ ಸಾಲಪತ್ರ ಖಾತೆ ತೆರೆದು, ನೇರವಾಗಿ ಈ ಕೆಳಗಿನ ಹೂಡಿಕೆಗಳನ್ನು ಮಾಡಬಹುದು

1) ಕೇಂದ್ರ ಸರ್ಕಾರದ ಟ್ರೆಷರಿ ಬಿಲ್‌ಗಳು
2) ಕೇಂದ್ರ ಸರ್ಕಾರದ ಸಾಲಪತ್ರಗಳು
3) ಚಿನ್ನದ ಬಾಂಡ್‌ಗಳು
4) ರಾಜ್ಯ ಅಭಿವೃದ್ಧಿ ಸಾಲ (ಎಸ್‌ಡಿಎಲ್)



ಮುಂಬೈ ಧಾರಣೆ

ಶೇಂಗಾ

11-11-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಸೋಯಾ ಕಚ್ಚಾ	1180 (1181)
ಪಾಮ್ ವಾರದ ಡೆಲಿವರಿ	1178 (1180)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,200 (48,200)
ಬೆಳ್ಳಿ ಕೆ.ಜಿ 66,600 (64,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-51500
ಕುಮಟ	
ಚಿಪ್ಪು	27669-38669
ಕೋಕ	15099-34000
ಹಳೆಚಾಲಿ	42669-46779
ಹೊಸಚಾಲಿ	32199-38999
ಕುಂದಾಪುರ	
ಹಳೆಚಾಲಿ	42669-46779
ಹೊಸಚಾಲಿ	32199-38999
ಪುತ್ತೂರು	
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	33899-40599
ಚಾಲಿ	43511-47399
ಕೋಕ	26099-36112
ಕೆಂಪುಗೋಟು	21899-26699
ರಾಶಿ	43599-47299
ತಟ್ಟಿಬೆಟ್ಟೆ	34499-42899
ಶಿರಸಿ	
ಬೆಟ್ಟೆ	35119-42329
ಬಿಳಿಗೋಟು	22899-42969
ಚಾಲಿ	36369-47599
ರಾಶಿ	45299-47899
ಯಲ್ಲಾಪುರ	
ಬಿಳಿಗೋಟು	32099-41309
ಚಾಲಿ	43499-47609
ಕೋಕ	22012-31679
ಕೆಂಪುಗೋಟು	28211-34000
ರಾಶಿ	45369-52429
ರಾಮನಗರ ರೇಷ್ಮೆ	
ಮಿಶ್ರತಳಿ	378-529
ದ್ವಿತಳಿ	310-689

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13,000	---	205.90ಸೆಂಟ್ಸ್
ಎಸಿ	---	---	---	
ಆರ್‌ಪಿ	---	---	6250	ಲಂಡನ್
ಆರ್‌ಸಿ	---	3220	3660	2226 ಡಾಲರ್ಸ್

ಷೇರು ಮಾರಾಟ: ಒಎನ್‌ಜಿಸಿಗೆ ಕೇಂದ್ರ ಸೂಚನೆ

ನವದೆಹಲಿ (ರಾಯಿಟರ್ಸ್): ಒಎನ್‌ಜಿಸಿ ಕಂಪನಿಯು (ಆಯಿಲ್ ಆ್ಯಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್) ಎರಡು ಪ್ರಮುಖ ತೈಲ ಮತ್ತು ಅನಿಲ ನಿಕ್ಷೇಪಗಳಲ್ಲಿ ಹೊಂದಿರುವ ಪಾಲಿನಲ್ಲಿ ಶೇಕಡ 60ರಷ್ಟನ್ನು ಖಾಸಗಿಯವರಿಗೆ ಮಾರಾಟ ಮಾಡುವ ಬಗ್ಗೆ ಪರಿಶೀಲಿಸಬೇಕು ಎಂದು ಕೇಂದ್ರ ಸರ್ಕಾರವು ಸೂಚಿಸಿದೆ. ಒಎನ್‌ಜಿಸಿ ಪಾಲನ್ನು ಹೀಗೆ ಮಾರಾಟ ಮಾಡುವುದರಿಂದ ಉತ್ಪಾದನೆಯು ಹೆಚ್ಚಾಗುತ್ತದೆ ಎಂಬುದು ಸರ್ಕಾರದ ಲೆಕ್ಕಾಚಾರ ಎಂದು ಮೂಲಗಳು ತಿಳಿಸಿವೆ.

ದೇಶವು ತನ್ನ ತೈಲ ಅಗತ್ಯಗಳಿಗಾಗಿ ವಿದೇಶಗಳನ್ನು ಅವಲಂಬಿಸುವುದು ಕ್ರಮೇಣ ಜಾಸ್ತಿ ಆಗಿದೆ. ಖಾಸಗಿ ಕಂಪನಿಗಳಿಗೆ ಹೆಚ್ಚಿನ ಷೇರುಗಳನ್ನು ಮಾರಾಟ ಮಾಡಬೇಕು ಎಂಬ ಮಾತನ್ನು ಒಎನ್‌ಜಿಸಿ ಕಂಪನಿಯು ಪಾಲಿಸಲೇಬೇಕು ಎಂಬುದೇನೂ ಇಲ್ಲ ಎಂದು ಮೂಲಗಳು ಖಚಿತಪಡಿಸಿವೆ.

2020-21ರಲ್ಲಿ ಒಎನ್‌ಜಿಸಿ 2.02 ಕೋಟಿ ಟನ್ ಕಚ್ಚಾ ತೈಲ ಉತ್ಪಾದನೆ ಮಾಡಿದೆ.

ಚಿನ್ನದ ಇಟಿಎಫ್: ₹ 303 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಅಕ್ಟೋಬರ್‌ನಲ್ಲಿ ₹ 303 ಕೋಟಿ ಬಂಡವಾಳ ಹೂಡಿಕೆ ಆಗಿದೆ. ಸೆಪ್ಟೆಂಬರ್‌ನಲ್ಲಿ ಆಗಿದ್ದ ₹ 446 ಕೋಟಿಗೆ ಹೋಲಿಸಿದರೆ ಇಳಿಕೆ ಕಂಡುಬಂದಿದೆ.

'ಚಿನ್ನದ ಇಟಿಎಫ್‌ಗಳಲ್ಲಿ ಅಕ್ಟೋಬರ್‌ನಲ್ಲಿ ಆಗಿರುವ ಹೂಡಿಕೆಯು ಭರವಸೆ ಮೂಡಿಸಿದೆ. ನಿರೀಕ್ಷೆಯಂತೆಯೇ ಹಬ್ಬದ ಅವಧಿಯು ಚಿನ್ನದ ಇಟಿಎಫ್‌ಗೆ ಬೇಡಿಕೆ ಬರುವಂತೆ ಮಾಡಿದೆ. ಈ ಬಾರಿಯ ಧನ್‌ತೇರಸ್‌ನಲ್ಲಿ 50 ಟನ್ ಚಿನ್ನ ಮಾರಾಟ ಆಗಿದ್ದು, 2019ರ ಧನ್‌ತೇರಸ್ ಅವಧಿಯಲ್ಲಿ ಆಗಿದ್ದ ಮಾರಾಟಕ್ಕೆ ಹೋಲಿಸಿದರೆ 20 ಟನ್ ಹೆಚ್ಚು' ಎಂದು ಎಲ್‌ಎಕ್ಸ್‌ಎಂಇ (LXME) ಸ್ಥಾಪಕಿ ಪ್ರೀತಿ ರಾಠಿ ಗುಪ್ತಾ ಹೇಳಿದ್ದಾರೆ. ಚಿನ್ನದ ಇಟಿಎಫ್‌ಗಳ ನಿರ್ವಹಣಾ ಸಂಪತ್ತು ಮೌಲ್ಯವು ₹ 16,337 ಕೋಟಿಯಿಂದ ₹ 17,320 ಕೋಟಿಗೆ ಏರಿಕೆ ಆಗಿದೆ.

ಐಪಿಪಿಬಿ, ಬಜಾಜ್ ಅಲಯನ್ಸ್ ಪಾಲುದಾರಿಕೆ

ನವದೆಹಲಿ: ಗ್ರಾಮೀಣ ಪ್ರದೇಶಗಳ ಜನರನ್ನು ತಲುಪುವ ಉದ್ದೇಶದಿಂದ ಬಜಾಜ್ ಅಲಯನ್ಸ್ ಲೈಫ್ ಇನ್ಶುರೆನ್ಸ್ ಕಂಪನಿಯು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (ಐಪಿಪಿಬಿ) ಮತ್ತು ಅಂಚೆ ಇಲಾಖೆಯ ಸಹಯೋಗದೊಂದಿಗೆ ಎರಡು ಹೊಸ ವಿಮಾ ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ.

ಐಪಿಪಿಬಿ ಮೂಲಕ ಗ್ರಾಹಕರಿಗೆ ಅವಧಿ ಮತ್ತು ವಾರ್ಷಿಕ ಜೀವ ವಿಮಾ ಉತ್ಪನ್ನಗಳನ್ನು ನೀಡಲು ಕಂಪನಿ ಮುಂದಾಗಿದೆ. ಸಮಾಜದ ದುರ್ಬಲ ವರ್ಗದವರು, ಬ್ಯಾಂಕಿಂಗ್ ಸೌಲಭ್ಯದಿಂದ ದೂರ ಇರುವವರಿಗೆ ಆರ್ಥಿಕ ಸುರಕ್ಷತೆ ಒದಗಿಸಲು ಈ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ ಎಂದು ಮೂರು ಕಂಪನಿಗಳ ಜಂಟಿ ಹೇಳಿಕೆ ತಿಳಿಸಿದೆ.

ತಂಡದ ಜಯಕ್ಕೆ ಕಾಣಿಕೆ ನೀಡಿದ್ದು ತೃಪ್ತಿಕರ: ಮಿಚೆಲ್


ಡೆರಿಲ್ ಮಿಚೆಲ್

ಅಬುಧಾಬಿ (ಪಿಟಿಐ): ಪಂದ್ಯದ ಕೊನೆಯ ಹಂತದಲ್ಲಿ ಏನು ನಡೆಯುತ್ತಿದೆ ಎಂಬ ಅರಿವು ತಮಗಿರಲಿಲ್ಲ. ಆದರೆ ಅಂತಿಮವಾಗಿ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದ್ದು ಮಾತ್ರ ತೃಪ್ತಿದಾಯಕ ಎಂದು ನ್ಯೂಜಿಲೆಂಡ್ ತಂಡದ ಬ್ಯಾಟ್ಸ್‌ಮನ್ ಡೆರಿಲ್ ಮಿಚೆಲ್ ಹೇಳಿದ್ದಾರೆ.

ಬುಧವಾರ ರಾತ್ರಿ ಶೇಖ್ ಝುಯೇದ್ ಕ್ರೀಡಾಂಗಣದಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ನ್ಯೂಜಿಲೆಂಡ್ ಐದು ವಿಕೆಟ್‌ಗಳಿಂದ ಜಯಿಸಲು ಡೆರಿಲ್ ಮಿಚೆಲ್ ಅವರ ಬ್ಯಾಟಿಂಗ್ ಕಾರಣವಾಗಿತ್ತು. 47 ಎಸೆತಗಳಲ್ಲಿ 72 ರನ್‌ಗಳನ್ನು ಗಳಿಸಿದ ಅವರಿಗೆ ಪಂದ್ಯದ ಆಟಗಾರ ಗೌರವ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಕೊನೆಯ ಹಂತದಲ್ಲಿ ಸ್ವಲ್ಪ ಒತ್ತಡ ನಿರ್ಮಾಣವಾಗಿತ್ತು. ಆಗ ಅಲ್ಲಿ ಏನೇನು ನಡೆಯಿತೆಂಬುದು ಸರಿಯಾಗಿ ನೆನಪಿಲ್ಲ. ಆದರೆ ನನ್ನ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದು ಖುಷಿಯಾಯಿತು' ಎಂದರು.

'ಇಲ್ಲಿಯ ಪಿಚ್ ಮೇಲೆ ಹೊಸ ಚೆಂಡನ್ನು ಎದುರಿಸುವುದು ಕಠಿಣ ಸವಾಲಿನ ಕೆಲಸ. ಕಾನ್ವೆ ಮತ್ತು ನಿಶಾಮ್ ಆಡಿದ ಕೆಲವು ಹೊಡೆತಗಳು ಚಿತ್ತಾಪಹಾರಿಯಾಗಿದ್ದವು. ಒಂದು ಅಥವಾ ಎರಡು ಉತ್ತಮ ಓವರ್‌ಗಳು ಲಭಿಸಿದರೆ ಗೆಲುವಿನ ಹಾದಿ ಸುಲಭವಾಗುವ ವಿಶ್ವಾಸ ನಮಗಿತ್ತು. ನಿಶಾಮ್ ಅಂತಹದೊಂದು ಅವಕಾಶ ಸೃಷ್ಟಿಸಿಕೊಟ್ಟರು' ಎಂದು ಮಿಚೆಲ್ ಹೇಳಿದರು.

ನಿಶಾಮ್ ಸಂಭ್ರಮಿಸಲಿಲ್ಲ ಯಾಕೆ?

ನ್ಯೂಜಿಲೆಂಡ್ ತಂಡವು ಟಿ20 ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಫೈನಲ್ ತಲುಪಿದೆ. ಪಂದ್ಯ ಮುಕ್ತಾಯವಾದಾಗ ತಂಡದ ಡಗ್‌ಔಟ್‌ನಲ್ಲಿ ಎಲ್ಲರೂ ಸಂಭ್ರಮಿಸುವಾಗ ಆಲ್‌ರೌಂಡರ್ ಜೇಮ್ಸ್ ನಿಶಾಮ್ ಮಾತ್ರ ಮೌನವಾಗಿ ಕುಳಿತಿದ್ದರು. ಈ ವಿಡಿಯೊ ತುಣುಕು ಈಗ ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಗಮನ ಸೆಳೆದಿದೆ.

ತಮ್ಮ ಮೌನದ ಕುರಿತು ಟ್ವೀಟ್ ಮಾಡಿರುವ ನಿಶಾಮ್, 'ಕೆಲಸ ಸಂಪೂರ್ಣವಾಗಿದೆ. ಯೆಂದು ನನಗೆ ಅನಿಸಲಿಲ್ಲ' ಎಂದಿದ್ದಾರೆ. ಫೈನಲ್‌ನಲ್ಲಿ ಜಯಿಸುವ ಗುರಿಯನ್ನು ಸೂಚ್ಯವಾಗಿ ತಿಳಿಸಿದ್ದಾರೆ.

ಸೆಮಿಫೈನಲ್‌ನಲ್ಲಿ ಮುಗ್ಗರಿಸಿದ ಪಾಕಿಸ್ತಾನ; ಫೈನಲ್‌ನಲ್ಲಿ ಆಸ್ಟ್ರೇಲಿಯಾ–ನ್ಯೂಜಿಲೆಂಡ್ ಮುಖಾಮುಖಿ

ವೇಡ್, ಮಾರ್ಕಸ್ ಆಟಕ್ಕೆ ಒಲಿದ ಜಯ

ದುಬೈ(ಪಿಟಿಐ): ಮ್ಯಾಥ್ಯೂ ವೇಡ್ ಮತ್ತು ಮಾರ್ಕಸ್ ಸ್ಟೋಯಿನಿಸ್ ಅವರ ಅಬ್ಬರದ ಆಟದಿಂದಾಗಿ ಆಸ್ಟ್ರೇಲಿಯಾ ತಂಡವು ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನು ಸೋಲಿಸಿ, ಫೈನಲ್‌ಗೆ ಲಗ್ಗೆ ಇಟ್ಟಿತು.

ಪಂದ್ಯದಲ್ಲಿ ಇನ್ನೂ ಒಂದು ಓವರ್ ಬಾಕಿ ಇರುವಾಗಲೇ ಆಸ್ಟ್ರೇಲಿಯಾ ತಂಡವು 5 ವಿಕೆಟ್‌ಗಳ ಜಯದ ಸಂಭ್ರಮ ಆಚರಿಸಿತು. ಗುರುವಾರ ರಾತ್ರಿ 19ನೇ ಓವರ್‌ನಲ್ಲಿ ನಡೆದ ನಾಟಕೀಯ ತಿರುವುಗಳು ಪಂದ್ಯದ ದಿಕ್ಕನ್ನೇ ಬದಲಿಸಿದವು. 177 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆಸ್ಟ್ರೇಲಿಯಾ ತಂಡವನ್ನು 18 ಓವರ್‌ಗಳವರೆಗೂ ಪಾಕ್ ಬೌಲರ್‌ಗಳು ಒತ್ತಡದಲ್ಲಿಯೇ ಇರಿಸಿದ್ದರು.

ಟೂರ್ನಿಯಲ್ಲಿ ಯಶಸ್ವಿ ಬೌಲರ್ ಎನಿಸಿಕೊಂಡಿದ್ದ ಶಾಹೀನ್ ಶಾ ಆಫ್ರಿದಿ 19ನೇ ಓವರ್ ಬೌಲಿಂಗ್ ಮಾಡಲು ಕಣಕ್ಕಿಳಿದಾಗ ಆಸ್ಟ್ರೇಲಿಯಾಗೆ 22 ರನ್‌ಗಳ ಅಗತ್ಯವಿತ್ತು. ಈ ಓವರ್‌ನ ಮೊದಲೆರಡು ಎಸೆತಗಳಲ್ಲಿ ನಾಲ್ಕು ರನ್‌ಗಳು ಬಂದಿದ್ದವು. ಮೂರನೇ ಎಸೆತದಲ್ಲಿ ಮ್ಯಾಥ್ಯೂ ವೇಡ್ ಕೊಟ್ಟಿದ್ದ ಕ್ಯಾಚ್ ಕೈಚೆಲ್ಲಿದ ಪಾಕಿಸ್ತಾನ ಫೀಲ್ಡರ್ ಹಸನ್ ಅಲಿ ಪಂದ್ಯವೂ ಕೈಬಿಟ್ಟರು. ನಂತರದ ಮೂರು ಎಸೆತಗಳನ್ನೂ ಸಿಕ್ಸರ್‌ಗೆ ಎತ್ತಿದ ವೇಡ್ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

ಇದರೊಂದಿಗೆ ಪಾಕ್ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಮೊಹಮ್ಮದ್ ರಿಜ್ವಾನ್ (67, 52ಎಸೆತ, 3ಬೌಂಡರಿ, 4ಸಿಕ್ಸರ್) ಮತ್ತು ಫಕರ್ ಜಮಾನ್ (55; 32ಎಸೆತ, 3ಬೌಂಡರಿ, 4ಸಿಕ್ಸರ್) ಅವರ ಅರ್ಧಶತಕಗಳು ವ್ಯರ್ಥವಾದವು. ಅವರಿಂದಾಗಿ ಪಾಕ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 176 ರನ್ ಗಳಿಸಿತು. ಗುರಿ ಬೆನ್ನಟಿದ ಆಸ್ಟ್ರೇಲಿಯಾ ತಂಡಕ್ಕೆ ಆಫ್ರಿದಿ ಮೊದಲ ಓವರ್‌ನಲ್ಲಿಯೇ ಪೆಟ್ಟುಕೊಟ್ಟರು. ಮೂರನೇ ಎಸೆತದಲ್ಲಿ ಆ್ಯರನ್ ಫಿಂಚ್ ವಿಕೆಟ್ ಗಳಿಸಿದರು. ಆದರೆ, ದಿಟ್ಟ ಬ್ಯಾಟಿಂಗ್ ಮಾಡಿದ ಡೇವಿಡ್ ವಾರ್ನರ್ (49 ರನ್) ತಂಡದ ಹೋರಾಟಕ್ಕೆ ಬಲ ತುಂಬಿದರು. ಮಿಚೆಲ್ ಮಾರ್ಷ್ (28) ಕೂಡ ಚೇತೋಹಾರಿ ಆಟವಾಡಿದರು. ಆದರೆ, ಸ್ಪಿನ್ನರ್ ಶಾದಾಬ್ ಖಾನ್ (26ಕ್ಕೆ4) ಅವರ ಅಮೋಘ ಬೌಲಿಂಗ್‌ನಿಂದಾಗಿ ಆಸ್ಟ್ರೇಲಿಯಾ ತಂಡದ ಮಧ್ಯಮ ಕ್ರಮಾಂಕ ಕುಸಿಯಿತು. 100 ರನ್‌ಗಳು ದಾಟುವುದರೊಳಗೇ ಒಟ್ಟು ಐದು ವಿಕೆಟ್‌ಗಳನ್ನು ಕಳೆದುಕೊಂಡು ಆತಂಕ ಎದುರಿಸಿತು.

ಆದರೆ ಈ ಹಂತದಲ್ಲಿ ಮಾರ್ಕಸ್ ಸ್ಟೋಯಿನಿಸ್ (ಔಟಾಗದೆ 40; 31ಎಸೆತ) ಇನಿಂಗ್ಸ್ ಕಟ್ಟುವ ಹೊಣೆ ನಿಭಾಯಿಸಿದರು. ಅವರೊಂದಿಗೆ ಸೇರಿದ ಮ್ಯಾಥ್ಯೂ ವೇಡ್ (ಔಟಾಗದೆ 41; 17ಎಸೆತ) ತಂಡದ ಗೆಲುವು ಖಚಿತಪಡಿಸಿದರು. ಇಬ್ಬರೂ ಸೇರಿ ಕೊನೆಯ ಐದು ಓವರ್‌ಗಳಲ್ಲಿ 62 ರನ್‌ಗಳನ್ನು ಸೂರೆ ಮಾಡಿದರು.


ಆಸ್ಟ್ರೇಲಿಯಾದ ಮಾರ್ಕಸ್ ಸ್ಟೋಯಿನಿಸ್ (ಎಡ) ಮತ್ತು ಮ್ಯಾಥ್ಯೂ ವೇಡ್ –ಎಎಫ್‌ಪಿ ಚಿತ್ರ


ಡೇವಿಡ್ ವಾರ್ನರ್ ವಿಕೆಟ್ ಪಡೆದ ಶಾದಬ್ ಖಾನ್ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಪಾಕಿಸ್ತಾನ 4ಕ್ಕೆ 176 (20 ಓವರ್)
ಮೊಹಮ್ಮದ್ ರಿಜ್ವಾನ್ ಸಿ ಸ್ಮಿತ್ ಬಿ ಸ್ಟಾರ್ಕ್ 67 (52 ಎ, 4x3, 6x4), ಬಾಬರ್ ಆಜಂ ಸಿ ವಾರ್ನರ್ ಬಿ ಜಂಪಾ 39 (34 ಎ, 4x5), ಜಮಾನ್ ಔಟಾಗದೆ 55 (32 ಎ, 4x3, 6x4), ಆಸಿಫ್ ಸಿ ಸ್ಮಿತ್ ಬಿ ಕಮಿನ್ಸ್ 0 (1 ಎ), ಮಲಿಕ್ ಬಿ ಸ್ಟಾರ್ಕ್ 1 (2 ಎ), ಹಫೀಜ್ ಔಟಾಗದೆ 1 (1 ಎ
ಇತರೆ ಇತರೆ (ಬೈ 5, ಲೆಗ್‌ಬೈ 1, ನೋಬಾಲ್ 2, ವೈಡ್ 5) 13
ವಿಕೆಟ್ ಪತನ: 1-71 (ಬಾಬರ್ ಆಜಂ, 9.6), 2-143 (ಮೊಹಮ್ಮದ್ ರಿಜ್ವಾನ್ 17.2), 3-158 (ಆಸಿಫ್ ಅಲಿ, 18.1), 4-162 (ಶೋಯೆಬ್ ಮಲಿಕ್, 19.2
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4–0–38–2, ಜೋಶ್ ಹ್ಯಾಜಲ್‌ವುಡ್ 4–0–49–0, ಗ್ಲೆನ್ ಮ್ಯಾಕ್ಸ್‌ವೆಲ್ 3–0–20–0, ಪ್ಯಾಟ್ ಕಮಿನ್ಸ್ 4–0–30–1, ಆ್ಯಡಂ ಜಂಪಾ 4–0–22–1, ಮಿಷೆಲ್ ಮಾರ್ಷ್ 1–0–11–0

ಆಸ್ಟ್ರೇಲಿಯಾ 5ಕ್ಕೆ 177 (19 ಓವರ್)
ವಾರ್ನರ್ ಸಿ ರಿಜ್ವಾನ್ ಬಿ ಶಾದಬ್ 49 (30 ಎ, 4x3, 6x3), ಫಿಂಚ್ ಎಲ್‌ಬಿಡಬ್ಲ್ಯು ಅಫ್ರಿದಿ 0 (1 ಎ), ಮಾರ್ಷ್ ಸಿ ಆಸಿಫ್ ಬಿ ಶಾದಬ್ 28 (22 ಎ, 4x3, 6x1), ಸ್ಮಿತ್ ಸಿ ಫಕರ್ ಬಿ ಶಾದಬ್ 5 (6 ಎ, 4x1), ಮ್ಯಾಕ್ಸ್‌ವೆಲ್ ಸ ಹ್ಯಾರಿಸ್ ಬಿ ಶಾದಬ್ 7 (10 ಎ), ಸ್ಟೋಯಿನಿಸ್ ಔಟಾಗದೆ 40 (31 ಎ, 4x2, 6x2), ವೇಡ್ ಔಟಾಗದೆ 41 (17 ಎ, 4x2, 6x4)
ಇತರೆ (ಲೆಗ್ ಬೈ 2, ನೋಬಾಲ್ 3, ವೈಡ್ 2) 7
ವಿಕೆಟ್ ಪತನ: 1-1 (ಆ್ಯರನ್ ಫಿಂಚ್, 0.3), 2-52 (ಮಿಚೆಲ್ ಮಾರ್ಷ್, 6.2), 3-77 (ಸ್ಟೀವ್ ಸ್ಮಿತ್, 8.3), 4-89 (ಡೇವಿಡ್ ವಾರ್ನರ್, 10.1), 5-96 (ಗ್ಲೆನ್ ಮ್ಯಾಕ್ಸ್‌ವೆಲ್, 12.2)
ಬೌಲಿಂಗ್: ಶಹೀನ್ ಶಾ ಅಫ್ರಿದಿ 4–0–35–1, ಇಮದ್ ವಾಸಿಂ 3–0–25–0, ಹ್ಯಾರಿಸ್ ರವೂಫ್ 3–0–32–0, ಹಸನ್ ಅಲಿ 4–0–44–0, ಶಾದಬ್ ಖಾನ್ 4–0–26–4, ಮೊಹಮ್ಮದ್ ಹಫೀಜ್ 1–0–13–

ಫಲಿತಾಂಶ: ಆಸ್ಟ್ರೇಲಿಯಾಗೆ 5 ವಿಕೆಟ್‌ಗಳ ಜಯ


ಅಜಿಂಕ್ಯ ರಹಾನೆ

ಟೆಸ್ಟ್ ಸರಣಿ: ರೋಹಿತ್‌ಗೆ ವಿಶ್ರಾಂತಿ; ಅಜಿಂಕ್ಯ ನಾಯಕ

ನವದೆಹಲಿ(ಪಿಟಿಐ): ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿಯಿಂದ ರೋಹಿತ್ ಶರ್ಮಾ ವಿಶ್ರಾಂತಿ ಪಡೆದುಕೊಂಡಿದ್ದಾರೆ.
ಸರಣಿಯ ಮೊದಲ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಕೂಡ ಆಡುತ್ತಿಲ್ಲ. ಆದ್ದರಿಂದ ಅಜಿಂಕ್ಯ ರಹಾನೆ ತಂಡವನ್ನು ಮುನ್ನಡೆಸಲಿದ್ದಾರೆ.

ಗುರುವಾರ ಪ್ರಕಟಿಸಲಾದ ತಂಡದಲ್ಲಿ ಮೂವರು ಕನ್ನಡಿಗರು ಇದ್ದಾರೆ. ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್ ಮತ್ತು ಮಧ್ಯಮವೇಗಿ ಪ್ರಸಿದ್ಧಕೃಷ್ಣ ಸ್ಥಾನ ಪಡೆದುಕೊಂಡಿದ್ದಾರೆ.

ಕಾನ್ಪುರ ಮತ್ತು ಮುಂಬೈನಲ್ಲಿ ನಡೆಯಲಿರುವ ಟೆಸ್ಟ್ ಪಂದ್ಯಗಳಲ್ಲಿ ವಿಕೆಟ್‌ಕೀಪರ್ ರಿಷಭ್ ಪಂತ್, ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ ಅವರೂ ಆಡುತ್ತಿಲ್ಲ. ವಿಕೆಟ್‌ಕೀಪರ್‌ಗಳಾದ ವೃದ್ಧಿಮಾನ್ ಸಹಾ ಮತ್ತು ಕೆ.ಎಸ್. ಭರತ್ ಸ್ಥಾನ ಪಡೆದಿದ್ದಾರೆ.

ಇದೇ 17ರಿಂದ ಆರಂಭವಾಗಲಿರುವ ಕಿವೀಸ್ ಎದುರಿನ ಟಿ20 ಸರಣಿಯಲ್ಲಿ ಭಾರತ ತಂಡವನ್ನು ರೋಹಿತ್ ಶರ್ಮಾ ಮುನ್ನಡೆಸುವರು.

ತಂಡ: ಅಜಿಂಕ್ಯ ರಹಾನೆ (ನಾಯಕ), ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ಹನುಮ ವಿಹಾರಿ, ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್), ಅಕ್ಷರ್ ಪಟೇಲ್, ಆರ್. ಅಶ್ವಿನ್, ಉಮೇಶ್ ಯಾದವ್, ಇಶಾಂತ್ ಶರ್ಮಾ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಕೆ.ಎಸ್. ಭರತ್, ರವೀಂದ್ರ ಜಡೇಜ.

ಫುಟ್‌ಬಾಲ್: ಎಂಇಜಿ ಸೆಂಟರ್ ಎಫ್‌ಸಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಜುನ್ ಮಧು ಗಳಿಸಿದ ಎರಡು ಗೋಲುಗಳ ಬಲದಿಂದ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು ಜಯ ಗಳಿಸಿತು. ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬುಧವಾರ 4–1ರಿಂದ ಥಾಂಕೊಸ್ ಸ್ಟೂಡೆಂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಅರ್ಜುನ್ 49ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶದಲ್ಲಿ ಮೊದಲ ಗೋಲು ದಾಖಲಿಸಿದರು. 51ನೇ ನಿಮಿಷದಲ್ಲಿ ಫೀಲ್ಡ್ ಗೋಲು ಹೊಡೆದರು. ಇದಕ್ಕೂ ಮೊದಲು ಥಾಂಗ್‌ಲಲ್ವನ್ ಬಾರ್‌ಜಾನ್ (45 + 2ನೇ ನಿಮಿಷ) ಕಾಲ್ಚಳಕ ತೋರಿದ್ದರು.

ಜೈಪುರ ಟಿ20 ಪಂದ್ಯಕ್ಕೆ ನಿರ್ಬಂಧ ಇಲ್ಲ

ನವದೆಹಲಿ (ಪಿಟಿಐ): ಜೈಪುರದಲ್ಲಿ ಇದೇ 17ರಂದು ನಡೆಯಲಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟಿ20 ಪಂದ್ಯಕ್ಕೆ ಪ್ರೇಕ್ಷಕರ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತಿದೆ.

ಕ್ರೀಡಾಂಗಣದ ಗ್ಯಾಲರಿ ಸಾಮರ್ಥ್ಯದ ಪೂರ್ಣ ಪ್ರಮಾಣದಲ್ಲಿ ಪ್ರೇಕ್ಷಕರಿಗೆ ಅವಕಾಶ ನೀಡಲು ಆತಿಥೇಯ ಸಂಸ್ಥೆ ಸಿದ್ಧವಾಗಿದೆ. ಕೋವಿಡ್ –19 ತಡೆ ಲಸಿಕೆಯ ಒಂದೂ ಡೋಸ್ ಹಾಕದವರಿಗೂ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತಿದೆ. ಆದರೆ, ಅವರು ತಮ್ಮ ಕೋವಿಡ್ ನೆಗೆಟಿವ್ ಪ್ರಮಾಣಪತ್ರಗಳನ್ನು ನೀಡಬೇಕು. ಪಂದ್ಯ ನಡೆಯಲಿರುವ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ 25 ಸಾವಿರ ಜನರು ಕುಳಿತುಕೊಳ್ಳಬಹುದಾದಗ್ಯಾಲರಿಯಿದೆ. ಎಂಟು ವರ್ಷಗಳ ನಂತರ ಈ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಪಂದ್ಯ ನಡೆಯಲಿದೆ.

'ರಾಜ್ಯ ಸರ್ಕಾರದ ಮಾರ್ಗಸೂಚಿಯನ್ವಯ ಪೂರ್ಣಪ್ರಮಾಣದಲ್ಲಿ ಪ್ರೇಕ್ಷಕರ ಗ್ಯಾಲರಿ ತುಂಬಿಸಲು ಅವಕಾಶ ಇದೆ. ಒಂದೂ ಡೋಸ್ ಲಸಿಕೆ ಹಾಕಿಸದಿದ್ದರೂ ನಡೆಯುತ್ತದೆ. ಆದರೆ, ನೆಗೆಟಿವ್ ಪ್ರಮಾಣಪತ್ರವನ್ನು ಪ್ರವೇಶದ್ವಾರದಲ್ಲಿ ತೋರಿಸಬೇಕು. ಮಾಸ್ಕ್ ಧರಿಸುವುದು ಕಡ್ಡಾಯ' ಎಂದು ರಾಜಸ್ಥಾನ ಕ್ರಿಕೆಟ್ ಸಂಸ್ಥೆ ಕಾರ್ಯದರ್ಶಿ ಮಹೇಂದ್ರ ಶರ್ಮಾ ಹೇಳಿದ್ದಾರೆ.

ಕೋವಿಡ್ ಕಾಲಘಟ್ಟದಲ್ಲಿ ಯಾವುದೇ ನಿರ್ಬಂಧಗಳಿಲ್ಲದೇ ನಡೆ ಯುತ್ತಿರುವ ಮೊದಲ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ ಇದಾಗಲಿದೆ. ನವೆಂಬರ್ 14ರಂದು ಯುಎಇಯಲ್ಲಿ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್ ನಡೆಯಲಿದೆ. ನ್ಯೂಜಿಲೆಂಡ್ ಫೈನಲ್ ತಲುಪಿದೆ. ಭಾರತ ತಂಡವು ಸೆಮಿಫೈನಲ್ ತಲುಪುವಲ್ಲಿ ವಿಫಲವಾಗಿತ್ತು.. ಕಿವೀಸ್ ಬಳಗವು ನ.15ರಂದು ಭಾರತಕ್ಕೆ ಬಂದಿಳಿಯಲಿದೆ. ಮೂರು ಟಿ20 ಪಂದ್ಯಗಳ ಸರಣಿ ಮತ್ತು ಎರಡು ಟೆಸ್ಟ್‌ಗಳ ಸರಣಿ ನಡೆಯಲಿದೆ.

ಪ್ಲಿಸ್ಕೋವಾಗೆ ಗೆಲುವು

ಗಾಡೆಲೆಜರಾ, ಮೆಕ್ಸಿಕೊ (ಎಪಿ): ಜೆಕ್ ಗಣರಾಜ್ಯದ ಕ್ಯಾರೊಲಿನಾ ಪ್ಲಿಸ್ಕೋವಾ ಡಬ್ಲ್ಯುಟಿಎ ಫೈನಲ್ಸ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ಬುಧವಾರ ಪ್ಲಿಸ್ಕೋವಾ 4–6, 6–2, 7–6 (6) ರಿಂದ ಗಾರ್ಬೈನ್ ಮುಗುರುಜಾ ಎದುರು ಜಯಿಸಿದರು.

ಮೆಕ್ಸಿಕೊದ ಎರಡನೇ ಅತಿ ದೊಡ್ಡ ನಗರವಾಗಿರುವ ಗಾಡೆಲೆಜರಾ ಸಮುದ್ರಮಟ್ಟದಿಂದ ಐದು ಸಾವಿರ ಅಡಿ ಎತ್ತರದಲ್ಲಿದೆ. ಇಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಆಡಲು ಇಬ್ಬರೂ ಸ್ವಲ್ಪ ಸಮಯ ತೆಗೆದುಕೊಂಡರು. ನಿಧಾನವಾಗಿ ಹೊಂದಿಕೊಂಡರು.

2018, 2019ರಲ್ಲಿ ಪ್ಲಿಸ್ಕೋವಾ ಡಬ್ಲ್ಯುಟಿಎ ಸೆಮಿಫೈನಲ್ ಪ್ರವೇಶಿಸಿದ್ದರು. 2020ರಲ್ಲಿ ಟೂರ್ನಿ ರದ್ದಾಗಿತ್ತು. ಈ ವರ್ಷ ವಿಂಬಲ್ಡನ್, ಸಿನ್ಸಿನಿಟಿ ಮತ್ತು ಮಾಂಟ್ರೆಲ್ ಓಪನ್ ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ.


ಕ್ಯಾರೊಲಿನಾ ಪ್ಲಿಸ್ಕೋವಾ

ಜೂನಿಯರ್ ಹಾಕಿ ತಂಡಕ್ಕೆ ವಿವೇಕ್ ನಾಯಕ

ಭುವನೇಶ್ವರದಲ್ಲಿ ಇದೇ 24ರಿಂದ ನಡೆಯಲಿರುವ ವಿಶ್ವಕಪ್ ಹಾಕಿ ಟೂರ್ನಿ

ಭುವನೇಶ್ವರ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಭಾರತ ಹಾಕಿ ತಂಡದಲ್ಲಿ ಆಡಿದ್ದ ವಿವೇಕ್ ಸಾಗರ್ ಪ್ರಸಾದ್ ಅವರನ್ನು ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಭುವನೇಶ್ವರದಲ್ಲಿ ಇದೇ 24ರಿಂದ ಟೂರ್ನಿ ನಡೆಯಲಿದೆ. 16 ತಂಡಗಳು ಕಣದಲ್ಲಿವೆ. ಭಾರತ ತಂಡವು ಮೊದಲ ಪಂದ್ಯದಲ್ಲಿ ಫ್ರಾನ್ಸ್ ಎದುರು ಆಡಲಿದೆ.

21 ವರ್ಷದ ವಿವೇಕ್ ಮಧ್ಯಪ್ರದೇಶದ ಇಟಾರ್ಸಿಯವರು.

2018ರ ಯೂತ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದ ತಂಡದ ಡಿಫೆಂಡರ್ ಸಂಜಯ್ ಅವರನ್ನು ಉಪ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಒಟ್ಟು 18 ಆಟಗಾರರ ತಂಡವನ್ನು ಆಯ್ಕೆ ಮಾಡಲಾಗಿದೆ. 2016ರಲ್ಲಿ ಭಾರತ ತಂಡವು ವಿಶ್ವಕಪ್ ಜಯಿಸಿತ್ತು.

'ಉತ್ತಮ ಸಮತೋಲನ ಇರುವ ತಂಡ ಇದಾಗಿದೆ. ದೊಡ್ಡ ಟೂರ್ನಿಯಲ್ಲಿ ಆಡುವ ಅವಕಾಶ ಜೂನಿಯರ್ ಪ್ರತಿಭೆಗಳಿಗೆ ಲಭಿಸುತ್ತಿದೆ. ಇದು ದೇಶದ ಹಾಕಿ ಬೆಳವಣಿಗೆಗೆ ಪೂರಕವಾಗಿದೆ' ಎಂದು ಹಾಕಿ ತಂಡದ ಮುಖ್ಯ ಕೋಚ್ ಗ್ರಹಾಮ್ ರೀಡ್ ಹೇಳಿದ್ದಾರೆ.

ಮುಖ್ಯಾಂಶಗಳು
- ಟೋಕಿಯೊ ಒಲಿಂಪಿಕ್ಸ್‌ನ ಹಾಕಿಯಲ್ಲಿ ಆಡಿದ್ದ ವಿವೇಕ್
- ಮೊದಲ ಪಂದ್ಯದಲ್ಲಿ ಭಾರತ ತಂಡಕ್ಕೆ ಫ್ರಾನ್ಸ್ ಎದುರಾಳಿ
- ಸಂಜಯ್ ಅವರ ಹೆಗಲಿಗೆ ಉಪನಾಯಕನ ಹೊಣೆ

ತಂಡ: ವಿವೇಕ್ ಸಾಗರ್ ಪ್ರಸಾದ್ (ನಾಯಕ), ಸಂಜಯ್ (ಉಪನಾಯಕ), ಶ್ರದ್ಧಾನಂದ ತಿವಾರಿ, ಪ್ರಶಾಂತ್ ಚೌಹಾಣ್ (ಗೋಲ್‌ಕೀಪರ್), ಸುದೀಪ್ ಚಿರ್ಮಾಕೊ, ರಾಹುಲ್ ಕುಮಾರ್ ರಾಜಭಾರ್, ಮಣಿಂದರ್ ಸಿಂಗ್, ಪವನ್ (ಗೋಲ್‌ಕೀಪರ್), ವಿಷ್ಣುಕಾಂತ್ ಸಿಂಗ್, ಅಂಕಿತ್ ಪಾಲ್, ಉತ್ತಮ ಸಿಂಗ್, ಸುನೀಲ್ ಜೊಜೊ, ಮಂಜೀತ್, ರವಿಚಂದ್ರ ಸಿಂಗ್ ಮೊರಂಗತಾಮ್, ಅಭಿಷೇಕ್ ಲಕ್ರಾ, ಯಶದೀಪ್ ಸಿವಾಚ್, ಗುರಮುಖ್ ಸಿಂಗ್, ಅರೈಜೀತ್ ಸಿಂಗ್ ಹುಂದಾಲ್.


ವಿವೇಕ್ ಸಾಗರ್ ಪ್ರಸಾದ್

ಪ್ಯಾರಾಲಿಂಪಿಕ್ಸ್‌ನಲ್ಲಿ ಸಾಧನೆ ಮಾಡಿದ ಭಾರತದ ಆಟಗಾರರು

ಪ್ರಮೋದ್, ಮನೋಜ್‌ಗೆ ಬಿಡಬ್ಲ್ಯುಎಫ್ ಪ್ರಶಸ್ತಿ

ನವದೆಹಲಿ (ಪಿಟಿಐ): ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಪ್ರಮೋದ್ ಭಗತ್ ಅವರು ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಫೆಡರೇಷನ್‌ನ (ಬಿಡಬ್ಲ್ಯುಎಫ್) ವರ್ಷದ ಪ್ಯಾರಾ ಬ್ಯಾಡ್ಮಿಂಟನ್ ಪಟು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪುರುಷರ ವಿಭಾಗದಲ್ಲಿ ಆರು ಮಂದಿಯನ್ನು ಆಯ್ಕೆ ಮಾಡಲಾಗಿದ್ದು ವರ್ಷದ ಜೋಡಿ ಆಟಗಾರರ ವಿಭಾಗದಲ್ಲಿ ಮನೋಜ್ ಸರ್ಕಾರ್ ಅವರನ್ನು ಕೂಡ ಆರಿಸಲಾಗಿದೆ. ಈ ವಿಭಾಗವನ್ನು ಇದೇ ಮೊದಲ ಬಾರಿ ಸೇರಿಸಲಾಗಿದೆ ಎಂದು ಬಿಡಬ್ಲ್ಯುಎಫ್ ಗುರುವಾರ ತಿಳಿಸಿದೆ.

ಹಾಲಿ ವಿಶ್ವ ಚಾಂಪಿಯನ್ ಆಗಿರುವ ಪ್ರಮೋದ್ ಭಗತ್ ಟೋಕಿಯೊದಲ್ಲಿ ನಡೆದ ಪುರುಷರ ಸಿಂಗಲ್ಸ್‌ನ ಎಸ್‌ಎಲ್3 ವಿಭಾಗದಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದರು. ಮನೋಜ್ ಸರ್ಕಾರ್ ಇದೇ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕಲೊಂಡಿದ್ದರು.

ನಾಲ್ಕನೇ ವಯಸ್ಸಿನಲ್ಲಿ ಪೋಲಿಯೊ ಪೀಡಿತರಾದ ಪ್ರಮೋದ್ ಅವರಿಗೆ ಈಗ 33 ವರ್ಷ. ನೆರೆಮನೆಯ ಮಕ್ಕಳು ಆಡುತ್ತಿದ್ದುದನ್ನು ಕಂಡು ಬಾಲ್ಯದಲ್ಲೇ ಬ್ಯಾಡ್ಮಿಂಟನ್ ಕ್ರೀಡೆಯತ್ತ ಒಲವು ತೋರಿದ ಪ್ರಮೋದ್ ಆರಂಭದಲ್ಲಿ ಎಲ್ಲರ ವಿರುದ್ಧವೂ ಸ್ಪರ್ಧಿಸುತ್ತಿದ್ದರು. 2006ರಲ್ಲಿ ಸ್ಪರ್ಧಾತ್ಮಕ ಪ್ಯಾರಾ ಬ್ಯಾಡ್ಮಿಂಟನ್ ಕಡೆಗೆ ಕಣಕ್ಕೆ ಇಳಿಯಲು ನಿರ್ಧರಿಸಿದ್ದರು.

ಎಸ್‌ಎಲ್3 ವಿಭಾಗದಲ್ಲಿ ಏಷ್ಯನ್ ಚಾಂಪಿಯನ್ ಕೂಡ ಆಗಿರುವ ಅವರು ವಿಶ್ವದ ಒಂದನೇ ಕ್ರಮಾಂಕದ ಆಟಗಾರನೂ ಆಗಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಚಾಂಪಿಯನ್ ಆದ ವಿಕ್ಟರ್ ಅಕ್ಸೆಲ್ಸನ್ ಮತ್ತು ಚೆನ್ ಯೂ ಫೀ ಅವರು ಕೂಡ ಪ್ರಶಸ್ತಿಗೆ ಪಾತ್ರರಾದವರ ಪಟ್ಟಿಯಲ್ಲಿದ್ದಾರೆ.


ಪ್ರಮೋದ್ ಭಗತ್ –ಟ್ವಿಟರ್ ಚಿತ್ರ

ಬಿಡಬ್ಲ್ಯುಎಫ್ ವರ್ಷದ ಆಟಗಾರರು

ಆಟಗಾರ	ದೇಶ
ಪುರುಷರ ವಿಭಾಗ	
ವಿಕ್ಟರ್ ಅಕ್ಸೆಲ್ಸನ್	ಡೆನ್ಮಾರ್ಕ್
ಆ್ಯಂಡೆರ್ಸ್ ಆಂಟೊನ್ಸೆನ್	ಡೆನ್ಮಾರ್ಕ್
ನಗ್ ಯೀ ಲಿಯು	ಚೀನಾ
ಯೂಟಾ ವಟನಬೆ	ಜಪಾನ್
ಮಹಿಳೆಯರ ವಿಭಾಗ	
ಚೆನ್ ಯೂ ಫೀ	ಚೀನಾ
ಕರೋಲಿನಾ ಮರಿನ್	ಸ್ಪೇನ್
ತಾಯ್ ಜು ಯಿಂಗ್	ತೈಪೆ
ಅಕಾನೆ ಯಾಮಗುಚಿ	ಜಪಾನ್


ಮನೋಜ್ ಸರ್ಕಾರ್ –ಟ್ವಿಟರ್ ಚಿತ್ರ

ರುಜುಲಾ, ಸಾತ್ವಿಕ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮಂಡ್ಯ: ಉತ್ತಮ ಆಟವಾಡಿದ ರುಜುಲಾ ರಾಮು ಅವರು ಮಂಡ್ಯ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆ ಗುರುವಾರ ಆಯೋಜಿಸಿದ್ದ ರಾಜ್ಯ ಜೂನಿಯರ್ ಬ್ಯಾಂಡ್ಮಿಂಟನ್ ಟೂರ್ನಿಯಲ್ಲಿ ಬಾಲಕಿಯರ 15 ಹಾಗೂ 17 ವರ್ಷದೊಳಗಿನ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಬೆಂಗಳೂರಿನ 'ಪಟೇಲ್ಸ್ ಇನ್ ಕ್ಲಬ್'ನ ರುಜುಲಾ 17 ವರ್ಷದೊಳಗಿನ ವಿಭಾಗದ ಫೈನಲ್‌ನಲ್ಲಿ ಪಿಪಿಬಿಎಯ ನೆಯ್ಸಾ ಕಾರ್ಯಪ್ಪ ಅವರನ್ನು 22–20, 21–12ರಿಂದ ಸೋಲಿಸಿದರು. 15 ವರ್ಷದೊಳಗಿನ ವಿಭಾಗದ ಫೈನಲ್‌ನಲ್ಲಿ ಬೆಂಗಳೂರಿನ ಐ ಸ್ಪೋರ್ಟ್ ಅಕಾಡೆಮಿಯ ಎ.ಎಸ್.ಮೌನಿತಾ ವಿರುದ್ಧ 21–12, 21–13 ರಲ್ಲಿ ಗೆಲುವು ಪಡೆದರು.

ಸಾತ್ವಿಕ್ ಶಂಕರ್‌ಗೆ ಪ್ರಶಸ್ತಿ: ಬಾಲಕರ 17 ವರ್ಷದೊಳಗಿನ ವಿಭಾಗದ ಫೈನಲ್‌ನಲ್ಲಿ ಕೆಬಿಎ ಅಕಾಡೆಮಿಯ ಸಾತ್ವಿಕ್ ಶಂಕರ್ 21-16 21-17 ರಲ್ಲಿ ಪಿಪಿಬಿಎಯ ನಿಕೋಲಸ್ ಎನ್.ರಾಜ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.

15 ವರ್ಷದೊಳಗಿನ ವಿಭಾಗದ ಫೈನಲ್‌ನಲ್ಲಿ ಐ ಸ್ಪೋರ್ಟ್ಸ್‌ನ ಅವಿ ಬಾಸಕ್ ತಮ್ಮದೇ ಅಕಾಡೆಮಿಯ ಸಿದ್ಧಾರ್ಥ್ ಗುಂಟೂರಿ ವಿರುದ್ಧ 21–17, 21–11ರ ಅಂತರದಲ್ಲಿ ಜಯ ಸಾಧಿಸಿದರು.

ಈಕ್ವೆಸ್ಟ್ರಿಯನ್: ಶ್ಲೋಕ್ ಮಿಂಚು

ಬೆಂಗಳೂರು: ಶ್ಲೋಕ್ ಜುಂಜುನವಾಲಾ ಅವರು ಎಂಬಸಿ ಇಂಟರ್‌ನ್ಯಾಷನ್ ರೈಡಿಂಗ್ ಸ್ಕೂಲ್‌ನಲ್ಲಿ ನಡೆದ ಈಕ್ವೆಸ್ಟ್ರಿಯನ್ ಪ್ರೀಮಿಯರ್ ಲೀಗ್‌ನ ಜೂನಿಯರ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು. 100ರಿಂದ 105 ಸೆಂಟಿಮೀಟರ್ ಶೋ ಜಂಪಿಂಗ್ ನಾಕೌಟ್‌ನಲ್ಲಿ ಅವರು ಗೆದ್ದರು. ಫೋರ್ ಬಾರ್ ಶೋ ಜಂಪಿಂಗ್‌ನಲ್ಲಿ ಪ್ರಣಯ್ ಖರೆ ಮೊದಲಿಗರಾದರು.

ಆತಂಕ ಮೂಡಿಸಿದ್ದ ‘ಕೊಲೆ’ ಸುದ್ದಿ

ನಿಶಾ ಚಾಂಪಿಯನ್

ಗೊಂಡಾ, ಉತ್ತರಪ್ರದೇಶ (ಪಿಟಿಐ): ನಿಶಾ ದಹಿಯಾ ಅವರು ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನ 65 ಕೆಜಿ ವಿಭಾಗದಲ್ಲಿ ಚಾಂಪಿಯನ್ ಪಟ್ಟಕ್ಕೇರಿದರು. ಮೊದಲ ದಿನವಾದ ಗುರುವಾರ ನಡೆದ ಬೌಟ್‌ನಲ್ಲಿ ಅವರು ಪಂಜಾಬ್‌ನ ಜಸ್‌ಪ್ರೀತ್ ಕೌರ್ ವಿರುದ್ಧ ಸುಲಭ ಜಯ ಗಳಿಸಿದರು.

ಅವರದೇ ಹೆಸರಿನ ಕುಸ್ತಿಪಟು ಹಾಗೂ ಸಹೋದರನನ್ನು ಸೋನೆಪತ್‌ನಲ್ಲಿ ಬುಧವಾರ ಗುಂಡಿಕ್ಕಿ ಕೊಲೆ ಮಾಡಲಾಗಿತ್ತು. ಈ ಸುದ್ದಿ ಹರಡುತ್ತಿದ್ದಂತೆ ನಿಶಾ ದಹಿಯಾ ಕೊಲೆಯಾಗಿದೆ ಎಂಬ ವದಂತಿ ಹಬ್ಬಿತ್ತು. ಆದರೆ ನಿಶಾ ಅವರೇ ಸ್ಪಷ್ಟೀಕರಣ ನೀಡಿ ‘ನಾನು ಜೀವಂತವಾಗಿದ್ದೇನೆ’ ಎಂದು ತಿಳಿಸಿದ್ದರು.

ಗುರುವಾರದ ಕೇವಲ 30 ಸೆಕೆಂಡುಗಳಲ್ಲಿ ನಿಶಾ ಗೆಲುವು ಸಾಧಿಸಿದ್ದರು. ರೈಲ್ವೆಸನ್ನು ಪ್ರತಿನಿಧಿಸುತ್ತಿರುವ 23 ವರ್ಷದ ನಿಶಾ ಸೆಮಿಫೈನಲ್‌ನಲ್ಲಿ ಹರಿಯಾಣದ ಪ್ರಿಯಾಂಕಾ ಎದುರು ಪ್ರಯಾಸದಿಂದ ಗೆದ್ದಿದ್ದರು. ಉಳಿದಂತೆ ಎಲ್ಲ ಬೌಟ್‌ಗಳಲ್ಲಿ ಪಾರಮ್ಯ ಮೆರೆದಿದ್ದರು.

ಆಕ್ರಮಣಕಾರಿ ಆಟಕ್ಕೆ ಮೊರೆ ಹೋದ ನಿಶಾ ಅವರು ಲೆಗ್ ಅಟ್ಯಾಕ್‌ಗಳ ಮೂಲಕ ಎದುರಾಳಿಗಳನ್ನು ಕಂಗೆಡಿಸಿದ್ದರು.

ಪ್ಲೇ ಆಫ್‌ಗಳಲ್ಲಿ ಜಯ ಗಳಿಸಿದ ಶಫಾಲಿ ಮತ್ತು ಪ್ರಿಯಾಂಕ ಕಂಚಿನ ಪದಕ ಗೆದ್ದುಕೊಂಡರು. ಹರಿಯಾಣದ ಶಫಾಲಿ ಅವರನ್ನು ಜಸ್‌ಪ್ರೀತ್ 6–4ರಲ್ಲಿ ಮಣಿಸಿದರೆ ಪ್ರಿಯಾಂಕ ವಿರುದ್ಧ ನಿಶಾ 7–6ರಲ್ಲಿ ಗೆದ್ದರು.

ಮಹಿಳೆಯರ 76 ಕೆಜಿಯಲ್ಲಿ 37 ವರ್ಷದ ಗುರುಶರಣ್ ಕೌರ್ ಚಿನ್ನ ಗೆದ್ದರು. ಫೈನಲ್‌ನಲ್ಲಿ ಅವರ ಎದುರಾಳಿ ಪೂಜಾ ಸಿಹಾಗ್ ಬಲಗಾಲಿನಲ್ಲಿ ನೋವು ಕಾಣಿಸಿಕೊಂಡ ಕಾರಣ ಕಣ್ಣೀರು ಹಾಕಿ ಅರ್ಧದಲ್ಲೇ ಕಣದಿಂದ ಹೊರನಡೆದರು. 76 ಕೆಜಿ ವಿಭಾಗದಲ್ಲಿ ಪೂಜಾರ 3–1ರಲ್ಲಿ ಜಯ ಗಳಿಸಿದರು. ಗುರುಶರಣ್ ಪ್ರೀತ್ ಸುಲಭವಗಿ ಬಿಪಾಶಾ ಅವರನ್ನು ಮಣಿಸಿದರು.

‘ನಿದ್ದೆ ಮಾಡಲು ಸಾಧ್ಯವಾಗಲಿಲ್ಲ’

ನಿನ್ನೆ ’ಕೊಲೆ ಪ್ರಕರಣ‘ದಿಂದಾಗಿ ತುಂಬ ಒತ್ತಡ ಅನುಭವಿಸಿದ್ದೆ. ಸತತ ಅಭ್ಯಾಸದ ನಂತರ ತುಂಬ ಬಳಲಿದ್ದೆ. ಅದರ ಬೆನ್ನಲ್ಲೇ ಸುಳ್ಳು ವದಂತಿ ನನ್ನನ್ನು ಕಾಡಿತ್ತು. ರಾತ್ರಿ ಸರಿಯಾಗಿ ನಿದ್ದೆ ಮಾಡುವುದಕ್ಕೂ ಸಾಧ್ಯವಾಗಲಿಲ್ಲ. ಅದೇನೇ ಇರಲಿ, ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ನನ್ನ ಅಭಿಯಾನಕ್ಕೆ ಉತ್ತಮವಾಗಿ ತೆರೆ ಬಿದ್ದಿದೆ‘ ಎಂದು ನಿಶಾ ಹೇಳಿದ್ದಾರೆ.

ರಫಿಕ್‌ಗೆ ಕಂಚಿನ ಪದಕ

ದಾವಣಗೆರೆ: ಪುಣೆಯ ಭಾರತೀಯ ಸೇನೆ ಕ್ರೀಡಾ ಅಕಾಡೆಮಿಯಲ್ಲಿರುವ ಧಾರವಾಡದ ರಫಿಕ್ ಹೊಳಿ 77 ಕೆ.ಜಿ. ಗ್ರೀಕೊ ರೋಮನ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಫೈನಲ್‌ನಲ್ಲಿ ಹರಿಯಾಣದ ಸಚಿನ್ ಅವರನ್ನು 5–0ಯಲ್ಲಿ ಮಣಿಸಿದರು. ಇದರೊಂದಿಗೆ ಹರಿಯಾಣದಲ್ಲಿ ನಡೆಯಲಿರುವ ರಾಷ್ಟ್ರೀಯ ತರಬೇತಿ ಶಿಬಿರಕ್ಕೆ ಆಯ್ಕೆಯಾದರು. ಏಷ್ಯನ್ ಗೇಮ್ಸ್ ಹಾಗೂ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಕ್ರೀಡಾಪಟುಗಳಿಗೆ ಶಿಬಿರದಲ್ಲಿ ತರಬೇತಿ ನೀಡಲಾಗುತ್ತದೆ.


ರಫಿಕ್ ಹೊಳಿ

ಸೇಲಿಂಗ್: ನೇತ್ರಾಗೆ ಚಿನ್ನ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಯನ್ ನೇತ್ರಾ ಕುಮನನ್ ಸ್ಪೇನ್‌ನಲ್ಲಿ ನಡೆದ ಗ್ರಾನ್ ಕೆನರಿಯಾ ಸೇಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು.

ಯುರೋಪಿಯನ್ ರೀಜನಲ್ ಓಪನ್ ಸ್ಪರ್ಧೆಗಳ ಭಾಗವಾಗಿರುವ ಈ ಚಾಂಪಿಯನ್‌ಷಿಪ್‌ನಲ್ಲಿ 24 ವರ್ಷದ ನೇತ್ರಾ ಸಾಧನೆ ಮಾಡಿದ್ದಾರೆ.

ಲೇಸರ್ ರೇಡಿಯಲ್ ವಿಭಾಗದಲ್ಲಿ ಅವರು ಮೊದಲಿಗರಾದರು. ಹೋದ ವಾರ ನಡೆದಿದ್ದ ಐಎಲ್‌ಸಿಎ –6 ವಿಭಾಗದ ಆರು ರೇಸ್‌ಗಳ ಪೈಕಿ ಮೂರರಲ್ಲಿ ಗೆದ್ದು 10 ನೆಟ್ ಪಾಯಿಂಟ್ಸ್ ಗಳಿಸಿದರು. ಆತಿಥೇಯ ಸ್ಪೇನ್ ದೇಶದ ಬೆನೆಟೊ ಲ್ಯಾಂಚೊ ಮತ್ತು ಮಾರ್ಟಿನಾ ರೀನೊ ಕ್ಯಾಚೊ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

‘ಸೇಲರ್ ನೇತ್ರಾ ಅವರು ಗ್ರಾನ್ ಕನೆರಿಯಾ ಸೇಲಿಂಗ್ ಚಾಂಪಿ ಯನ್ ಷಿಪ್‌ನ ಲೇಸರ್ ರೇಡಿಯಲ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿ ದ್ದಾರೆ. ಅಭಿನಂದನೆಗಳು‘ ಎಂದು ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಟ್ವೀಟ್ ಮಾಡಿದೆ. ’ಮೂರು ದೇಶಗಳ 20 ಸ್ಪರ್ಧಿಗಳು ಇದ್ದರು. ಅದರಲ್ಲಿ ಮೂವರು ಒಲಿಂಪಿಯನ್ನರಿದ್ದರು. ಆರು ರೇಸ್‌ಗಳ ಪೈಕಿ ಮೂರರಲ್ಲಿ ಮೊದಲಿಗರಾದ ಅವರು, ಇನ್ನೆರಡು ಸ್ಪರ್ಧೆಗಳಲ್ಲಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದರು’ ಎಂದರು. ಟೋಕಿಯೊ ಒಲಿಂಪಿಕ್ಸ್‌ನ ಲೇಸರ್ ರೇಡಿಯಲ್ ಕ್ಲಾಸ್‌ನಲ್ಲಿ 35ನೇ ಸ್ಥಾನ ಪಡೆದಿದ್ದರು.



ನೇತ್ರಾ ಕುಮನನ್ –ಫೇಸ್‌ಬುಕ್ ಚಿತ್ರ


ಟ್ರ್ಯಾಕ್–ಫೀಲ್ಡ್‌ನ ‘ರವಿ’ ಅಸ್ತಂಗತ

ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ಬೆಳಕಿಗೆ ತಂದ ಅಥ್ಲೆಟಿಕ್ ಕೋಚ್

ಬೆಂಗಳೂರು: ಕರ್ನಾಟಕದಲ್ಲಿ ಅನೇಕ ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ಬೆಳೆಸಿದ ಅಥ್ಲೆಟಿಕ್ ಕೋಚ್ ರವಿ ಅಣ್ಣಪ್ಪ (53) ಗುರುವಾರ ಮುಂಜಾನೆ ನಗರದ ಸ್ವಗೃಹದಲ್ಲಿ ನಿಧನರಾದರು. ಅವರಿಗೆ ತಾಯಿ, ಪತ್ನಿ, ಪುತ್ರಿ ಇದ್ದಾರೆ.

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಎಡವನಹಳ್ಳಿಯವರಾದ ರವಿ ಜನಿಸಿದ್ದು ತಾಯಿಯ ತವರು ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ. ಅಥ್ಲೀಟ್ ಆಗಿದ್ದ ರವಿ ಆರಂಭದಲ್ಲಿ ಮೂಡಬಿದಿರೆ ಆಳ್ವಾಸ್‌ನ ಏಕಲವ್ಯ ಕ್ಲಬ್‌ನಲ್ಲಿ ತರಬೇತಿ ಪಡೆದಿದ್ದರು.

ರಾಷ್ಟ್ರಮಟ್ಟದಲ್ಲಿ 110 ಮೀಟರ್ಸ್ ಹರ್ಡಲ್ಸ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕೋಚ್ ಆಗಿ ನೇಮಕಗೊಂಡ ನಂತರ ಕೊಡಗು, ಬೆಂಗಳೂರಿನ ವಿದ್ಯಾನಗರ, ಕಂಠೀರವ ಕ್ರೀಡಾಂಗಣದಲ್ಲಿ ತರಬೇತಿ ನೀಡಿದ್ದಾರೆ.


ರವಿ ಅಣ್ಣಪ್ಪ

ಇಲಾಖೆಯನ್ನು ತೊರೆದು ಎರಡು ವರ್ಷ ಮೂಡಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಕೋಚ್ ಆಗಿದ್ದರು. ವಾಪಸ್ ಬೆಂಗಳೂರಿಗೆ ಬಂದು ಗುತ್ತಿಗೆ ಆಧಾರದಲ್ಲಿ ಇಲಾಖೆಯ ಸೇವೆಗೆ ಸೇರಿದರು. ಈ ಸಂದರ್ಭದಲ್ಲಿ ಮೈಸೂರು ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿದ್ದರು. ಈಚೆಗೆ ಕೆಲವು ತಿಂಗಳಿಂದ ಅನಾರೋಗ್ಯ ಕಾಡಿತ್ತು.

ಅವರ ಅಂತ್ಯಸಂಸ್ಕಾರ ಎಡವನಹಳ್ಳಿಯಲ್ಲಿ ಸಂಜೆ ನಡೆಯಿತು ಎಂದು ಸಹೋದರ ಶ್ರೀಧರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಅವರ ಬಳಿ ತರಬೇತಿ ಪಡೆದಿರುವ ಅನೇಕರು ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಮಿಂಚಿದ್ದಾರೆ. ಅಂತರರಾಷ್ಟ್ರೀಯ ಅಥ್ಲೀಟ್‌ಗಳಾದ ವಿಲಾಸ್ ನೀಲಗುಂದ, ರೆಬೆಕಾ ಜೋಸ್, ಎಚ್.ಎಂ.ಜ್ಯೋತಿ, ಶರತ್‌ರಾಜ್, ಮಂಜುನಾಥ್ ಗೋಡಿ, ಮೊಹಮ್ಮದ್ ಮುದಸ್ಸಿರ್, ಜೀವನ್ ಗೌಡ, ಪರಮೇಶ್ವರ್, ಬಿ.ಜಿ.ನಾಗರಾಜ್, ಜಿ.ಡಿ.ಗೌರಮ್ಮ ಮತ್ತಿತರು ಅವರ ಶಿಷ್ಯಂದಿರಲ್ಲಿ ಪ್ರಮುಖರು.

’ನನ್ನೊಂದಿಗೆ ಮೊದಲ ತಂಡದಲ್ಲಿದ್ದ ಎಲ್ಲರೂ ರಾಷ್ಟ್ರಮಟ್ಟದಲ್ಲಿ ಚಿನ್ನ ಗೆದ್ದಿದ್ದರು. ಬಹತೇಕರು ಅಂತರರಾಷ್ಟ್ರೀಯ ಮಟ್ಟದಲ್ಲೂ ಬೆಳಗಿದ್ದಾರೆ. ಕರ್ನಾಟಕದ ಅಪರೂಪದ ಅಥ್ಲೆಟಿಕ್ ಕೋಚ್‌ಗಳಲ್ಲಿ ಒಬ್ಬರಾಗಿದ್ದರು ಅವರು‘ ಎಂದು ಹುಬ್ಬಳ್ಳಿಯಲ್ಲಿ ಕೋಚ್ ಆಗಿರುವ ವಿಲಾಸ ನೀಲಗುಂದ ಅಭಿಪ್ರಾಯಪಟ್ಟರು.

ವಿಶ್ವ ಯೋಗಾಸನಕ್ಕೆ ಭಾರತ ಆತಿಥ್ಯ

ನವದೆಹಲಿ (ಪಿಟಿಐ): ಮೊಟ್ಟಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್ ಮುಂದಿನ ವರ್ಷದ ಜೂನ್‌ನಲ್ಲಿ ಭಾರತದಲ್ಲಿ ನಡೆಯಲಿದೆ. ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಫೆಡರೇಷನ್ ಈ ನಿಟ್ಟಿನಲ್ಲಿ ಚಟುವಟಿಕೆ ಆರಂಭಿಸಿದೆ.

ಭುವನೇಶ್ವರದಲ್ಲಿ ನಡೆಯಲಿರುವ ಮೊದಲ ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಚಾಂಪಿಯ ನ್‌ಷಿಪ್ ಉದ್ಘಾಟಿಸಿದ ಎನ್‌ವೈಎಸ್‌ಎಫ್ ಅಧ್ಯಕ್ಷ ಉದಿತ್ ಶೇಠ್ ಈ ವಿಷಯ ತಿಳಿಸಿದರು.

2021ರ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಯೋಗ ಸ್ಪರ್ಧೆಯನ್ನು ಸೇರ್ಪಡೆ ಮಾಡಲಾಗಿದೆ.

‘ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಬೇರೆ ಬೇರೆ ರಾಜ್ಯಗಳಿಂದ ಬಹಳಷ್ಟು ಸಂಖ್ಯೆಯಲ್ಲಿ ಸ್ಪರ್ಧಿಗಳು ಬಂದಿದ್ದಾರೆ. ಪ್ರತಿಭಾವಂತ ಯೋಗಪಟುಗಳು, ತರಬೇತುದಾರರು ಮತ್ತು ಪರಿಣತರು ಇದ್ದಾರೆ. ಯೋಗವು ಕ್ರೀಡೆಯಾಗಿ ವಿಶ್ವಮಟ್ಟದಲ್ಲಿ ಜನಪ್ರಿಯತೆ ಗಳಿಸುವುದು ಖಚಿತ’ ಎಂದು ಶೇಠ್ ಹೇಳಿದರು.